ಶ್ರೀ ಎಂ.ಮಹದೇವ್:- ಈ ಕೆ.ಎಸ್.ಆರ್.ಟಿ.ಸಿ.ಗೆ ಡ್ರೈವರ್‌ಗಳನ್ನು ನೇಮಕ ಮಾಡುವಾಗ ಸರಿಯಾದ ಬಸ್ಸ್ ಡ್ರೈವರ್‌ಗಳನ್ನು ನೇಮಕ ಮಾಡಿಕೊಳ್ಳಿ. ಯಾರದೋ ಸರ್ಟಿಫಿಕೇಟ್ ತೆಗೆದುಕೊಂಡು ಯಾರದೋ ಒಂದು ಪ್ರಭಾವದಲ್ಲಿ ಬಂದು ನಮಗೆ ಡ್ರೈವರ್ ಕೆಲಸ ಕೊಡಿ ಎಂದವರಿಗೆ ಕೊಟ್ಟರೆ ಹಾಗೂ ಅನುಭವ ಇಲ್ಲದೇ ಇರುವ ಹೊಸಬರಿಗೆ ಕೊಟ್ಟರೆ ಕಷ್ಟವಾಗುತ್ತದೆ. ಹದಿನೈದು ದಿವಸ ಸಹ ಡ್ರೈವಿಂಗ್ ಮಾಡಿ ಗೊತ್ತಿರುವುದಿಲ್ಲ. ಎಲ್ಲಿಂದಲೋ ಸರ್ಟಿಫಿಕೇಟ್ ತೆಗೆದುಕೊಂಡು ಬಂದುಬಿಡುತ್ತಾರೆ. ಅದನ್ನು ನೋಡಿಕೊಂಡು ಶಿಫಾರಸ್ಸಿನ ಮೇಲೆ ತಾವು ಕೆಲಸ ಕೊಟ್ಟರೆ ನಮ್ಮ ಜೀವ ಎಲ್ಲಾ ಅವರ ಹತ್ತಿರ ಕೊಟ್ಟಿರುತ್ತೇವೆ. ಅವರು ಮನಸ್ಸಿಗೆ ಬಂದ ಹಾಗೆ ಡ್ರೈವಿಂಗ್ ಮಾಡಿದರೆ ಬಹಳ ಕಷ್ಟವಾಗುತ್ತದೆ. ಆದ್ದರಿಂದ ಡ್ರೈವರ್ ಹಿನ್ನೆಲೆ ನೋಡಿ ಅಪಾಯಿಂಟ್‌ಮೆಂಟ್ ಕೊಡಬೇಕು ಎಂಬುದು ಒಂದು. ಮತ್ತು ಗಾಡಿಗಳನ್ನು ಡಿಪೋದಿಂದ ಹೊರಗಡೆ ತರಬೇಕಾದರೆ ಅದನ್ನು ಸರಿಯಾಗಿ ಚೆಕ್ ಮಾಡಿ ವ್ಯವಸ್ಥೆ ಮಾಡಿ ಕಳುಹಿಸಿಕೊಡಬೇಕು. ಅದು ಮಾಡಬೇಕಾದರೆ ಅಲ್ಲಿ ಮೆಕ್ಯಾನಿಕ್ ಯಾರಿದ್ದಾರೆ ಅವರಿಗೆ ಮಾಮೂಲು ಕೊಡಬೇಕಂತೆ. ಒಳ್ಳೆಯ ಗಾಡಿ ಗ್ಯಾರೇಜ್‌ನಿಂದ ಹೊರ ಬರಬೇಕಾದರೆ ಮ್ಯಾನೇಜರ್‌ಗೋ ಯಾರಿಗೋ ಸಾಕಾದಷ್ಟು ಸತ್ಕಾರ ಮಾಡಿದರೆ ಮಾತ್ರ ಅವನು ಒಳ್ಳೆಯ ಗಾಡಿ ಕೊಡುತ್ತಾನೆ. ಇಲ್ಲದಿದ್ದರೆ ಸರಿಯಾದ ಗಾಡಿ ಕೊಡುವುದಿಲ್ಲ. ಮಧ್ಯೆ ರಿಪೇರಿಗೆ ನಿಲ್ಲುತ್ತದೆ. ಇಂಥ ಪರಿಸ್ಥಿತಿಯನ್ನು ಸರಿ ಮಾಡಬೇಕು. ಹಳೇ ಬಸ್ಸುಗಳನ್ನು ಲಾಂಗ್ ರೂಟ್‌ಗಳಲ್ಲಿ ಹಾಕಬೇಡಿ. ಟೈರ್ ಎಲ್ಲಾ ಕೆಟ್ಟು ಚಾರ್ಸಿ ಎಲ್ಲಾ ಹೋಗಿರತಕ್ಕ ಬಸ್ಸುಗಳನ್ನು ಹಾಕಬೇಡಿ. ಹೊಸ ಬಸ್ಸುಗಳನ್ನು ಕಳುಹಿಸಿಕೊಡಿ. ನಂಜನಗೂಡಿಗೆ ಬಸ್ಸುಗಳನ್ನು ಸರಿಯಾಗಿ ಕಳುಹಿಸುತ್ತಿಲ್ಲ. ಬೆಂಗಳೂರು-ನಂಜನಗೂಡಿಗೆ ಸರಿಯಾದ ಬಸ್ ವ್ಯವಸ್ಥೆಯನ್ನು ಮಾಡಿಕೊಡಿ.

ಶ್ರೀ.ಜಿ.ರಾಜುಗೌಡ:- ಮೈಸೂರು ಜಿಲ್ಲೆಯಲ್ಲಿ ಎಲ್ಲೆಲ್ಲಿ ರಿಸರ್ವ್ ಕ್ಷೇತ್ರ ಇದೆಯೋ ಅಲ್ಲಿ ಬಸ್ ಸ್ಟ್ಯಾಂಡೂ ಇಲ್ಲ ಬಸ್ ಡಿಪೋನೂ ಇಲ್ಲ. ದಯಮಾಡಿ ಕೊಳ್ಳೇಗಾಲ. ಸಂತೇಮಾರನಹಳ್ಳಿ ಮತ್ತು ಟಿ.ನರಸೀಪುರದಲ್ಲಿ 1992-93ನೇ ಸಾಲಿನಲ್ಲಿ ಬಸ್ ಡಿಪೋ ಮತ್ತು ಬಸ್ ಸ್ಟ್ಯಾಂಡ್ ಮಾಡುವುದಕ್ಕೆ ವ್ಯವಸ್ಥೆ ಮಾಡುತೀರಾ? ನಾವು ಸಾಕಷ್ಟು ಜಮೀನು ಕೊಡುತ್ತೇವೆ. ದಯಮಾಡಿ ಇದಕ್ಕೆ ತಾವು ಉತ್ತರ ಹೇಳಬೇಕು.

ಶ್ರೀ ಅಜೀಜ್ ಸೇಟ್:- ಮಾನ್ಯ ಅಧ್ಯಕ್ಷಿಣಿಯವರೇ, Not all that well ಎಂದು ನಾನು ಮೊದಲೇ ಹೇಳಿದೆ. ಹಾಗೆ ಹೇಳಿದರೆ. ಚಿಕ್ಕ ಪುಟ್ಟ ಕಂಪ್ಲೇಟ್ ಎಲ್ಲಾ ಇದೆ. 4 ದಿವಸ ಹಾಕುವುದು. ತೆಗೆಯುವುದು, ನೇಟಿವ್‌ಪ್ಲೇಸ್‌ಗೆ ಡ್ರೈವರ್ ಹಾಕುವುದು, ಇದೆಲ್ಲಾ ಒಪ್ಪಿದ್ದೇವೆ. ಎಂದಮೇಲೆ ಇಷ್ಟೆಲ್ಲಾ ಏಕೆ ಚರ್ಚೆ ಮಾಡಬೇಕೆಂದು ಹೇಳಿ ಒಂದು ವರ್ಡ್‌ನಲ್ಲೇ ಹೇಳಿದೆ. All is not well. We are not going to leave it at that. We are going to rectify. We are going to correct

and give them a shape. ಕೆ.ಎಸ್.ಆರ್.ಟಿ.ಸಿ.ಗೆ ಬುದ್ಧಿ ಬರಲಿ ಪ್ರೈವಟೈಸೇಷನ್ ವಿಚಾರವನ್ನೂ ಮಾತನಾಡುತ್ತಿದ್ದೇವೆ. ಮಾನ್ಯ ವಿಶ್ವನಾಥ್ ಅವರು ಮಾತನಾಡುತ್ತಾ, ಈ ಮಿನಿಸ್ಟರ್ ಪ್ರೈವಟೈಸೇಷನ್ ತರುತ್ತೇನೆಂದು ಹೇಳುತ್ತಿದ್ದು, ಛೇರ್ಮನ್ ಅವರು ಅದನ್ನು ಮಾಡುತ್ತಿಲ್ಲವೆಂದು ಹೇಳುತ್ತಿದ್ದಾರೆ. ಇದನ್ನು ನೋಡಿದರೆ ಇವರಲ್ಲೇ ಭಿನ್ನಾಭಿಪ್ರಾಯ ಇದೆ ಎಂದು ಕಾಣುತ್ತದೆ ಎಂದು ಹೇಳಿದರು. ಅದು ಹಾಗೆ ಅಲ್ಲ. ನಾನು ಆ ಜಾಗದಲ್ಲಿ ಛೇರ್ಮನ್ ಆಗಿದ್ದರೂ ನಾವು ಮಾಡುವುದಿಲ್ಲ ಎಂದು ಹೇಳುತ್ತೇನೆ. ಏಕೆಂದರೆ, I am in that organisation. Now I am not in that organisation. As a Minister for Transport, KSRTC is nothing but a bigger operator to me like any other operator. ಒಬ್ಬ 20 ಬಸ್ ಇಟ್ಟಿರಬಹುದು, ಒಬ್ಬ 100 ಬಸ್ ಇಟ್ಟಿರಬಹುದು. ಇವರು 2ಸಾವಿರ ಬಸ್‌ಗಳನ್ನು ಇಟ್ಟಿದ್ದಾರೆ. KSRTC is nothing but an operator to me. So, I have to take the interest of the commuters and their welfare. ಅವರ ವೆಲ್‌ಫೇರ್‌ನ್ನೂ ಸಹಾ ನಾವು ನೋಡಬೇಕಾಗುತ್ತದೆ. ದೇವರಾಜು ಅವರು ಛೇರ್ಮನ್‌ಸ್ಥಾನದಲ್ಲಿರುವಾಗ ಅವರು ಹಾಗೆ ಹೇಳಲೇಬೇಕು. ಇದರಲ್ಲಿ ಭಿನ್ನಾಭಿಪ್ರಾಯ ಇದೆ ಎಂದರೆ ಅದು ತಪ್ಪು. ದಯವಿಟ್ಟು ಯಾರೂ ಕೂಡಾ ಇದನ್ನು ಭಿನ್ನಾಭಿಪ್ರಾಯ ಎಂದು ತಿಳಿದುಕೊಳ್ಳಬಾರದು. ಮಾನ್ಯ ಹರ್ಷಕುಮಾರ ಗೌಡ ಅವರು ಮೈಸೂರು ನಗರದ ಬಸ್ ಸ್ಟಾಂಡ್ ಚಿಕ್ಕದಾಗಿದ್ದು ಇದನ್ನು ಇಂಟರ್‌ನ್ಯಾಷನಲ್‌ಮಟ್ಟಕ್ಕೆ ತರಬೇಕೆಂದು ಹೇಳಿದರು. ಈಗ ಅಲ್ಲಿ ಜೆಕೆ ಗ್ರೌಂಡ್ ಜಾಗ ಏನಿದೆ ಅದನ್ನು ತಾವು ಕೊಡಿಸಿಕೊಡಿ. ಆ ಜಾಗದಲ್ಲಿ ಬಸ್‌ಸ್ಟಾಂಡ್ ಮಾಡುವ ಬಗ್ಗೆ ನಾನು ಈಗಾಗಲೇ ಮಾತುಕತೆ ಮಾಡಿದಾಗ ಆಗಲೇ ಅಲ್ಲಿನ ಮೆಡಿಕಲ್ ಕಾಲೇಜ್ ಸ್ಟೂಡೆಂಟ್ಸ್‌ನ ವಿರುದ್ಧ ಅಭಿಪ್ರಾಯ ಬಂದಿದೆ. ಈಗಾಗಲೇ ಅಲ್ಲಿನ ಮೆಡಿಕಲ್ ಕಾಲೇಜು ಪ್ಯಾಲೆಸ್ ಗ್ರೌಂಡ್‌ನಲ್ಲಿ ಇರುವುದರಿಂದ ಸ್ಟಾಲ್ಸನ್ನು ಡಿಮಾಲಿಷ್ ಮಾಡಿ ಅಲ್ಲೇ ಗ್ರೌಂಡ್ ಮಾಡಬಹುದು. ತಾವು ಸ್ಟೂಡೆಂಟ್ಸ್ ಹತ್ತಿರ ಹೋಗಿ ಮಾತನಾಡಿ ಪ್ರಯತ್ನ ಮಾಡಿ ಜೆಕೆ ಗ್ರೌಂಡ್ ಕೊಡಿಸಿದರೆ , ನಾವು ಅಲ್ಲಿ ಮಾಡುತ್ತೇವೆ. ಇಲ್ಲದಿದ್ದರೆ ಪೀಪಲ್ಸ್ ಪಾರ್ಕ್‌ನಲ್ಲಿ ಬಸ್‌ಸ್ಟಾಂಡ್ ಮಾಡುವ ಬಗ್ಗೆ ಯೋಚನೆ ಮಾಡುತ್ತಿದ್ದೇವೆ. ಆದರೆ ಜೆಕೆ ಗ್ರೌಂಡ್ ಸಿಕ್ಕರೆ ಬಹಳ ಒಳ್ಳೆಯದು. We can have a tunnel from JK Grounds to the Railways Station also. That intention is there. But, I don't want to create unnecessary bad debt. ಮಾನ್ಯ ಇದಿನಬ್ಬ ಅವರು ವಕ್ಫ್ ಬೋರ್ಡ್‌ನಲ್ಲಿ ಮನಸ್ಸು ಬಂದ ಹಾಗೆ ಕಮಿಟಿಗಳನ್ನು ಮಾಡಿದ್ದಾರೆಂದು ಹೇಳಿದರು. ಹಾಗೇ ಮಾನ್ಯ ಹರ್ಷಕುಮಾರಗೌಡ ಅವರು ಮಾತನಾಡಿ ಮೈಸೂರು ಡಿಸ್ಟ್ರಿಕ್ಟ್‌ಗೆ ಒಂದು ಕಮಿಟಿ ಮಾಡಿ ಛೇರ್ಮನ್ ಮಾಡಿದ್ದಾರೆ ಎಂದು ಹೇಳಿದರು. ಈ ಬಗ್ಗೆ ನಾನು ಇದೇ ಸದನದಲ್ಲಿ ಹೇಳಿದ್ದೇನೆ, ಏನೆಂದರೆ, Wakf Board is an autonomous body and we are trying all our best for all acts and deeds which are not in the interest of the Board which have been played by the present Chairman and the members. We have issued show cause notice. We are trying to take action and I don't want to go beyond that and there an Appeal also being admitted in the Division Bench of the High Court. So, I would like to leave the matters at that But, I assure you that we are not sleeping and we are not closing our eyes. ಮತ್ತೆ ಮಾನ್ಯ ಸದಸ್ಯರು ಪುತ್ತೂರಿನ ಬಗ್ಗೆ ಕೇಳಿದರು. ಏಆರ್‌ಟಿ ಆಫೀಸ್ ಪುತ್ತೂರಿನಲ್ಲಿ ಇರೋದನ್ನು ನಾವು ಅಪ್‌ಗ್ರೇಡ್ ಮಾಡುತ್ತಿದ್ದೇವೆ. ಅದರಿಂದಾಗಿ ಅಲ್ಲಿ ಆರ್‌ಟಿಓ ಆಫೀಸ್ ಮಾಡುವ ಪ್ರಸ್ತಾವನೆ ಈಗ ಸಧ್ಯಕ್ಕೆ ಇಲ್ಲ. ಮತ್ತು ಹಿಂದೆ ಕೆಲವು ಮೆಂಬರ್ಸ್ ಹೇಳಿದರು , ಡಿವಿಜಿನಲ್ ಆಫೀಸ್ ಲೆವೆಲ್‌ನಲ್ಲಿ

ಕನ್‌ಸಲ್‌ಟೇಟಿವ್ ಕಮಿಟಿ ಇತ್ತು ಅಂತ. I think, I would consider that and bring those, what is called, consultative committees or advisory committees into each division, because there will be immediate repport between the representatives and the authorities there. ಮಾನ್ಯ ವೆಂಕಟಪ್ಪನವರು ಮುಳಬಾಗಿಲು ಕ್ಷೇತ್ರದಲ್ಲಿ ಬಸಸ್ ಸರಿಯಾಗಿ ಓಡಾಡುತ್ತಿಲ್ಲ, ರೈತರು ರಸ್ತೆ ರೊಖೋ ಚಳುವಳಿ ಮಾಡಬೇಕೆಂದು ಹೊರಟಿದ್ದಾರೆಂದು ಹೇಳಿದರು. ನಾನು ನಿನ್ನೆ ಅಪೀಲ್ ಮಾಡಿದ್ದೇನೆ. ನಾನು ಇಲ್ಲಿಂದ ಆರ್.ಎಂ. ಮತ್ತು ಡಿಸಿ ಅವರನ್ನು ಕಳುಹಿಸುತ್ತಿದ್ದೇನೆ. ಅಲ್ಲೇನು ಪ್ರಾಬ್ಲಮ್ಸ್ ಇದೆ ಅದನ್ನು ಸಾಲ್ವ ಮಾಡಬೇಕೆಂದು ನಾನು ಅವರನ್ನು ಕಳುಹಿಸುತ್ತಿದ್ದೇನೆ. My information last night is that most of the points are implemented. But, now my friend Sri Venkatappa tells me that to-day morning, since it is not being implemented, rasta roko is going on. I assure you that I am sending my CTM to-day and I will take action against the DC and give you a better D.C to implement what we have agreed. It is our bounden duty and wherever we have routes, we have to ply. Otherwise, the person in charge will have to face very seriously about the charges.

ಶ್ರೀ ಎಂ.ವಿ.ವೆಂಕಟಪ್ಪ:- ಇಂಪ್ಲಿಮೆಂಟ್ ಮಾಡದಿದ್ದರೆ ನಿಮ್ಮ ಮನೆಯ ಹತ್ತಿರ ಧರಣಿ ಮಾಡಬಹುದು ತಾನೇ?

ಶ್ರೀ ಅಜೀಜ್ ಸೇಠ್:- ಧರಣಿ ಮಾಡುವುದು ಬೇಡ. ನಾಳೆ ಸಿಟಿಎಂ ಕಳುಹಿಸಿ. I will see that a notice is served on the DC and call for explanation and take action. If necessary, we will suspend him also. ಮಾನ್ಯ ಸದಸ್ಯರಾದ ಬಾಬುರಾವ್ ಚವಾಣ್‌ರವರು ನೇಟಿವ್‌ಪ್ಲೇಸಸ್‌ಗಳಿಗೆ ಡ್ರೈವರ್ಸ್ ಮತ್ತು ಕಂಡಕ್ಟರ್‌ಗಳನ್ನು ಹಾಕಬಾರದೆಂದು ಹೇಳುತ್ತಿದ್ದಾರೆ. I think there is a point in it, because ಅಂತಹ ಕೇಸ್‌ಗಳು ನನ್ನ ಗಮನಕ್ಕೆ ಬಂದಿವೆ. ನೇಟಿವ್‌ಪ್ಲೇಸಸ್‌ನವರನ್ನು ಹಾಕಿದರೆ ಅವರು ಸರಿಯಾಗಿ ಡ್ಯೂಟಿ ಮಾಡುವುದಿಲ್ಲ they will take the liberty. Therefore, we will see that we will change that attitude.

Dr. N. B. NANJAPPA:- Total nationalisation, you have done in our district. That means, it is your responsibility to see each and every village will get transport facilities. That is all I want. There is no other vehicle plying there.

SRI AZEEZ SAIT:- I will come back to you what Dr. Nanjappa is saying, I agree Dr. Nanjappa will agree along with the other Members who have similar complaints about the shortage of buses. I have buses. How could I man it without drivers and conductors? Yes. Why don't you bear with me? Doctor, you are aware that when we wanted to appoint through Employment Exchanges, in CLP there was hu and cry that the rural folk will not get into KSRTC. Therefore,

modalities of the recruitment should be changed. Then certain things were changed. Two non-official members were supposed to come on the committee. Again when the list was ready and time to go for recruitment, then the stay order came in saying that 5 members should be on the Board. We said alright, Then there were lot of complaints coming right round to me saying that my conductor's post will cost Rs.25,000 to Rs.30,000 each. I had to go into details to see what is called that the conductors to be appointed have to pay Rs.30,000. So, I found that there were interview marks of 25 which could be flouted. So, I have done away with the 25 marks. Now, no interview marks at all. Interview is as simple as this: on the passing marks of candidates, who is highest, he will get a job, after some oral testing. Suppose two persons of equal marks are there; among them, one who is elder, he will get the job. As far as drivers are concerned, there are no interviews and there is a strict acid test. After the overall selection, I have told the KSRTC that so selected persons should be got verified about their antecedents through the police in order to bring certain discipline. Regarding shortage of buses, it is only because of this acute shortage of drivers and conductors. I will take note of Doctor's suggestion that since it is a nationalised pocket also, whatever problems you have, that will get easced. Regarding bus-stands, buses, I tell you again with folded hands, that these are all day-to-day matters. Whatever you have to say, you may please send it to me or KSRTC Chairman or Vice-Chairman. Now, I am not prepared to reply to each individual.

I have told you about depots. If it is needed, if it is required, then only, that will be thought of. No allotment of depots on political basis. No bus stations in place of bus shelters will be given. Strictly it will go according to the policy. With these words, I once again thank all the Members.

ಶ್ರೀ ಎಂ. ಮಹದೇವ್:- ಡ್ರೈವರ್ಸ್ ಬಗ್ಗೆ ಉತ್ತರ ಹೇಳಲಿಲ್ಲ.

SRI AZEEZ SAIT:- Do you understand what is acid test? Strict test.

ಶ್ರೀ.ಅಂಜನಾಮೂರ್ತಿ:- ಖಾಸಗಿ ಬಸ್ಸಿನವರು ನೀವು ಕೊಟ್ಟಂಥ ಪರ್ಮಿಟ್ ರೂಟ್ ಬಿಟ್ಟು ಬೇರೆ ಕಡೆ ಓಡಿಸುತ್ತಿದ್ದಾರೆ. ಇದಕ್ಕೇನು ಹೇಳುತ್ತೀರಿ?

SRI AZEEZ SAIT:- As regards private operators taking

permits and not running buses on these routes, but running on national highways, I will ask my Transport Department to take strict action and to seize those buses. Not only that.........

ಶ್ರೀ.ಆರ್. ದಯಾನಂದರಾವ್:- ಇಷ್ಟು ದಿವಸ ಏನು ಮಾಡುತ್ತಿದ್ದಿರಿ?

SRI AZEEZ SAIT:- Please, please. I am on my legs. Not only that. It has come to my notice that some of the operators have taken additional permits and locked it without plying any buses. I have asked my Transport Commissioner to issue notices and cancel those permits to those operators who have taken and not operating.

ಉಪಾಧ್ಯಕ್ಷಿಣಿಯವರು:- ಸಮಾಜ ಕಲ್ಯಾಣ ಮಂತ್ರಿಗಳು ಈಗ ತಮ್ಮ ಉತ್ತರವನ್ನು ಪ್ರಾರಂಭ ಮಾಡಬಹುದು.

ಸಮಾಜ ಕಲ್ಯಾಣ ಸಚಿವರಿಂದ ಉತ್ತರ

+ ಶ್ರೀ ಬಿ.ಶಿವಣ್ಣ (ಸಮಾಜ ಕಲ್ಯಾಣ ಮಂತ್ರಿ) :- ಸನ್ಮಾನ್ಯ ಉಪಾಧ್ಯಕ್ಷರೇ, ನನ್ನ ಇಲಾಖೆಗೆ ಸಂಬಂಧಪಟ್ಟಂಥ ಸಮಾಜ ಕಲ್ಯಾಣ ಇಲಾಖೆಯ ಬೇಡಿಕೆಗಳ ಮೇಲೆ 12 ಜನ ಶಾಸಕರ ಸ್ನೇಹಿತರು ಮಾತನಾಡಿ ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದಾರೆ. ಅದೇ ಪ್ರಕಾರ ಈ ಇಲಾಖೆಯ ಬಗ್ಗೆ ಟೀಕೆ ಟಿಪ್ಪಣಿಗಳನ್ನು ಮಾಡಿದ್ದಾರೆ. ಹೀಗಾಗಿ ಅವರುಗಳು ಸಾಕಷ್ಟು ಈ ಇಲಾಖೆಯ ಬಗ್ಗೆ ವಿಸ್ತಾರವಾಗಿ ತಮ್ಮ ಭಾಷಣಗಳಲ್ಲಿ ಹೇಳಿದ್ದಾರೆ. ಸಮಾಜಕಲ್ಯಾಣದ ಬಗ್ಗೆ ವಿಶೇಷವಾಗಿ ಮಾತನಾಡಬೇಕಾಗಿದ್ದರೆ ನಾವು ಭಾರತ ದೇಶದ ಸಂವಿಧಾನವನ್ನು ಸ್ವಲ್ಪಮಟ್ಟಿಗೆ ರೆಫರ್ ಮಾಡತಕ್ಕಂಥ ಸಂದರ್ಭ ಬರುತ್ತದೆ ಎಂದು ಹೇಳ ಬೇಕಾಗುತ್ತದೆ. ಸಂಪೂರ್ಣವಾದ ಸಮಾಜ ಕಲ್ಯಾಣ ಆಗಬೇಕು ಎಂದರೆ ಎಲ್ಲಾ ವರ್ಗಗಳು, ಎಲ್ಲಾ ಧರ್ಮಗಳು ಇರುವ ಈ ದೇಶದಲ್ಲಿ ಇರುವಂಥ ಜನತೆಗೆ ಸಹಾಯ ಮಾಡುವಂಥ ಕೆಲಸ ಆಗಬೇಕು. ಈಗ ಈ ದೇಶದ ಸಂವಿಧಾನದ ಪ್ರಿಯಾಂಬಲ್‌ನಲ್ಲೇ ಹೇಳಲಾಗಿದೆ. ಏನೆಂದರೆ ನಮ್ಮದು ವೆಲ್‌ಫೇರ್ ಸ್ಟೇಟ್ಸ್ ಎಂದು. ಇದಕ್ಕೆ ನಾವು ಕಮಿಟ್ ಆಗಿರುವುದು. ಅಂದರೆ ಅದರ ಅರ್ಥ, ಈ ಸಮಾಜ ಅಸಮಾನವಾಗಿ ಎಲ್ಲಾ ಜಾತಿ, ಧರ್ಮಗಳಲ್ಲಿ ವಿಭಜನೆಯಾಗಿ, ಶ್ರೀಮಂತರು ಬಡವರು ಎಂಬ ಬೇಧಭಾವ ಮತ್ತು ಅಸ್ಪೃಷ್ಯರು ಮತ್ತು ಇತರ ಜಾತಿಗಳ ಅಂತರ ಇದನ್ನು ಸಮ ಸಮಾಜದಲ್ಲಿ ನೋಡಿಕೊಂಡು ಬರುತ್ತಿದ್ದೇವೆ. ಭಾರತದೇಶದ ಸಂವಿಧಾನವನ್ನು ನೋಡುವಂಥ ಕಾಲದಲ್ಲಿ, ಡಾಃ ಬಾಬಾಸಾಹೇಬ ಅಂಬೇಡ್ಕರ್ ಅವರನ್ನು ನಾವು ನೆನೆಯಬೇಕಾಗುತ್ತದೆ. ಮಹಾತ್ಮಾ ಗಾಂಧೀಜಿಯವರು, ನೆಹರೂಜಿಯವರು, ವಲ್ಲಭಾಯ್ ಪಟೇಲರು, ನಮ್ಮ ಇಂದಿರಾಗಾಂಧಿಯವರು, ರಾಜೀವಗಾಂಧಿಯವರು ಈ ಸಮಾಜ ಕಲ್ಯಾಣಕ್ಕೆ, ಈ ಅಸ್ಪೃಶ್ಯತೆ ನಿವಾರಣೆಗೆ, ಪರಿಶಿಷ್ಟಜಾತಿ - ಜನಾಂಗಕ್ಕೆ ಮಾಡಿದ ಸೇವೆಯನ್ನು ನೋಡಿದರೆ ಯಾವ ಕಾಲಕ್ಕೂ ಕೂಡ, ಭಾರತದ ಇತಿಹಾಸ ಒಂದೇ ಅಲ್ಲ, ಜಗತ್ತಿನ ಇತಿಹಾಸ ನೋಡಿದರೆ ಇವರು ಎಂತಹ ಪರಿಣಾಮಕಾರಿ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದರು ಎಂದು ಹೇಳಬೇಕಾಗುತ್ತದೆ. ಅಂಬೇಡ್ಕರ್ ಅವರು ಇಲದೇ ಹೋಗಿದ್ದರೆ ಪರಿಶಿಷ್ಟ ಜಾತಿ - ಜನಾಂಗಕ್ಕೆ ಈ ರಿಸರ್‌ವೇಷನ್ ಸಿಕ್ಕುತ್ತಿರಲಿಲ್ಲವೆಂದು ಹೇಳಬೇಕಾಗುತ್ತದೆ. ಏಕೆಂದರೆ ಜಗತ್ತಿನ ಇತಿಹಾಸ ಓದಿದರೆ ಯಾವ ಸಂವಿಧಾನದಲ್ಲೂ ಕೂಡ ರಿಸರ್ವೇಷನ್ ಎಂಬ ವಿಷಯ ಬಂದಿಲ್ಲ. ಇಂತಹ ಸಂವಿಧಾನವನ್ನು ಭಾರತದೇಶದಲ್ಲಿ ಬರೆದಂಥ, ಸಂವಿಧಾನ ಶಿಲ್ಪಿ ಬಾಬಾಸಾಹೇಬ್ ಅಂಬೇಡ್ಕರ್ ಅವರು ಕೊಟ್ಟಂಥ ಕಾಂಟ್ರಿಬ್ಯುಷನ್ ನೋಡಿದರೆ ನನಗನ್ನಿಸುತ್ತದೆ, ಸಾವಿರಾರು, ಲಕ್ಷಗಟ್ಟಲೆ ಹಿಂದುಳಿದ ಜನರ, ಅಲ್ಪಸಂಖ್ಯಾತರ, ಪರಿಶಿಷ್ಟ ಜಾತಿ - ಜನಾಂಗದವರು ಇವತ್ತು ಸಮಾಜದಲ್ಲಿ ತಮ್ಮ ಏಳಿಗೆಗಾಗಿ ಮರ್ಯಾದೆಯಿಂದ ತಲೆಯೆತ್ತಿ ತಿರುಗಾಡುವಂಥ ಸಂದರ್ಭ, ಅವಕಾಶವನ್ನು ಅವರು ಒದಗಿಸಿಕೊಟ್ಟಿದ್ದಾರೆ ಎಂದು ಹೇಳಬೇಕಾಗುತ್ತದೆ.

ಅದಕ್ಕಾಗಿ ನಾವು 14ನೇ ತಾರೀಖು ಬಾಬಾ ಸಾಹೇಬ್ ಅಂಬೇಡ್ಕರ್‌ರವರ ಸೆಂಟಿನರಿ ಸೆಲಬರೇಷನ್ ಅನ್ನು ಆಚರಣೆ ಮಾಡುವವರಿದ್ದೇವೆ. ಹೀಗಾಗಿ ಸಮಾಜ ಕಲ್ಯಾಣ ವೆಲ್‌ಫೇರ್ ಸ್ಟೇಟ್ ಎನ್ನುವ ಕಾಲಕ್ಕೆ, ಕರ್ನಾಟಕ ಸಮಾಜ ಕಲ್ಯಾಣ ಇಲಾಖೆಯನ್ನು ನೋಡುವಂಥ ಕಾಲಕ್ಕೆ, ನಾವು ಏನು ಮಾಡಬೇಕಾಗಿತ್ತು ಎಂದರೆ, ಸಮಾಜ ಕಲ್ಯಾಣ ಆಗಬಾರದು, ಪರಿಶಿಷ್ಟ ಜಾತಿ, ಹಿಂದುಳಿದ ಜಾತಿ ಮೈನಾರಿಟೀಸ್, ಅಲ್ಪಸಂಖ್ಯಾತರ ಕಲ್ಯಾಣ ಎಂದು ಹೇಳಬಹುದು. ಸಮಾಜ ಕಲ್ಯಾಣ ಅಲ್ಲ, ಸಮಾಜ ಎಂದರೆ, ಹೋಲ್ ಸೊಸೈಟಿ. ಆದರೂ ಕೂಡ ಸಮಾಜದಲ್ಲಿ ಸಮಾನತೆ ಬರಬೇಕು. ಎಲ್ಲರೂ ಅಷ್ಟೇ ಮರ್ಯಾದೆಯಿಂದ ಇರಬೇಕು, ಎಲ್ಲರಿಗೂ ಎಲ್ಲ ರೀತಿಯ ಅವಕಾಶಗಳು, ಎಂಪ್ಲಾಯ್‌ಮೆಂಟ್‌ಗಾಗಲೀ, ಎಜುಕೇಷನ್ನಾಗಲೀ, ಇವರ ಏಳಿಗೆಯಾಗಲೀ, ಉದ್ಧಾರವಾಗಲಿ ಮತ್ತು ಅವರ ಸ್ಟಾಂಡರ್ಡ್ ಮತ್ತು ಡಿಗ್ನಿಟಿ ಬೆಳೆಸುವ ಸಲುವಾಗಿ, ಭಾರತೀಯ ಸಂವಿಧಾನದ ಆರ್ಟಿಕಲ್ 14 ರಲ್ಲಿ ಹೇಳುತ್ತದೆ. Equality before law and also equal opportunities given to all. ಇಂತಹ ಕಾಲಕ್ಕೆ ಆರ್ಟಿಕಲ್ 45 ಭಾರತೀಯ ಸಂವಿಧಾನವನ್ನು ರೆಫರ್ ಮಾಡಿದರೆ, ಅಲ್ಲಿ ಹೇಳುತ್ತದೆ, State shall protect the interests of the weaker sections and the Scheduled Caste people whenever there is a necessity of making orders or any reservations, in programmes can be made. ಆರ್ಟಿಕಲ್ 45 ರ ಮೇಲೆ ಡಿಪೆಂಡ್ ಆದಂಥ ಸಮಾಜ ಕಲ್ಯಾಣ ಇಲಾಖೆ ವಿಷಯ ನೋಡಿದರೆ, ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಅಭಿನಂದನೆ ಸಲ್ಲಿಸಬೇಕಾಗುತ್ತದೆ. ಕಾರಣ ಅವರು, committed socialist ಎಂದು ಹೇಳಿದರೂ ತಪ್ಪಾಗುವುದಿಲ್ಲ. ಅಲ್ಲದೆ, ನನ್ನ ಇಲಾಖೆಗೆ ಅವರು ಸಾಕಷ್ಟು ಹಣ ಕೊಟ್ಟಿದ್ದಾರೆ. ಎಲ್ಲಾ ಕಾಲಕ್ಕೂ ಯಾವತ್ತೂ ಸಹಾಯ ಮಾಡುತ್ತಿದ್ದಾರೆಂದು ಹೇಳಬೇಕಾಗುತ್ತದೆ. 1991 ರಲ್ಲಿ ನಾನು ಸಮಾಜ ಕಲ್ಯಾಣ ಮಂತ್ರಿಯಾದ ನಂತರ, ಬಹಳಷ್ಟು ಕಾರ್ಯಕ್ರಮಗಳನ್ನು ನಾವು ಮಾಡಿದ್ದೇವೆಂದು ಹೇಳಿಕೊಳ್ಳಬೇಕಾಗುತ್ತದೆ. ಏಕೆಂದರೆ, ಈವತ್ತು ಎಸ್ ಸಿ ಪಿ ಫಂಡ್ಸ್ ಎಂದು ಹೇಳಿ, ಸ್ಪೆಷಲ್ ಕಾಂಪೊನೆಂಟ್ ಪ್ಲಾನ್‌ನಲ್ಲಿ ಫಂಡ್ಸ್ ಇರುತ್ತದೆ. ನಾವು ಅಧಿಕಾರಕ್ಕೆ ಬಂದದ್ದು ಡಿಸೆಂಬರ್ 6 ಕ್ಕೆ. ನವೆಂಬರ್ ಮತ್ತು ಡಿಸೆಂಬರ್ ತಿಂಗಳ ಬಾಬ್ತು ಪರಿಶೀಲನೆ ಮಾಡಿ ನೋಡಿದಾಗ, ಸಾಕಷ್ಟು ಹಣ ಈ ಎಸ್ ಸಿ ಪಿ ಫಂಡ್ಸ್‌ನಲ್ಲಿ ಲ್ಯಾಪ್ಸ್ ಆಗಬೇಕಾಗಿತ್ತು ಅಥವಾ ಹಾಗೆಯೇ ಸರ್ಕಾರದ ಖಜಾನೆಯಲ್ಲಿ ಉಳಿಯಬೇಕಾಗಿತ್ತು. ಅಂತಹ ಕಾಲಕ್ಕೆ, ಮಾನ್ಯ ವೀರೇಂದ್ರ ಪಾಟೀಲರು ಮುಖ್ಯಮಂತ್ರಿಯಾಗಿದ್ದರು. ನಾವು ಅವರನ್ನು ನೆನೆಸಬೇಕಾಗುತ್ತದೆ. ಮತ್ತು ಅವರಿಗೆ ಹಾರ್ದಿಕವಾಗಿ ಅಭಿನಂದನೆ ಸಲ್ಲಿಸಬೇಕಾಗುತ್ತದೆ. ಕಾರಣ ಅವರಿಗೆ ನಾನು ಸಲಹೆ ಮಾಡಿದೆ. ಈ ಎಸ್ ಸಿ ಪಿ ಫಂಡ್ಸ್ ಲ್ಯಾಪ್ಸ್ ಆಗುತ್ತಿದೆ, ಇದರಿಂದ ನಮಗೆ ತೊಂದರೆಯಾಗುತ್ತಿದೆ, ನಮ್ಮ ಇಲಾಖೆಯಲ್ಲಿ ಹೆಚ್ಚು ದುಡ್ಡು ಇಲ್ಲ, ದಯಮಾಡಿ, ಪೂಲ್ ಫಂಡ್ ಮಾಡಬೇಕೆಂದು ಹೇಳಿ, ಕೇಳಿಕೊಂಡಾಗ, ಹೈಪವರ್ ಕಮಿಟಿ ಅಧ್ಯಕ್ಷರನ್ನು ಕರೆಸಿ, pool fund ಮಾಡಿದರು. ಅದರಲ್ಲಿ 30 ಕೋಟಿ 16 ಲಕ್ಷ ರೂಪಾಯಿಗಳನ್ನು ಉಳಿಸಿದೆವು. ಬಹುಶಃ ನನಗನಿಸುತ್ತದೆ, 40 ವರ್ಷಗಳಲ್ಲಿ ಯಾವ ಸಮಾಜ ಕಲ್ಯಾಣ ಇಲಾಖೆಯ ಮಂತ್ರಿಗಳೂ ಇಷ್ಟು ಹಣವನ್ನು ಉಳಿಸಿರಲಿಲ್ಲ. ಲ್ಯಾಪ್ಸ್ ಆಗಿ ಹೋಗುತ್ತಿತ್ತು. ಈ ಹಣವನ್ನು ಉಳಿತಾಯ ಮಾಡಿಕೊಂಡು, ಬಾಬಾ ಸಾಹೆಬ್ ಅಂಬೇಡ್ಕರ್ ಸೆಂಟಿನರಿ ವರ್ಷದಲ್ಲಿ ಒಂದು ಲಕ್ಷ ಮನೆಗಳನ್ನು ಕಟ್ಟಿಸಲಾಗುವುದೆಂದು ಪ್ರಕಟಣೆ ಮಾಡಿದ್ದೇವೆ. ನಾವು 4 ವರ್ಷದಲ್ಲಿ ಕೊಡುತ್ತೇವೆಂದು ಹೇಳಿದ ಪ್ರಕಾರ, ನಮ್ಮ ಸ್ನೇಹಿತರು ತಮ್ಮ ತಮ್ಮ ಕ್ಷೇತ್ರದಲ್ಲಿ ವರ್ಷಕ್ಕೆ 150-200-300 ಮನೆಗಳನ್ನು ಕೊಡಬೇಕೆಂದು, 4 ವರ್ಷದಲ್ಲಿ ಒಂದು ಲಕ್ಷ ಮನೆಗಳನ್ನು ಕಟ್ಟುವಂಥ ವ್ಯವಸ್ಥೆಯಾಗಿದೆ.

ಅದೇ ಪ್ರಕಾರ ನಿವೇಶನ ಕೂಡ ಕೊಟ್ಟಿದ್ದೇವೆ. ತಾವೇ ಚೇರ್ಮನ್ ಇದ್ದು ಫಲಾನುಭವಿಗಳನ್ನು ತಾವೇ ಆಯ್ಕೆ ಮಾಡಿ ಕಳುಹಿಸಿದಾಗ, ಸರ್ಕಾರ ಅಂತಹ ಬಡ ಜನರಿಗೆ ಉಚಿತವಾಗಿ ಮನೆಗಳನ್ನು ಕೊಡುತ್ತಿದೆ, ಇದೊಂದು ದೊಡ್ಡ ಕೆಲಸವನ್ನು ನಮ್ಮ ಸಮಾಜ ಕಲ್ಯಾಣ ಇಲಾಖೆ ಮಾಡಿದೆ. ಇನ್ನೂ ಸಾಕಷ್ಟು ಕಾರ್ಯಕ್ರಮಗಳನ್ನು

ನಾವು ಹಾಕಿದ್ದೇವೆ. ಹಾಸ್ಟಲುಗಳನ್ನು ಪ್ರಾರಂಭ ಮಾಡಬೇಕೆಂದು ಹೇಳಿದ್ದೇವೆ, ಅದೇ ಪ್ರಕಾರ ದೇವದಾಸಿಯರಿಗೆ rehabilitation programme ಮಾಡಬೇಕೆಂಬ ಕಾರ್ಯಕ್ರಮವನ್ನು, ನಮ್ಮ ಕರ್ನಾಟಕದಲ್ಲಿ ಅದರಲ್ಲೂ ಉತ್ತರ ಕರ್ನಾಟಕದ 6 ಜಿಲ್ಲೆಗಳಲ್ಲಿ ಹಮ್ಮಿಕೊಂಡಿದ್ದೇವೆ. ನಮ್ಮ ರಾಜ್ಯದಲ್ಲಿ ಸುಮಾರು 21-22 ಸಾವಿರ ಜನ ದೇವದಾಸಿಯರು ಇದ್ದಾರೆ. ಇವರು ಬಹಳ ಕೆಟ್ಟ ಪರಿಸ್ಥಿತಿಯಲ್ಲಿದ್ದಾರೆ. ಇಂತಹ ಕಾಲಕ್ಕೆ, ನಾವು ಇದೇ ಫಂಡ್‌ನಿಂದ 2 ಕೋಟಿ ರೂಪಾಯಿಗಳನ್ನು ಕೊಟ್ಟು, ಎಸ್‌ಸಿ ಎಸ್‌ಟಿ ಡೆವಲಪ್‌ಮೆಂಟ್ ಕಾರ್ಪೊರೇಷನ್, ಮಹಿಳಾ ಅಭಿವೃದ್ಧಿ ನಿಗಮ ಮತ್ತು ಮಹಿಳಾ ಕಲ್ಯಾಣ ಇಲಾಖೆಯಿಂದ ಸಾಕಷ್ಟು ಕಾರ್ಯಕ್ರಮಗಳನ್ನು ಹಾಕಿ ಅವರ ಏಳಿಗೆಗಾಗಿ ಮತ್ತು rehabilitation ಪ್ರೊಗ್ರಾಂ ಹಾಕಿಕೊಂಡು ಕೆಲಸ ಮಾಡುತ್ತಿದ್ದೇವೆ. ನಮ್ಮ ಮೋಟಮ್ಮನವರು, ನೀವು ಘೋಷಣೆ ಮಾಡುತ್ತೀರಿ, ಘೋಷಣೆ ಮಾಡುತ್ತಾ ಶೋಷಣೆಯಾಗುತ್ತಿದೆ ಎಂದ ಹೇಳಿದರು. ಅವರ ಮಾತನ್ನು ಒಪ್ಪಬೇಕಾಗುತ್ತದೆ. ಏಕೆಂದರೆ, ಶಾಸಕರಿಗೆ ಇದೊಂದೇ forum. ಉತ್ತಮ ಮತ್ತು ಒಳ್ಳೆಯ forum ಎಂದರೆ, ಮಿನಿಸ್ಟರಿಗೆ ತರಾಟೆಗೆ ತೆಗೆದುಕೊಳ್ಳುವುದಾಗಲೀ, ಅಧಿಕಾರಿಗಳಿಗೆ ಕಂಟ್ರೋಲ್ ಮಾಡುವುದಕ್ಕಾಗಲೀ ಅಥವಾ ತಮ್ಮ ಡಿಮ್ಯಾಂಡನ್ನು ಒಪ್ಪಿಸಬೇಕಾಗಲೀ ಒಂದು ಪವರ್ ಇದೆ, ಅವರ ಹೇಳಿಕೆಯನ್ನು ಅಪ್ರಿಷಿಯೇಟ್ ಮಾಡುತ್ತಾ, ಘೋಷಣೆಯಿಂದ ಶೋಷಣೆಯಾಗುತ್ತದೆಂದು ಹೇಳಿದರು. ಘೋಷಣೆಗಳಲ್ಲಿಯೇ ಸಾಕಷ್ಟು, ನಮ್ಮ dreams ಗಳನ್ನು ವ್ಯಕ್ತಪಡಿಸಿರುತ್ತೇವೆ. ಘೋಷಣೆ ಎಂದರೆ ಹೇಳಿಕೆಗಳು, ಇದು ಮಾಡುತ್ತೇವೆ, It is an aim, ಒಂದು ಆಬ್ಜೆಕ್ಟ್. ಅದಕ್ಕೆ ನಾವು ವ್ಯವಸ್ಥೆ ಮಾಡಿಕೊಳ್ಳಬೇಕಾಗುತ್ತದೆ. ಈ ಪ್ರಕಾರ ಈ ಸಲಹೆ ಬಹಳ ಒಳ್ಳೆಯ ಸಲಹೆ ಆಗಿದೆ. ಬಹುಶಃ ಅವರು ಬಹಳ ಕಠಿಣವಾದ ರೀತಿಯಿಂದ ಟೀಕೆ ಮಾಡಬೇಕೆಂಬ ಮನಸ್ಸು ಮಾಡಿದರು. ಅಧಿಕಾರಿಗಳ ಮೇಲೆ ಹೇಳಿದರು. ಅಧಿಕಾರಿಗಳು ದಕ್ಷರಿಲ್ಲ ಎಂದು ಹೇಳಿದರು, ಒಬ್ಬಿಬ್ಬರು ಸ್ನೇಹಿತರು ಸೋಷಿಯಲ್ ವೆಲ್‌ಫೇರ್ ಮಿನಿಸ್ಟರ್ ರವರೂ ಕೂಡಾ ಅಷ್ಟು ದಕ್ಷತೆಯಿಂದ ತಮ್ಮ ಖಾತೆಯನ್ನು ನೋಡುತ್ತಿಲ್ಲ, ಅಧಿಕಾರಿಗಳ ಮೇಲೆ ಕಂಟ್ರೋಲ್ ಇಲ್ಲ ಎಂದು ಆಪಾದನೆ ಮಾಡಿದರು. ಅದು ನನಗೇನೂ ಕೆಟ್ಟದ್ದು ಎನಿಸುವುದಿಲ್ಲ. ನಮ್ಮ ಕಾರ್ಯಕ್ರಮ ನಮ್ಮ ಕೆಲಸ ನಾವು ಮಾಡಬೇಕಾಗುತ್ತದೆ.

ಶ್ರೀ ಆರ್.ಎನ್.ನಾಯಕ್ :- ಇದು ತಮಗೆ ಕೆಟ್ಟದ್ದು ಎನಿಸಲಿಲ್ಲ ಎಂದರೆ ಬೇರೆ ಏನು ತಮಗೆ ಕೆಟ್ಟದ್ದು ಎನಿಸುತ್ತದೆ?

ಶ್ರೀ ಬಿ.ಶಿವಣ್ಣ :- ತಾವೇನಾದರೂ ಕೆಲಸ ಹೇಳಿ ನಾನು ಅದನ್ನು ಮಾಡಿಕೊಡಲಿಲ್ಲ ಎಂದರೆ ನನಗೆ ಕೆಟ್ಟದ್ದೆನಿಸುತ್ತದೆ.

ಶ್ರೀ ಆರ್.ಎನ್.ನಾಯಕ್:- ಶಾಸಕರ ಕೆಲಸ ಮಾಡಿದರೆ ಅದು ರಾಜ್ಯದ ಕೆಲಸ. ಬೇರೆ ಕೆಲಸ ಏನೂ ಹೇಳಲಿಲ್ಲವಲ್ಲಾ ? ಮಹಾರಾಷ್ಟ್ರದ್ದು, ಹೈದರಾಬಾದ್‌ದು, ಡೆಲ್ಲಿದು ಏನೂ ಹೇಳಲಿಲ್ಲವಲ್ಲಾ, ಶಾಸಕರು ಏನಾದರೂ ಕೆಲಸ ಹೇಳಿದರೂ ಅದನ್ನು ಮಾಡಿ ಕೊಡದೇ ಇದ್ದರೂ ಕೆಟ್ಟದ್ದು ಎನಿಸಬಾರದು, ಮಾಡಿಕೊಟ್ಟರೆ ಒಳ್ಳೆಯದು.

ಉಪಾಧ್ಯಕ್ಷಿಣಿಯವರು:- ಅವರು ರಿಪ್ಲೈ ಮುಗಿಸಲಿ,

ಡಾ.ವೈ.ನಾಗಪ್ಪ:- ಮಾನ್ಯ ಸಚಿವರು ಶಾಸಕರು ಹೇಳಿದ ಕೆಲಸ ಮಾಡದೆ ಇದ್ದರೆ ಅದು ಕೆಟ್ಟದ್ದು ಎನಿಸುತ್ತದೆ ಎಂದು ಹೇಳಿದರು. ಕಳೆದ ಮೂರು ವರ್ಷದಿಂದ ನಾನು ಎಸ್.ಸಿ, ಎಸ್.ಟಿ. ಹಾಸ್ಟೆಲ್ಸ್, ಬ್ಯಾಕ್‌ವರ್ಡ್‌ಕ್ಲಾಸ್ ಹಾಸ್ಟೆಲ್ಸ್, ಅಂಗನವಾಡಿ ಇವುಗಳ ಬಗ್ಗೆ ಮನವಿ ಕೊಟ್ಟಿದ್ದೇನೆ. ಮೂರು ಸಲ ಕೊಟ್ಟಿದ್ದೇನೆ. ಇದುವರೆಗೆ ಒಂದು ಹಾಸ್ಟೆಲ್ ಆಗಲಿಲ್ಲ. ಇದರಿಂದ ನನಗೆ ಕೆಟ್ಟದೆನಿಸುತ್ತದೋ, ಅವರಿಗೆ ಕೆಟ್ಟದೆನೆಸುತ್ತದೋ ಹೇಳಬೇಕು.

ಉಪಾಧ್ಯಕ್ಷಿಣಿಯವರು :- ಅವರು ರಿಪ್ಲೈನಲ್ಲಿ ಹೇಳುತ್ತಾರೆ. ತಾವು ರಿಪ್ಲೈ ಮುಂದುವರಿಸಿ.

ಶ್ರೀ ಆರ್.ಎನ್.ನಾಯಕ್:- ತಮಾಷೆ ಎಂದರೆ ನಾವು ಶಾಸಕರು ಈ ವಿಷಯಗಳನ್ನು ಬೇರೆ ಕಡೆ ಹೇಳಬಹುದು. ಆದರೆ ಇವರ ಹತ್ತಿರ ಮಾತ್ರ ಇಲ್ಲೇ ಮಾತನಾಡಬೇಕು. ಬೇರೆ ಕಡೆ ಇವರು ಸಿಗುವುದಿಲ್ಲ. ಬಹಳ ಪ್ರಾಬ್ಲಂ ಇದೆ.

ಉಪಾಧ್ಯಕ್ಷಿಣಿಯವರು:- ರಿಪ್ಲೈ ಮುಗಿಸಲಿ, ಆಮೇಲೆ ಕೇಳುವಿರಂತೆ.

ಶ್ರೀಮತಿ ಮೋಟಮ್ಮ:- ಮೊನ್ನೆ ಒಂದು ಸಲ ನಾನು ಘೋಷಣೆಯಿಂದ ಶೋಷಣೆಯಾಗುತ್ತಿದೆ ಎಂದು ಹೇಳಿದೆ. ಆದರೆ ಅದು ಶಿವಣ್ಣನವರಿಂದ ಆಗುತ್ತಿದೆ ಎಂದಾಗಲೀ ಅಧಿಕಾರಿಗಳಿಂದ ಆಗುತ್ತಿದೆ ಎಂದಾಗಲೀ ಹೇಳಲಿಲ್ಲ. ಇಡೀ ದೇಶದಲ್ಲಿ ಸ್ವಾತಂತ್ರ್ಯ ಬಂದ ಮೇಲೆ ಇಲ್ಲಿಯವರೆಗೆ ಹರಿಜನ ಗಿರಿಜನ ಹಾಗೂ ಬಡವರ ಏಳಿಗೆ ಮಾಡುತ್ತೇವೆ ಎಂದು ಸಮಾಜಕ್ಕೆ ಹೇಳಿಕೊಂಡು ಬಂದಿದ್ದೇವೆ, ಆದರೆ ಇಲ್ಲಿಯವರೆಗೆ ಏನಾಗಿದೆ ಹೇಳಿ ನೋಡೋಣ? ನಾವು ಅಂದುಕೊಂಡಷ್ಟು ಏನೂ ಆಗಿಲ್ಲ. ನಿಜವಾಗಿ ಹರಿಜನರ ಹೇಳಿಗೆ ಏನಾದರೂ ಆಗಿದ್ದರೆ 5 ಪರ್ಸೆಂಟ್ ಆಗಿರಬಹುದು. ಆ ದೃಷ್ಟಿಯಿಂದ ಮಾತನಾಡಿದನೇ ಹೊರತು ಬೇರೆ ಏನೂ ಅಲ್ಲ. ಇವತ್ತು 5 ಪರ್ಸೆಂಟ್ ಕೂಡಾ ಇವರ ಏಳಿಗೆ ಆಗಿಲ್ಲ ಎಂದು ಹೇಳಬಹುದು.

(ಗೊಂದಲ)

ಶ್ರೀ ಆರ್.ದಯಾನಂದರಾವ್:- ಸಮಾಜ ಕಲ್ಯಾಣ ಆಗಬೇಕೆಂದರೆ ಮಂತ್ರಿಗಳ ಕಲ್ಯಾಣ ಆಗಿಲ್ಲವಲ್ಲಾ.

(ಗೊಂದಲ)

ಶ್ರೀ ಬಿ.ಶಿವಣ್ಣ:- ಅಧ್ಯಕ್ಷರೇ, ನಾನು ಶ್ರೀಮತಿ ಮೋಟಮ್ಮನವರು ಹೇಳಿದುದರ ಬಗ್ಗೆ ಕೆಲವು ವಿಷಯಗಳನ್ನು ಹೇಳಬೇಕಾಗುತ್ತದೆ. ಹರಿಜನ ಗಿರಿಜನ ಹಾಸ್ಟೆಲ್‌ಗಳ ಬಗ್ಗೆ ಅವರು ಹೇಳಿದರು. ನಾನು 1990-91ರಲ್ಲಿ ಮಂತ್ರಿಯಾಗಿ ಬಂದಾಗ ಪ್ರಿಮ್ಯಾಟ್ರಿಕ್ ಹುಡುಗರಿಗೆ ಬೋರ್ಡಿಂಗ್ ಚಾರ್ಜಸ್ ಎಂದು 100 ರೂಪಾಯಿ ಮಾತ್ರ ಕೊಡುತ್ತಿದ್ದರು, ಕಾಲೇಜ್ ಹಾಸ್ಟಲ್ಸ್ ಹುಡುಗರಿಗೆ 150 ರೂಪಾಯಿ ಕೊಡುತ್ತಿದ್ದರು, ನಾನು ಬಂದ ಕಾಲಕ್ಕೆ 100 ರೂಪಾಯಿ ಇದ್ದುದನ್ನು 150 ರೂಪಾಯಿಗೂ, 150 ರೂಪಾಯಿ ಇದ್ದುದನ್ನು 200 ರೂಪಾಯಿಗೂ ಹೆಚ್ಚು ಮಾಡಿದೆ, ಇದನ್ನು ಮಾಡಿದ್ದು ನಾನು ಎಂದು ತಿಳಿಸಬಯಸುತ್ತೇನೆ. ಅದೇ ಪ್ರಕಾರ ಇವರು ಹೇಳಿದಂಥ ಹಾಸ್ಟೆಲ್ ವಿಚಾರ 7-3-92ಕ್ಕೆ ಸರಕಾರದ ಮುಂದೆ ಬಂದಿದೆ. ತಮ್ಮ ಹಾಸ್ಟೆಲ್‌ಗೆ 14 ಲಕ್ಷ ರೂಪಾಯಿಗಳನ್ನು ಸ್ಯಾಂಕ್ಷನ್ ಮಾಡಿ ಕೊಡುತ್ತಿದ್ದೇವೆ. ತಾವು ಹೆಣ್ಣು ಮಕ್ಕಳ ಹಾಸ್ಟಲ್ ಬಗ್ಗೆ ಹೇಳಿದಿರಿ. ಶ್ರೀಮತಿ ಮೋಟಮ್ಮನವರ ಮೂಡಿಗೆರೆಯ ಹಾಸ್ಟಲ್‌ಗೆ 6 ಲಕ್ಷ ರೂಪಾಯಿಗಳನ್ನು ಕೊಡುತ್ತಿದ್ದೇವೆ. ಹಾಗೆಯೇ ಅವರು ಅಟ್ರಾಸಿಟೀಸ್ ಬಗ್ಗೆ ಹೇಳಿದರು;

ಶ್ರೀ ಬಾಬುರಾವ್ ಚವಾಣ್:- ಹೆಣ್ಣು ಮಕ್ಕಳ ಹಾಸ್ಟಲ್ಸ್‌ಗೆ ಮಾತ್ರ ಕೊಡಬೇಡಿ, ಗಂಡು ಮಕ್ಕಳ ಹಾಸ್ಟಲ್‌ಗೆ ಸಹ ಕೊಡಿರಿ ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಶಿವಣ್ಣ:- ಕಾಡು ಕೊತ್ತನಹಳ್ಳಿಯಲ್ಲಿ ಅಟ್ರಾಸಿಟೀಸ್ ಆಗಿದೆ ಎಂದು ಹೇಳಿದರು. ಎರಡು ಮೂರು ವರ್ಷಗಳಲ್ಲಿ ಅಲ್ಲಲ್ಲಿ ಒಂದೊಂದು ಅಟ್ರಾಸಿಟೀಸ್‌ಗಳು ದುರ್ಘಟನೆಗಳು, ಕಮ್ಯುನಲ್ ಕ್ಲಾಷಸ್ ಆಗಿದೆ ಎಂದು ಹೇಳಬಯಸುತ್ತೇನೆ. ಖುದ್ದಾಗಿ ನಾನು ಎರಡು ಮೂರು ಸ್ಥಳಕ್ಕೆ ಹೋಗಿದ್ದೇನೆ. ಬಳ್ಳಾರಿ ಜಿಲ್ಲೆಯ ಸಂಗನಕಲ್ ಎಂಬ ಹಳ್ಳಿಗೆ ನಾನು ಹೋಗಿದ್ದೆ. ಅಲ್ಲಿ ಒಂದು ಫಂಕ್ಷನ್ ಇತ್ತು. ನಾವು ಬಹಳ ಕಷ್ಟದಿಂದ ಆ ಫಂಕ್ಷನನ್ನ ಮಾಡಬೇಕಾಯಿತು ಆದರೂ ಕೂಡಾ ನಮ್ಮ ದಲಿತ ಸಂಘರ್ಷ ಸಮಿತಿ ಯುವಕರು, ನಾಯಕರು,. ಮುಖಂಡರು ಮತ್ತು ಲೀಡರ್ಸ್ ಬಳ್ಳಾರಿ ಜಿಲ್ಲೆಯ ಎಂ.ಎಲ್.ಎ ಗಳು ಎಂ.ಎಲ್.ಸಿ ಗಳು ನನ್ನ ಜೊತೆ ಬಂದಿದ್ದರು. ನಾವೆಲ್ಲಾ ಸಮಾಲೋಚನೆ ಮಾಡಿದೆವು. ಆ ಘರ್ಷಣೆ. ಕಮ್ಯುನಲ್ ರೈಟ್, ಕಮ್ಯುನಲ್ ಕ್ಲಾಷಸ್ ನೋಡಿದರೆ ಯಾರಿಗಾದರೂ ದುಃಖವಾಗುತ್ತದೆ. ಇದು ನಿಜಕ್ಕೂ ವಿಷಾದದ ಸಂಗತಿ ಎಂದು ಹೇಳಬೇಕಾಗುತ್ತದೆ. 132 ಮನೆಗಳು ಸುಟ್ಟು ಹೋದವು. ಬೆಂಕಿ ಹಚ್ಚಿದ್ದರಿಂದ ಸುಟ್ಟು ಹೋದವು. ಸರಕಾರ ಇಮ್ಮೀಡಿಯಟ್ ಆಗಿ

ಎಲ್ಲಾ ತರಹದ ವ್ಯವಸ್ಥೆ ಮಾಡಿತು. ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್‌ನಿಂದ ದುಡ್ಡು ಕೊಟ್ಟು ಮನೆಗಳನ್ನು ಕಟ್ಟಿಸಿ ಕೊಟ್ಟೆವು. ಸಂಗನಕಲ್‌ನಲ್ಲಿ ಮೀಟಿಂಗ್ ಮುಗಿಸಿಕೊಂಡು ಬರುವ ಕಾಲಕ್ಕೆ ಒಂದು ವಿಷಯ ಹೇಳಬೇಕೆಂದರೆ, ನಾನು ಹರಿಜನ ಕಾಲೋನಿಗೆ ಹೋಗಿ ಅಲ್ಲಿ ವ್ಯವಸ್ಥಿತವಾಗಿ ಒಂದು ಮೀಟಿಂಗ್ ಮಾಡಿ, ಮುಗಿಸಿಕೊಂಡು ಬರುವ ಹೊತ್ತಿಗೆ ಕೆಲವು ಜನರು, ಹೆಣ್ಣು ಮಕ್ಕಳು ಊರ ಹೊರಗೆ ನಿಂತಿದ್ದರು. ಅವರು. ಮಿನಿಷ್ಟರ್ ಸಾಬ್ ಕುಳಿತಿರುವುದರಿಂದ ನಿಂತುಬಿಟ್ಟೆವು ಎಂದರು. ಹಾಗೂ ತಾವು ಹರಿಜನರ ಸಲುವಾಗಿಯೇ ಇದ್ದೀರಾ ಅಥವಾ ಎಲ್ಲಾ ಜನರ ಸಲುವಾಗಿ ಇದ್ದೀರಾ ಎಂದು ಕೇಳಿದರು. ನಾನು ಎಲ್ಲರ ಸಲುವಾಗಿ ಇದ್ದೀನಿ ಎಂದು ಹೇಳಿದೆ. ಆದರೆ, ನೀವು ಹರಿಜನರ ಮನೆಗಳನ್ನು ಸುಟ್ಟು, ಹರಿಜನರಿಗೆ ತೊಂದರೆಯಾಗಿದೆ ಎಂದು ಹೇಳಿ, ಅಲ್ಲಿ ಹೋಗಿ ಮೀಟಿಂಗ್ ಮಾಡಿಕೊಂಡು ಅವರಿಗೆ ಸಹಾಯಧನ, ಏನು ಸಹಾಯ ಮಾಡುತ್ತೇವೆಂದು ಹೇಳಿದಿರಿ. ನಮಗೆ ಯಾರು ಕೇಳಬೇಕು? ಇದು ಬಹಳ ಕಷ್ಟವಾಗುತ್ತದೆ. ಈ ಅಟ್ರಾಸಿಟೀಸ್ ಡಿಸೈಡ್ ಮಾಡುವುದು ಬಹಳ ಕಷ್ಟವಾಗುತ್ತದೆ ಏಕೆಂದರೆ, ಅಟ್ರಾಸಿಟೀಸ್ ಎಂದರೆ, ಲಾ ಅಂಡ್ ಆರ್ಡರ್ ಪ್ರಾಬ್ಲಮ್ ಬರುತ್ತದೆ. ಲೀಗಲ್ ಕೊಶ್ಚನ್ ಬರುತ್ತದೆ. ಅಂತಹ ಕಾಲಕ್ಕೆ ಯಾರು ಅಪರಾದಿಗಳೆಂದು ಡಿಸೈಡ್ ಮಾಡುವುದು ಅದು ಮಿನಿಸ್ಟರ್ ಕೈಲಿ ಇರುವುದಿಲ್ಲ. ನಾವು ರಿಪೋರ್ಟನ್ನು ಪೋಲೀಸರು ತರಿಸಿಕೊಳ್ಳಬಹುದು, ಅಥವಾ ಕೇಸ್ ಮಾಡಬಹುದು. ಈ ಪ್ರಕಾರ. ಸಿ.ಆರ್.ಇ ಸೆಲ್‌ನವರು ಕೂಡಲೇ ಅಲ್ಲಿ ಇನ್ವೆಸ್ಟಿಗೇಷನ್ ಮಾಡುವುದು, ಕಾನೂನು ಪ್ರಕಾರ ಏನು ಮಾಡಬೇಕೊ ಅದನ್ನು ಮಾಡುತ್ತಾರೆ. ಅದೇ ಪ್ರಕಾರ ಈ ಕಾಡುಕೊತ್ತನ ಹಳ್ಳಿಯಲ್ಲೂ ಕೂಡ ನಮ್ಮ ಸಿ.ಆರ್.ಇ ಸೆಲ್‌ನವರು ಹೋದರು. ಅಲ್ಲಿ ಕ್ರಮ ತೆಗೆದುಕೊಂಡಿದ್ದಾರೆ, ಬಹಳ ತೀವ್ರವಾಗಿ ಪನಿಷ್‌ಮೆಂಟ್ ಕೊಡುವಂಥ ಕೆಲಸಗಳೂ ಕೂಡ ಆಗಿವೆ ಎಂದು ಹೇಳಬಯಸುತ್ತಿದ್ದೇನೆ. ಅದೇ ಪ್ರಕಾರ ಅಳಂದ್‌ದಲ್ಲಿ ಒಂದು ಆಯಿತು. ಶ್ರೀ ಜಿ.ರಾಮಕೃಷ್ಣ ಎಂ.ಎಲ್.ಎ ಅವರ ಜೊತೆಯಲ್ಲು ನಾವು ಹೋಗಿದ್ದೆವು. ಅಲ್ಲಿ ಬಹಳ ಪೋಲೀಸ್ ಬಂದೋಬಸ್ತ್ ಇತ್ತು. ಎಷ್ಟು ಕಷ್ಟ ಎಂದರೆ, ಮಿನಿಸ್ಟರ್ ಎಲ್ಲೆಲ್ಲಿಗೆ ವಿಸಿಟ್ ಮಾಡುತ್ತಾರೆ, ಅಲ್ಲಿ ಬಹಳ ಲಾ ಅಂಡ್ ಆರ್ಡರ್ ಪ್ರಾಬ್ಲಮ್ ಕ್ರಿಯೇಟ್ ಮಾಡತಕ್ಕ ಸಂದರ್ಭಗಳು ಅಲ್ಲಲ್ಲಿ ಕಂಡು ಬಂದವು, ಆದರೂ ಕೂಡ ಬಹಳ ಜಾಗ್ರತೆಯಾಗಿ ಅವರಿಗೆಲ್ಲಾ ಸಮಾಧಾನ ಮಾಡಿಸಿ, ಕೂತು, ಕಮಿಟಿ ಮಾಡಿಸಿ, ಅವರಿಗೆ ಏನೇನು ಸಹಾಯಧನ ಕಾಂಪನ್‌ಸೇಷನ್ ಕೊಡಬೇಕೋ ಅದನ್ನೆಲ್ಲಾ ಕೊಡತಕ್ಕ ಕಲಸವನ್ನು ಮಾಡಿದೆವು. ಈ ಪ್ರಕಾರ ಅಟ್ರಾಸಿಟೀಸ್‌ಗಳಲ್ಲಿ ಸಾಕಷ್ಟು ನಮ್ಮ ಸಿ.ಆರ್.ಇ ಸೆಲ್‌ನವರು ಕೆಲಸ ಮಾಡುತ್ತಿದ್ದಾರೆ. ಅದೇ ಪ್ರಕಾರ ನಾವು 4 ಸ್ಪೆಷಲ್ ಕೋರ್ಟುಗಳನ್ನು ಕೂಡ ಸ್ಥಾಪನೆ ಮಾಡುತ್ತಿದ್ದೇವೆ. ಎಲ್ಲಾ ಡಿಸ್ಟ್ರಿಕ್ಟ್ ಸೆಷನ್ ಕೋರ್ಟಗಳಲ್ಲೂ ಕೂಡ, ಸ್ಪೆಷಲ್ ಕೋರ್ಟ್ ಎಂದು ಎಸ್.ಸಿ ಎಸ್.ಟಿ.ಗಳ ಕೇಸ್ ತೆಗೆದುಕೊಳ್ಳಬೇಕೆಂದು ನಾವು ಹೇಳಿದ್ದೇವೆ. ನಮ್ಮ ಹತ್ತಿರ 4 ಜನ ಡೈರೆಕ್ಟರುಗಳು ಮತ್ತು ಜಾಯಿಂಟ್ ಡೈರೆಕ್ಟರು ಇದ್ದಾರೆ. ನಿಮಗೆ ಹೇಳಬೇಕೆಂದರೆ, ನಮ್ಮ ಇಲಾಖೆಯ ಎಲ್ಲಾ ಅಧಿಕಾರಿಗಳೂ ಬಹಳ ಒಳ್ಳೆಯ ಮತ್ತು ದಕ್ಷ ಅಧಿಕಾರಿಗಳು ಇದ್ದಾರೆಂದು ಹೇಳಬೇಕಾಗುತ್ತದೆ. ಸೆಕ್ರೆಟರಿಗಳಾಗಲೀ ಸೋಷಿಯಲ್ ವೆಲ್‌ಫೇರ್ ಡೈರೆಕ್ಟರ್ ಆಗಲೀ, ಅವರು ಸ್ವತಃ ಷೆಡ್ಯೂಲ್ ಕ್ಯಾಸ್ಟ್ ಇದ್ದಾರೆ. ಬಹಳ ಬ್ರಿಲಿಯಂಟ್, ಹಾನೆಸ್ಟ್ ಮತ್ತು ಹಾರ್ಡ್ ವರ್ಕಿಂಗ್ ಆಫೀಸರ್ಸ್ ಇದ್ದಾರೆ. ಬಿ.ಸಿ.ಎಂ. ಡೈರೆಕ್ಟರೂ ಹಾಗೆ ಇದ್ದಾರೆ. ವುಮೆನ್ಸ್ ವೆಲ್‌ಫೇರ್ ಡೈರೆಕ್ಟರೂ ಹಾಗೆಯೇ ಇದ್ದಾರೆ. ಆದರೆ, ಕೆಲವು ಪ್ರಕರಣಗಳು ಅಲ್ಲಲ್ಲಿ , ಹಳ್ಳಿಗಳಲ್ಲಾಗಲೀ ಅಥವಾ ಯಾವುದೇ ವಿಷಯಗಳು ಸಡನ್ ಆಗಿ ಕ್ರಾಪಪ್ ಆಗುವ ಕಾಲಕ್ಕೆ ಬಹುಶ: ಸ್ವಲ್ಪ ಲೇಟಾಗಬಹುದು, ಅಥವಾ ಇಲ್ಲವೆಂದರೆ, ನಮಗೆ ಸುದ್ದಿ ಮುಟ್ಟುವುದರಲ್ಲಿ ತಡವಾಗಬಹುದು. ಈ ಪ್ರಕಾರದೊಳಗೆ ಕ್ರಮ ತೆಗೆದುಕೊಳ್ಳುವುದು ನಿಂತಿರಬಹುದು. ಆದರೆ ಯಾವುದೇ ತರಹದಿಂದ ನಮ್ಮ ಅಧಿಕಾರಿಗಳು ಯಾವ ಕಾಲಕ್ಕೂ ಆಜ್ಞೆಗಳಾಗಲೀ, ಸರ್ಕಾರದ ಕೆಲಸಗಳಲ್ಲಿ ಯಾವುದನ್ನೂ ಉಲ್ಲಂಘನೆ ಮಾಡಿರುವುದಿಲ್ಲ ಎಂದು ಹೇಳಬೇಕಾಗುತ್ತದೆ. ಅದೇ ಪ್ರಕಾರ ಅದರ್ ಸ್ಕೀಮ್ಸ್ ಅಂತ ಒಬ್ಬ ಜೆ.ಡಿ.ಯವರು ರಾಯಚೂರು, ಬಳ್ಳಾರಿ, ಧಾರವಾಡ, ಬೆಂಗಳೂರು ರೂರಲ್‌ಗೆ ಇದ್ದಾರೆ. ಜೆ.ಡಿ (ಎಕನಾಮಿಕ್ಸ್ ಸರ್ವೀಸ್,

ಸ್ಕೀಮ್ಸ್) ಮಂಡ್ಯ, ಚಿತ್ರದುರ್ಗ, ಹಾಸನ್ ಅಂಡ್ ಕೋಲಾರ್ 4-4 ಜಿಲ್ಲೆಗಳಿಗೆ ನಾವು ಹಂಚಿ ಅವರಿಗೆ ಕೆಲಸ ಕೊಟ್ಟಿದ್ದೇವೆ. ಅದೇ ಪ್ರಕಾರ, ಜಾಯಿಂಟ್ ಡೈರೆಕ್ಟರ್, ಪಿ.ಎಸ್.ಪಿ. ಕಾರವಾರ, ಬೆಳಗಾಂ, ಮಂಗಳೂರು ಮತ್ತು ಕೊಡಗು ಈ ಜಿಲ್ಲೆಗಳನ್ನು ಅವರು ನೋಡಿಕೊಳ್ಳುತ್ತಾರೆ. ಅದೇ ಪ್ರಕಾರ ಡೈರೆಕ್ಟರ್ ಆಫ್ ಸೋಷಿಯಲ್ ವೆಲ್‌ಫೇರ್ ತುಮಕೂರು, ಚಿಕ್ಕಮಗಳೂರು, ಶಿವಮೊಗ್ಗ ಮೈಸೂರು ಈ ಪ್ರಕಾರವಾಗಿ, ಈ ಎಲ್ಲಾ ಅಧಿಕಾರಿಗಳಿಗೆ ನಾವು ಜಿಲ್ಲೆಗಳನ್ನು ಹಂಚಿದ್ದೇವೆ. ಅದೇ ಪ್ರಕಾರ ಜಿಲ್ಲಾವಾರು ಅವರು ಹೋಗಿ, ಎಸ್.ಸಿ.ಪಿ.ಪ್ರೋಗ್ರಾಂ ಆಗಲೀ, ಹಾಸ್ಟಲ್ ವಿಷಯವಾಗಲೀ, ಸ್ಕಾಲರ್‌ಷಿಪ್ ಕೊಡುವ ವಿಷಯವಾಗಲೀ, ಈ ಎಲ್ಲಾ ವಿಷಯಗಳ ಬಗ್ಗೆ ತನಿಖೆ ಮಾಡಿ, ರಿಪೋರ್ಟ್ಸ್ ಕೊಡುತ್ತಾರೆ. ಅದೇ ಪ್ರಕಾರ ನಮ್ಮ ಕಾರ್ಯಕ್ರಮಗಳನ್ನು ನಾವು ಮಾಡುತ್ತಿದ್ದೇವೆ ಎಂದು ಹೇಳಬೇಕಾಗುತ್ತದೆ. ಆದರೆ, ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್‌ನಲ್ಲಿ ನಮಗೆ ಸಾಕಷ್ಟು ವ್ಯವಸ್ಥೆ ಇಲ್ಲ. ಅದೇ ಪ್ರಕಾರ ನಮ್ಮ ಅಂಗವಿಕಲರ ಕಲ್ಯಾಣ ಇಲಾಖೆಯಲ್ಲಿಯೂ ಕೂಡ ಸಾಕಷ್ಟು ಸಿಬ್ಬಂದಿ ಇಲ್ಲ. ಅದೇ ಪ್ರಕಾರ ನಮ್ಮ ಸೋಷಿಯಲ್ ವೆಲ್‌ಫೇರ್ ಡೈರೆಕ್ಟರು ಅವರಿಗೂ ಕೂಡ ಸಾಕಷ್ಟು ಸಿಬ್ಬಂದಿ ಇಲ್ಲ. ಈಗ 35 ತಾಲ್ಲೂಕುಗಳಿಗೆ ಮಾತ್ರ ಸೋಷಿಯಲ್ ವೆಲ್‌ಫೇರ್ ಆಫೀಸ್ ಇವೆ. ಬೇರೆ ಕಡೆ ಬಿ.ಡಿ.ಓ ಮುಖಾಂತರ ನಾವು ಕೆಲಸ ಮಾಡಿಸುತ್ತಿದ್ದೇವೆ. ಇನ್‌ಸ್ಪೆಕ್ಟರುಗಳು ಇರುತ್ತಾರೆ ಆ ಪ್ರಕಾರ ನಾವು ಕೆಲಸ ಮಾಡುತ್ತೇವೆ ಎಂದು ಹೇಳಬೇಕಾಗುತ್ತದೆ. ಹೀಗಾಗಿ ಸಿಬ್ಬಂದಿಯ ವ್ಯವಸ್ಥೆಯು ಕೂಡ ನಮಗೆ ಆಗಬೇಕು. ಹಾಸ್ಟಲುಗಳಲ್ಲಿ ಕೂಡ ಸಾಕಷ್ಟು ಸಿಬ್ಬಂದಿ ಕೊರತೆ ಇದೆ. ನಾವು ಈ ಬಗ್ಗೆ ಹಣಕಾಸಿನ ಇಲಾಖೆಗೂ ಮತ್ತು ಸರ್ಕಾರಕ್ಕೂ ಬರೆದಿದ್ದೇವೆ. ಹೀಗಾಗಿ ನಾವು ರೆಕ್ರೂಟ್‌ಮೆಂಟ್ ಮಾಡುವುದಾಗಲೀ ಎಂಪ್ಲಾಮೆಂಟ್ ಆಪರ್ಚುನಿಟೀಸ್ ಸಿಗುವುದಾಗಲೀ ಕುಕ್ಸ್ ಮತ್ತು ಇತರೆಯವರು ನೇಮಕ ಮಾಡಿಕೊಳ್ಳುವುದು ಕಷ್ಟವಾಗಿದೆ. ಹೀಗಾಗಿ ನಮ್ಮ ಹಾಸ್ಟಲುಗಳಲ್ಲಿ ಸ್ವಲ್ಪ ತೊಂದರೆಯಾಗುತ್ತಿದೆ. ನಾವು ಹೇಳಬೇಕಾದರೆ, ನಮಗಿರುವಂಥ ಹಾಸ್ಟಲುಗಳಲ್ಲಿ, ಈ ಸಾರಿ, ನಾವು ಬಂದಮೇಲೆ, 1990-91ರಲ್ಲಿ 57 ಹೊಸ ಹಾಸ್ಟಲುಗಳನ್ನು ತೆರೆದಿದ್ದೇವೆ. 1991-92ರಲ್ಲಿ 39 ಹಾಸ್ಟಲುಗಳನ್ನು ನಾವು ತೆರೆದಿದ್ದೇವೆ.

ಈ ಪ್ರಕಾರ 96 ಹೊಸ ಹಾಸ್ಟಲ್‌ಗಳನ್ನು ನಮ್ಮ ಅವಧಿಯಲ್ಲಿ ಪ್ರಾರಂಭ ಮಾಡಿದ್ದೇವೆಂದು ಹೇಳಬೇಕಾಗುತ್ತದೆ. ಇವನ್ನು ಕೆಲವು ಶಾಸಕ ಮಿತ್ರರು ಎಲ್ಲೆಲ್ಲಿ ಕೇಳಿದ್ದರೋ, ಅಲ್ಲಿಗೆ ಕೊಟ್ಟಿದ್ದೇವೆ. ಇನ್ನೂ ಕೊಡದೇ ಇದ್ದರೆ ಮುಂದಿನ ವರ್ಷ ಪ್ರೋಗ್ರಾಂ ಮಾಡಿಕೊಂಡು ಅವರಿಗೆ ಕೊಡಲಿಕ್ಕೆ ಪ್ರಯತ್ನ ಮಾಡುತ್ತೇವೆಂದು ಹೇಳಬೇಕಾಗುತ್ತದೆ. ನಮ್ಮ ಹಾಸ್ಟಲ್‌ಗಳಲ್ಲಿ 50 ಸಾವಿರದ 629 ವಿದ್ಯಾರ್ಥಿಗಳು ಓದುತ್ತಿದ್ದಾರೆ. ಪ್ರೀಮೆಟ್ರಿಕ್‌ನಲ್ಲಿ 40 ಸಾವಿರದ 129 ವಿದ್ಯಾರ್ಥಿಗಳು, ಮೆಟ್ರಿಕ್ ನಂತರ 10,500 ವಿದ್ಯಾರ್ಥಿಗಳು ಈಗ ನಮ್ಮ ಹಾಸ್ಟಲ್‌ಗಳಲಿದ್ದು ಓದುತ್ತಿದ್ದಾರೆ. ಒಟ್ಟು 4 ಲಕ್ಷ ವಿದ್ಯಾರ್ಥಿಗಳಿಗೆ ಸ್ಕಾಲರ್‌ಷಿಪ್ ಕೊಡುತ್ತಿದ್ದೇವೆ. ಡಾ.ಅಂಬೇಡ್ಕರ್ ಸೆಂಟಿನರಿ ಸೆಲಿಬ್ರೇಷನ್ ಟೈಮ್‌ನಲ್ಲಿ 12 ಕೋಟಿ ರೂಪಾಯಿ ಸ್ಯಾಂಕ್ಷನ್ ಮಾಡಿ ಪ್ರತಿಯೊಂದು ಡಿವಿಷನ್‌ನಲ್ಲಿ ಒಂದೊಂದು ರೆಸಿಡೆನ್‌ಷಿಯಲ್ ಸ್ಕೂಲ್ ಪ್ರಾರಂಭ ಮಾಡಬೇಕೆಂದು ಹೇಳಿ ಆ ಪ್ರಕಾರ ಕೂಡ ಕೆಲಸ ಮಾಡುತ್ತಿದ್ದೇವೆ. ಈ ನಾಲ್ಕು ರೆಸಿಡೆನ್‌ಷಿಯಲ್ ಸ್ಕೂಲ್‌ಗಳನ್ನು ಪ್ರಾರಂಭ ಮಾಡುವ ಹೊತ್ತಿಗೆ ನಮ್ಮ ಎಸ್.ಸಿ.ಎಸ್.ಟಿ ಆರ್ಗನೈಸೇಷನ್‌ರವರು ಮತ್ತು ದಲಿತ ಸಂಘರ್ಷದ ಸ್ನೇಹಿತರು ಕೂಡ ಎಲ್ಲಾ ತಾಲ್ಲೂಕುಗಳಲ್ಲಿ ಮತ್ತು ಹೋಬಳಿ ಮಟ್ಟದಲ್ಲಿ ರೆಸಿಡೆನ್‌ಷಿಯಲ್ ಸ್ಕೂಲ್ಸ್ ಬೇಕೆಂದು ಕೇಳುತ್ತಿದ್ದಾರೆ. ಪ್ರತಿಯೊಂದು ಹೋಬಳಿಯಲ್ಲಿ ರೆಸಿಡೆನ್‌ಷಿಯಲ್ ಸ್ಕೂಲ್ ಪ್ರಾರಂಭ ಮಾಡಬೇಕಾದರೆ ಬಹಳ ಕಷ್ಟವಾಗುತ್ತದೆ. ಏಕೆಂದರೆ, ನಮ್ಮ ಕರ್ನಾಟಕ ರಾಜ್ಯದಲ್ಲಿ 27 ಸಾವಿರ ಹಳ್ಳಿಗಳು ಇವೆ. ಜೊತೆಗೆ ನಮಗೆ ಹಣದ ತೊಂದರೆಯಿರುವುದರಿಂದ ಆದಷ್ಟು ಮಟ್ಟಿಗೆ ಹಂತ ಹಂತವಾಗಿ ರೆಸಿಡೆನ್‌ಷಿಯಲ್ ಸ್ಕೂಲ್ ಪ್ರಾರಂಭ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆಂದು ಹೇಳಬಯಸುತ್ತೇನೆ. ಅದೇ ಪ್ರಕಾರ ಇಲ್ಲಿ 1-4ನೇ ತರಗತಿಯ ವಿದ್ಯಾರ್ಥಿಗಳಿಗೆ ಸ್ಕಾಲರ್‌ಷಿಪ್ ಕೊಡುತ್ತಿರಲಿಲ್ಲ. ಅವರಿಗೆ ನಾವು ಇಲಾಖೆ ಯಿಂದ 100 ರೂಪಾಯಿಯನ್ನು ಪ್ರತಿ ವರ್ಷ ಒಂದು ಇನ್‌ಸೆಂಟಿವ್ ಎಂದು ಹೇಳಿ

ಸ್ಕಾಲರ್‌ಷಿಪ್ ರೂಪದಲ್ಲಿ ಕೊಡುತ್ತಿದ್ದೇವೆ. ಅದೇ ಪ್ರಕಾರ ಈ ನಮ್ಮ ಸಮಾಜ ಕಲ್ಯಾಣ ಇಲಾಖೆ ಅಧೀನದಲ್ಲಿ 849 ಹಾಸ್ಟಲ್‌ಗಳಿವೆ ಅದರಲ್ಲಿ ನಮ್ಮ ಸ್ವಂತ ಕಟ್ಟಡಗಳು ಬಹಳ ಕಡಿಮೆ. 404 ಹಾಸ್ಟಲ್‌ಗಳಿಗೆ ಮಾತ್ರ ನಮ್ಮ ಸ್ವಂತ ಕಟ್ಟಡಗಳು ಇವೆ. ಮತ್ತೆ 41 ಹಾಸ್ಟಲ್‌ಗಳ ಕಟ್ಟಡಗಳು ಅಂಡರ್ ಕನ್‌ಸ್ಟ್ರಕ್ಷನ್‌ನಲ್ಲಿವೆ. ಇನ್ನು ಎರಡು ತಿಂಗಳಲ್ಲಿ ಈ ಕೆಲಸ ಮುಗಿದು ಹೋಗುತ್ತದೆ. ಅದೇ ಪ್ರಕಾರ ಇನ್ನೂ 158ಹಾಸ್ಟಲ್ ಬಿಲ್ಡಿಂಗ್ ಕನ್‌ಸ್ಟ್ರಕ್ಷನ್ ಮಾಡಬೇಕೆಂದು ವ್ಯವಸ್ಥೆ ಮಾಡಿದ್ದೇವೆ. ಈ ಪ್ರಕಾರ ಕಾರ್ಯ ಪ್ರಾರಂಭವಾಗುತ್ತಿದೆ. ಅದೇ ಪ್ರಕಾರ ಸಾಕಷ್ಟು ಹಾಸ್ಟಲ್‌ಗಳು ದುರಸ್ತಿಗೆ ಬಂದಿವೆ. ಮಳೆಗಾಲದಲ್ಲಾಗಲೀ. ಯಾವುದೇ ಕಾಲದಲ್ಲಿ ಆಗಲೀ. ಅಲ್ಲಿನ ವ್ಯವಸ್ಥೆಗಳು ಸರಿಯಾಗಿಲ್ಲ. ಸಾಕಷ್ಟು ಹಾಸ್ಟಲ್‌ಗಳಿಗೆ ನಾವು ಭೇಟಿ ಮಾಡಿ ನೋಡಿದ್ದೇವೆ. ಅಲ್ಲಿ ಕಿಚನ್ ಪ್ರಾಬ್ಲಮ್ ಇದೆ. ಅದೇ ಪ್ರಕಾರ ಬಾತ್‌ರೂಂ ಪ್ರಾಬ್ಲಮ್- - - - ಸಾಕಷ್ಟು ಇವೆ. ಅದೇ ಪ್ರಕಾರ 278 ಹಾಸ್ಟಲ್‌ಗಳ ದುರಸ್ತಿ ಕೆಲಸವನ್ನು ಈಗ ತೆಗೆದುಕೊಂಡಿದ್ದೇವೆ. ಅದರಲ್ಲಿ118 ಹಾಸ್ಟಲ್‌ಗಳ ದುರಸ್ತಿಕಾರ್ಯ ಈಗ ಮುಗಿದಿದೆ. ಉಳಿದಂಥ ಹಾಸ್ಟಲ್‌ಗಳ ರಿಪೇರಿಗೆ ನಾವು ಕ್ರಮ ತೆಗೆದುಕೊಳ್ಳುತ್ತಿದ್ದೇವೆ. ಅದೇ ಪ್ರಕಾರ ಸರ್ಕಾರ ನಿರ್ಣಯ ಮಾಡಿ ಯೂನಿವರ್ಸಿಟಿಗಳು ಎಲ್ಲೆಲ್ಲಿ ಇವೆ ಅಲ್ಲಲ್ಲಿ ಪೋಸ್ಟ್ ಗ್ರಾಜುಯೇಟ್ ಸ್ಟೂಡಂಟ್ಸ್‌ಗೆ ಹಾಸ್ಟೆಲ್ ಮಾಡಬೇಕೆಂದು, ಎಸ್.ಸಿ., ಎಸ್.ಟಿ., ಸ್ಟೂಡಂಟ್ಸ್‌ಗೆ ಎಂದು ಹೇಳಿ, 4 ಹಾಸ್ಟಲ್‌ಗಳನ್ನು ಯೂನಿವರ್ಸಿಟಿಗಳಲ್ಲಿ ನಾವು ಸ್ಟಾರ್ಟ್ ಮಾಡಿದ್ದೇವೆ. ಆ ಪ್ರಕಾರ ಕಾರ್ಯ ಆರಂಭವಾಗುತ್ತದೆಂದು ಹೇಳಬೇಕಾಗುತ್ತದೆ. ಅದೇ ಪ್ರಕಾರವಾಗಿ ಎಲ್ಲಾ ಹಾಸ್ಟಲ್‌ಗಳಲ್ಲಿ, ಸರ್ಕಾರಿ ಹಾಸ್ಟಲ್‌ಗಳಾಗಲೀ, ಹೊಸ ಹಾಸ್ಟಲ್‌ಗಳಾಗಲೀ, ಕಂಪಲ್ಸರಿ ನೀರಿನ ವ್ಯವಸ್ಥೆ ಆಗಬೇಕು. ಬೋರ್‌ವೆಲ್ ಹೊಡೆಯಬೇಕು. ಅದೇ ಪ್ರಕಾರ ನೀರಿನ ಸೌಲಭ್ಯ ಮಾಡಿಕೊಡಬೇಕೆಂದು ಹೇಳಿದ್ದೇವೆ. ಬಾಕಿ ಕಡೆಗಳಲ್ಲೂ ಕೂಡ ಆರೋಗ್ಯ ತಪಾಸಣೆ, ಮತ್ತು ವಿದ್ಯಾರ್ಥಿಗಳಿಗೆ ನೀರು ಸರಬರಾಜು ಯಾವ ಪ್ರಕಾರ ಮಾಡಬೇಕೋ ಆ ಪ್ರಕಾರ ಮಾಡುತ್ತೇವೆ ಅದೂ ಅಲ್ಲದೆ ನಳಗಳನ್ನು ನಾವು ಅಲ್ಲಿ ಹಾಕಿಸಬಹುದು. ಆ ಪ್ರಕಾರ ಪ್ರೈವೇಟ್ ಹಾಸ್ಟಲ್ ಬಿಲ್ಡಿಂಗ್‌ಗಳಲ್ಲೂ ಕೂಡಾ, ನೀರಿನ ವ್ಯವಸ್ಥೆ ಸರಿಯಾಗಿ ಮಾಡಿಕೊಂಡು ನಮ್ಮ ಡಿಪಾರ್ಟ್‌ಮೆಂಟ್ ಕೆಲಸ ಮಾಡುತ್ತಿದೆಯೆಂದು ಹೇಳಬೇಕಾಗುತ್ತದೆ. ಅದೇ ಪ್ರಕಾರ ನಾವು ಬಂದ ಮೇಲೆ ಕುಡಿಯುವ ನೀರಿನ ತೊಂದರೆ ನಿವಾರಣೆ ಮಾಡುತ್ತಿದ್ದೇವೆ. ಅದೇ ಪ್ರಕಾರ ವಿದ್ಯಾರ್ಥಿಗಳಿಗೆ ವಾಟರ್ ಫಿಲ್ಟರ್ ಹಾಕಿಸಿಕೊಡತಕ್ಕಂಥ ವ್ಯವಸ್ಥೆ ಮಾಡಿದ್ಧೇವೆ. ರಾ.ವಾಟರ್ ಬೇಡ, ಫಿಲ್ಟರ್ ಹಾಕಿ ನೀರು ಕೊಡಿಸಬೇಕೆಂದು ಈ ರೀತಿ ಮಾಡಿದ್ದೇವೆ.

ಶ್ರೀ ಬಾಬು ರಾವ್ ಚವಾಣ್ :- ಒಂದು ಸೆಕೆಂಡ್ ಯೀಲ್ಡ್ ಆದರೆ,

ಉಪಾಧ್ಯಕ್ಷಿಣಿಯವರು:- ಅವರು ಮುಗಿಸಲಿ. ಪ್ರತಿಯೊಬ್ಬರೂ ಹಾಗೆ ಕೇಳಿದರೆ ರಿಪ್ಲೈ ಮಾಡುವುದಕ್ಕೆ ಹೇಗೆ ಸಾಧ್ಯ?

ಶ್ರೀ ಬಿ.ಶಿವಣ್ಣ ಹಾಸ್ಟಲ್ಸ್ ಅಡ್ಮಿಷನ್ಸ್ ಬಗ್ಗೆ ಹೇಳಿದರು. ತಮಗೆ ಗೊತ್ತು, ನಮಗೆ ಕೊಟ್ಟಂಥ ಹಣದಲ್ಲಿ ನಾವು ವ್ಯವಸ್ಥೆ ಮಾಡಬೇಕು. ಬಹಳ ಮಾಡಲಿಕ್ಕೆ ಆಗುವುದಿಲ್ಲ. ನಾಲ್ಕುನೂರು ವಿದ್ಯಾರ್ಥಿಗಳು ಒಂದೇ ಕಡೆ ಬಂದರೆ ಕಷ್ಟವಾಗುತ್ತದೆ. ನಾವು ಡಿವೈಡ್ ಮಾಡಿ ಹೆಚ್ಚು ಹಾಸ್ಟೆಲ್‌ಗಳನ್ನು ತೆಗೆದುಕೊಳ್ಳಬಹುದು. 25 ರಿಂದ 50ವಿದ್ಯಾರ್ಥಿಗಳಿಗೆ ಒಂದೊಂದು ಹಾಸ್ಟಲ್ ಇಡುವುದಕ್ಕೆ ವ್ಯವಸ್ಥೆ ಮಾಡಬಹುದು. ಅದಕ್ಕಿಂಥ ಹೆಚ್ಚಾದರೆ ಪ್ರಾಬ್ಲಮ್ ಆಗುತ್ತದೆ. ಮನೆ ಬಾಡಿಗೆಗೆ ಸಿಗುವುದಿಲ್ಲ. ಕೆಲವು ಸಾರಿ ಕಟ್ಟಡಗಳು ಸರಿಯಾಗಿರುವುದಿಲ್ಲ. ವ್ಯವಸ್ಥೆ ಮಾಡುವುದು ಕಷ್ಟವಾಗುತ್ತದೆ. ಅದೇ ಪ್ರಕಾರ ನಾಲ್ಕು ನೂರು ವಿದ್ಯಾರ್ಥಿಗಳನ್ನು ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಆದರೆ ವಿದ್ಯಾರ್ಥಿಗಳು ಎಷ್ಟೇ ಬಂದರೂ ಕೂಡಾ ಸ್ಪ್ಲಿಟ್ ಮಾಡಿ ಹೆಚ್ಚು ಹಾಸ್ಟಲ್‌ಗಳನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆ. ಮಾನ್ಯ ಚೌಹಾನ್‌ರವರು ಅಲ್ಲಿ ಇಲ್ಲಿ ಒಂದು ಹಾಸ್ಟಲ್ ತೆಗೆದುಕೊಳ್ಳಬೇಕೆಂದರು. ಇದನ್ನು ಮುಂದಿನ ಸಾರಿ ಮಾಡಿ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಬಾಬು ರಾವ್ ಚವಾಣ್:- ಕರ್ನಾಟಕ ರಾಜ್ಯದಲ್ಲಿರತಕ್ಕಂಥ ಎಲ್ಲಾ ಹರಿಜನ ಗಿರಿಜನ

ವಿದ್ಯಾರ್ಥಿಗಳ ಬಗ್ಗೆ ನಾನು ಹೇಳುತ್ತಿದ್ದೇನೆ. ನಾನು ಹೇಳುವುದೇನೆಂದರೆ,

MADAM DY. SPEAKER:- He has not yielded. How can you speak? ಅವರು ಯೀಲ್ಡ್ ಆಗಿಲ್ಲ. ತಾವು ಕುಳಿತುಕೊಳ್ಳಿ. ಆಮೇಲಿಂದ ತಾವು ಕೇಳುವಿರಂತೆ.

ಶ್ರೀ ಬಿ. ಶಿವಣ್ಣ:- ಅದೇ ಪ್ರಕಾರ ಅಡಿಗೆಗಾಗಿ ಎಲ್‌ಪಿಜಿ ಗ್ಯಾಸನ್ನು ಒದಗಿಸಿಕೊಡುತ್ತಾ ಇದ್ದೇವೆ. ಅದೇ ರೀತಿಯಲ್ಲಿ ವಿದ್ಯಾರ್ಥಿಗಳು ಸರಿಯಾಗಿ ಓದವ ಸಲುವಾಗಿ ಅವರಿಗೆ ಟ್ಯೂಷನ್‌ಕೊಟ್ಟು ಅವರನ್ನು ಪ್ರಿಪೇರ್ ಮಾಡುತ್ತಿದ್ದೇವೆ. ವಿದ್ಯಾರ್ಥಿಗಳಿಗಾಗಿ ಹಾಸ್ಟಲ್‌ಗಳಲ್ಲಿ ಟೀಚರ್ಸ್‌ನ್ನು ನೇಮಕ ಮಾಡಿ ಅವರಿಗೆ ಕ್ಲಾಸಸ್‌ತೆಗೆದುಕೊಳ್ಳುತ್ತಾ ಇದ್ದೇವೆ. ಅದಕ್ಕಾಗಿ ತಿಂಗಳಿಗೆ ನೂರು ರುಪಾಯಿ ಇದ್ದುದನ್ನು ಈಗ ಇನ್ನೂರು ರೂಪಾಯಿಗಳಿಗೆ ಹೆಚ್ಚು ಮಾಡುತ್ತಾ ಇದ್ದೇವೆ. ಅದೇ ಪ್ರಕಾರ ಬಹಳಷ್ಟು ಹಾಸ್ಟಲ್‌ಗಳಲ್ಲಿ ಪಾತ್ರೆಗಳು, ನೀರಿನ ವ್ಯವಸ್ಥೆಯು ಚೆನ್ನಾಗಿ ಇರಲ್ಲಿಲ್ಲ. ಶೌಚವ್ಯವಸ್ಥೆಯೂ ಸರಿಯಾಗಿ ಇರಲಿಲ್ಲ. ಅದಕ್ಕಾಗಿ ಹೊಸ ಪಾತ್ರೆಗಳನ್ನು ತೆಗೆದುಕೊಳ್ಳಲು ವ್ಯವಸ್ಥೆಯನ್ನು ನಾವು ಮಾಡಿದ್ದೇವೆ. ಬುಕ್ ಬ್ಯಾಂಕ್‌ಗಳನ್ನೂ ಕೂಡ ಮಾಡಿದ್ದೇವೆ. ಎಲ್ಲಾ ಹಾಸ್ಟಲ್‌ಗಳಲ್ಲಿ ಸ್ಪೋರ್ಟ್ಸ್, ಕಲ್ಚರಲ್ ಆಕ್ಟಿವಿಟೀಸ್‌ಗಳನ್ನು, ಮತ್ತು ಲೈಬ್ರರಿ ವ್ಯವಸ್ಥೆಯನ್ನು ಕೂಡ ನಾವು ಮಾಡಿದ್ಧೇವೆ. ಎಲ್ಲಾ ಹಾಸ್ಟಲ್‌ಗಳಲ್ಲಿ ಲೈಬ್ರರಿ ಕಂಪಲ್‌ಸರಿಯಾಗಿ ಇರಬೇಕು ಅದರಲ್ಲಿ ಟೆಕ್ಸ್ಟ್‌ಬುಕ್‌ಗಳು ಕೂಡ ಇರಬೇಕು, ಸ್ನಾನ ಮತ್ತು ನೀರಿನ ವ್ಯವಸ್ಥೆಯಾಗಬೇಕೆಂದು ಮಾಡಿದ್ದೇವೆ. ಸ್ಪೋರ್ಟ್ಸ್‌ಗಾಗಿ ವ್ಯವಸ್ಥೆ ಮಾಡಿದ್ದೇವೆ. ರಾಜ್ಯ ಮಟ್ಟದಲ್ಲಿ ಸ್ಪರ್ಧೆಯನ್ನು ಕೂಡ ವ್ಯವಸ್ಥೆ ಮಾಡಬೇಕೆಂದಿದ್ದೇವೆ. ಜಿಲ್ಲಾ ಮಟ್ಟದಲ್ಲಿ ಸ್ಪರ್ಧೆಗಳನ್ನು ಮಾಡಿದ್ದು ಹೋದ ವರ್ಷ ರಾಜ್ಯ ಮಟ್ಟದಲ್ಲಿ ಮಾಡಿದ ಸ್ಪರ್ಧೆಯನ್ನು ಹೋದ ವರ್ಷ ಮೈಸೂರಿನಲ್ಲಿ ಮಾಡಿದ್ದೇವೆ. ಹೀಗೆ ಅವರನ್ನು ಕೂಡ ಹೆಚ್ಚಾಗಿ ಸ್ಪೋರ್ಟ್‌ನಲ್ಲಿ ಇನ್‌ವಾಲ್ವ ಮಾಡುತ್ತಾ ಇದ್ದೇವೆ. ಅದೇ ಪ್ರಕಾರ ಯುವ ಜನಮೇಳವನ್ನು ಕೂಡ ಮಾಡುವ ಬಗ್ಗೆ ನಾವು ಉದ್ದೇಶ ಇಟ್ಟುಕೊಂಡಿದ್ದೇವೆ. ಮುಂದಿನ ಬಾರಿಗೆ ಈ ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತೇವೆ. ನಮ್ಮಲ್ಲಿ 170 ಅನುದಾನ ಪಡೆಯುವ ವಿದ್ಯಾರ್ಥಿ ನಿಲಯಗಳು ಇವೆ. ಅವರಿಗೆ ನಾವು ಸರಕಾರದಿಂದ ಸಹಾಯವನ್ನು ಕೊಡುತ್ತೇವೆ ಅಲ್ಲದೆ ಕಟ್ಟಡ ನಿರ್ಮಾಣಕ್ಕಾಗಿ ಕೂಡ ದುಡ್ಡು ಕೊಡುತ್ತಾ ಇದ್ದೇವೆ. ಈಗ ಹಾಸ್ಟೆಲ್ ಚಾರ್ಜನ್ನು ಹಾಗೂ ಬೋರ್ಡಿಂಗ್ ಚಾರ್ಜಸ್ ಅನ್ನು ಹೆಚ್ಚು ಮಾಡಬೇಕೆಂಬ ವಿಚಾರದಲ್ಲಿ ಬಹಳಷ್ಟು ಸದಸ್ಯರು ಅಭಿಪ್ರಾಯ ಕೊಟ್ಟಿದ್ದಾರೆ. ನಾವು ಕೂಡ ಈ ಬಗ್ಗೆ ವಿಚಾರ ಮಾಡಿದ್ದೇವೆ. ಮಾನ್ಯ ಮುಖ್ಯ ಮಂತ್ರಿಗಳು ಆರ್ಥಿಕ ಮಂತ್ರಿಗಳೂ ಕೂಡ ಆಗಿರುವ ಕಾರಣ ಅವರೊಂದಿಗೆ ಚರ್ಚೆ ಮಾಡಿ ಇದನ್ನು ಹೆಚ್ಚು ಮಾಡುವ ಬಗ್ಗೆ ಬೇಡಿಕೆಯನ್ನು ನಾನು ಅವರ ಮುಂದಿಟ್ಟಿದ್ದೇನೆ. ಅವರು ಹೆಚ್ಚು ಮಾಡುವ ಬಗ್ಗೆ ಹೇಳಿದ್ದಾರೆ. ಅದಕ್ಕಾಗಿ ಒಂದು ಕೋಟಿ ರೂಪಾಯಿಗಳನ್ನು ಅವರು ವ್ಯವಸ್ಥೆ ಮಾಡಿದ್ದಾರೆ. ಆದ್ದರಿಂದ ಹಾಸ್ಟಲ್ ಮತ್ತು ಬೋರ್ಡಿಂಗ್ ಚಾರ್ಜನ್ನು ಹೆಚ್ಚು ಮಾಡಲು ನಾವು ತಯಾರಿದ್ದೇವೆ ಎಂದು ಹೇಳುತ್ತೇನೆ. ಅದೇ ಗ್ರಾಂಟ್ ಇನ್ ಏಡ್ ಹಾಸ್ಟಲ್‌ನವರು ಯಾರೇ ಮುಂದು ಬಂದರೂ ಅವರಿಗೆ ಹಾಸ್ಟಲ್ ಕಟ್ಟಡ ಕಟ್ಟಲು ಹಣದ ಸಹಾಯ ಮಾಡುತ್ತೇವೆ. ಮಾನ್ಯ ಅಧ್ಯಕ್ಷರೇ, ಅಂಬೇಡ್ಕರ್ ಭವನದ ಬಗ್ಗೆ ಹಿಂದೆ ಕೂಡ ಒಂದು ಪ್ರಶ್ನೆಯನ್ನು ಇಲ್ಲಿ ಕೇಳಿದರು. ಈ ಬೇಡಿಕೆಯು ಬಹಳ ದಿನಗಳಿಂದ ಇತ್ತು, ಅದಕ್ಕಾಗಿ ನಾವು ಬಹಳ ಕಷ್ಟಪಟ್ಟು ಸಮಾಲೋಚನೆ .ಮಾಡಿದಾಗ ಬಂದ ವಿಚಾರದ ಪ್ರಕಾರವಾಗಿ ನಮ್ಮ ಮೊದಲಿನ ಅಂದಾಜು ವೆಚ್ಚ ನಾಲ್ಕೂವರೆ ಕೋಟಿ ಇತ್ತು. ಈ ಹಣದಿಂದ ಆಗುವುದಿಲ್ಲ ಎಂದು ಕಂಡು ಬಂದಿದ್ದು ಈಗ ಅದನ್ನು ಆರೂವರೆ ಕೋಟಿ ಎಂದು ಮಾಡಿದ್ದೇವೆ. ಈ ವಿಚಾರವು ಸಚಿವ ಸಂಪುಟದ ಮುಂದೆ ಬಂದು ಆರೂವರೆ ಕೋಟಿ ರೂಪಾಯಿಗಳನ್ನು ಮಂಜೂರು ಕೂಡ ಮಾಡಿದ್ದಾರೆ. ಈ ಕಲಸವು ಸಹ ಸಧ್ಯಕ್ಕೆ ಪ್ರಾರಂಭವಾಗಿದೆ ಎಂದು ಹೇಳ ಬಯಸುತ್ತೇನೆ.

ಇನ್ನು ಹಿಂದುಳಿದ ವರ್ಗಗಳು ಮತ್ತು ಅಲ್ಪಸಂಖ್ಯಾತರ ಬಗ್ಗೆ ಹೇಳುವುದಾದರೆ, ಅಧ್ಯಕ್ಷರೇ, ನಮ್ಮ ಎಸ್ ಸಿ ಎಸ್ ಟಿ ಡೆವಲಪ್‌ಮೆಂಟ್ ಕಾರ್ಪೊರೇಷನ್ ಇದೆ. ಅದು ಕೆಲಸ ಮಾಡಿದ ರೀತಿಯು ನನಗೆ ತುಂಬಾ

ಸಂತೋಷವನ್ನುಂಟು ಮಾಡಿದೆ. ಅಲ್ಪ ಸ್ವಲ್ಪ ಹೆಚ್ಚು ಕಡಿಮೆ ಇರಬಹುದು, ಇಲ್ಲವೆಂದೇನೂ ಇಲ್ಲ. ಅದನ್ನು ನಾವುಗಳು ಕೂಡಿ ಸರಿಪಡಿಸೋಣ. ಮಾನ್ಯ ರಾಮಕೃಷ್ಣರವರು ಎಷ್ಟೋ ವಿಚಾರಗಳು ನಮಗೆ ಗೊತ್ತಿರುವುದಿಲ್ಲ ಅದಕ್ಕಾಗಿ ಕಮಿಟಿಗಳನ್ನು ಮಾಡಿ ಎಂದು ಹೇಳುತ್ತಾ ಇದ್ದರು. ಇದನ್ನು ನಾನು ಒಪ್ಪಿಕೊಳ್ಳುತ್ತೇನೆ. ಶಾಸಕರು ಕಮಿಟಿಗಳ ಮೆಂಬರ್ಸ್ ಆಗಬೇಕು, ಜನರಿಗೆ ಅದರ ಉಪಯೋಗವಾಗಬೇಕು. ಸಮಸ್ಯೆಗಳು ಇದ್ದರೆ ಅಧಿಕಾರಿಗಳ ಜೊತೆಯಲ್ಲಿ ಚರ್ಚೆ ಮಾಡಬೇಕು. ಅದರಿಂದ ಲಾಭ ಪಡೆದುಕೊಳ್ಳಬೇಕು. ಅವರು ಹೇಳಿದ ಹಾಗೆ ಹಾಸ್ಟಲ್‌ಗಳಿಗೆ ಕೂಡ ಕಮಿಟಿಗಳನ್ನು ಮಾಡುವುದರಲ್ಲಿ ತಪ್ಪೇನು ಇಲ್ಲ, ಏತಕ್ಕೆಂದರೆ ಶಾಸಕರು ತಮ್ಮ ತಮ್ಮ ಕ್ಷೇತ್ರಗಳಲ್ಲಿ ಅವುಗಳನ್ನು ಸರಿಯಾಗಿ ನೋಡಿಕೊಂಡರೆ ನಮಗೆ ತುಂಬಾ ಸಹಾಯವನ್ನು ಮಾಡಿದ ಹಾಗೆ ಆಗುತ್ತದೆ. ನಮ್ಮ ಮಾನ್ಯ ಸದಸ್ಯರಿಗೆಲ್ಲಾ ನಾನು ಅಭಿನಂದನೆಗಳನ್ನು ಸಲ್ಲಿಸಬೇಕಾಗುತ್ತದೆ, ಏಕೆಂದರೆ ಯಾವುದೇ ವಿಚಾರ ಅಂದರೆ ಎಸ್ ಸಿ ಎಸ್ ಟಿ ಗಳ ವಿಚಾರವಾಗಲೀ. , ಹಿಂದುಳಿದ ವರ್ಗಗಳ ವಿಚಾರವಾಗಲೀ, ಅಲ್ಪಸಂಖ್ಯಾತರ ವಿಚಾರವಾಗಲಿ, ಯಾವ ಜಾತಿ ಭೇದಗಳಿಲ್ಲದೆ ಎಲ್ಲಾ ಶಾಸಕರೂ ತುಂಬಾ ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದಾರೆ. ಆ ದಿಶೆಯಲ್ಲಿ ನಾವು ಸಾಕಷ್ಟು ಒಳ್ಳೆಯ ರೀತಿಯಲ್ಲಿ ಪ್ರಯತ್ನ ಮಾಡಿದ್ದೇವೆ ಎಂದು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಎಸ್‌ಸಿ ಎಸ್‌ಟಿ ಅಭಿವೃದ್ಧಿ ಕಾರ್ಪೋರೇಷನ್ ತುಂಬಾ ಚೆನ್ನಾಗಿ ಕೆಲಸ ಮಾಡುತ್ತಿದೆ. ನಮ್ಮಲ್ಲಿ ಈ ವರ್ಗದ ಜನರು ಯಾರು ಭೂರಹಿತರು ಇದ್ದಾರೆ, ಅವರಿಗೆ ಎರಡು ಎಕರೆ ಭೂಮಿಯನ್ನು ನಾವು ಕೊಡುತ್ತಾ ಇದ್ದೇವೆ. ನಮ್ಮ ಮೋಟಮ್ಮನವರಿಗೆ ಹೇಳಬೇಕೆಂದರೆ , ಚಿಕ್ಕಮಗಳೂರಿನಲ್ಲಿ ಇದಕ್ಕಾಗಿ 370 ಎಕರೆ ಲ್ಯಾಂಡ್ ತೆಗೆದುಕೊಂಡಿದ್ದೇವೆ. ಅದಕ್ಕೆ ನಾನು, ತಾವೂ ಒಂದು ದಿವಸ ಹೋಗಿ ಅದನ್ನು ಕಾರ್ಯಾರಂಭ ಮಾಡಬೇಕು.

ಶ್ರೀಮತಿ ಮೋಟಮ್ಮ :- ಎಸ್ ಸಿ ಎಸ್ ಟಿ ಕಾರ್ಪೋರೇಷನ್ ಮೂಲಕ ಹರಿಜನರಿಗೆ ಜಮೀನು ಕೊಡಲು ಜಮೀನು ಕೊಂಡು ಕೊಂಡಿರುವುದರ ಬಗ್ಗೆ ನಾನು ಒಪ್ಪಿಕೊಂಡಿದ್ದೇನೆ. ಮತ್ತು ಅಪ್ರಿಷಿಯೇಟ್ ಮಾಡಿದ್ದೇನೆ. ಇದೇ ರೀತಿ ಬೇರೆ ಜಿಲ್ಲೆಗಳಲ್ಲೂ ಆಗಬೇಕೆಂದು ನಾನು ಹೇಳಿದ್ದೇನೆ.

ಡಾ. ಎನ್. ಬಿ. ನಂಜಪ್ಪ:- ಸ್ಕೀಂ ಒಳ್ಳೆಯದಿದೆ, ಆದರೆ, ಬಹಳ ಸುಲಭವಾಗಿ ಜಮೀನು ಸಿಗದ ಹಾಗೆ ಮಾಡಿದ್ದಾರೆ. ಎರಡು ವರ್ಷ ತಿರುಗಿದರೂ ಕೂಡ ಆಗೋಲ್ಲ.

ಶ್ರೀ ಬಿ.ಶಿವಣ್ಣ:- ಇಲ್ಲಿ ಸಮಸ್ಯೆ ಏನಾಗುತ್ತದೆಂದರೆ, ನಮಗೆ 10 ಅರ್ಜಿಗಳನ್ನು ಡಿಸ್‌ಪೋಸ್ ಮಾಡಲು ಪವರ್ ಇರುತ್ತದೆ. ತಾಲ್ಲೂಕು ಅಧಿಕಾರಿಗಳಿಗೆ 25-30 ಅರ್ಜಿಗಳು ಬಂದುಬಿಟ್ಟರೆ ಸ್ವಲ್ಪ ಕಷ್ಟವಾಗುತ್ತದೆ. ಆ ಕಾಲಕ್ಕೆ ತಾವು ಸ್ವಲ್ಪ ಸಹಾಯ ಮಾಡಿದರೆ ಫಲಾನುಭವಿಗಳ ಲಿಸ್ಟ್ ತಯಾರು ಮಾಡುವುದರಲ್ಲಿ ತೊಂದರೆಯಾಗುವುದಿಲ್ಲವೆಂದು ನನಗನ್ನಿಸುತ್ತದೆ. ತಮ್ಮ ಕ್ಷೇತ್ರದ ಬಗ್ಗೆ ಬೇಕಾದರೆ ನನಗೆ ಲಿಸ್ಟ್ ಕೊಡಿ. ಅಥವಾ ನನ್ನ ಹತ್ತಿರ ಚರ್ಚೆ ಮಾಡಿ. ಅದಕ್ಕೆ ನಾನು ತಯಾರಿದ್ದೇನೆ, ಅದೇ ಪ್ರಕಾರ ನಮ್ಮ ಎಂ.ಡಿ.ಯವರಿಗೆ ಹೇಳುತ್ತೇನೆ. ತಾವು ಯಾವಾಗ ಹೋಗುತ್ತೀರೋ ಆಗ ಅವರ ಜೊತೆ ಮಾತನಾಡಿಕೊಂಡು ಸೂಕ್ತ ವ್ಯವಸ್ಥೆ ಮಾಡಿಕೊಳ್ಳಬಹುದು. ಒಟ್ಟಿನಲ್ಲಿ ಈ ಸ್ಕೀಮ್ ಅನ್ನು ಯಶಸ್ವಿ ಮಾಡುವುದು ತಮ್ಮೆಲ್ಲರ ಮೇಲೆ ಅವಲಂಬಿಸಿದೆ ಎಂದು ಹೇಳಬೇಕಾಗುತ್ತದೆ. ನಾವು ತಮಗೆ ಮತ್ತೊಮ್ಮೆ ಹೇಳುತ್ತೇನೆ. ತಾವು ಸಂಪೂರ್ಣ ಬೆಂಬಲ ನೀಡಿದರೆ, ಹರಿಜನರಾಗಲಿ,......

ಡಾ. ಎನ್. ಬಿ. ನಂಜಪ್ಪ:- ನಿಮ್ಮ ಇಲಾಖೆಯ ಕೆಲಸ ಸರಿಯಾಗಿ ಆಗುತ್ತಿಲ್ಲ.

ಶ್ರೀ ಬಿ. ಶಿವಣ್ಣ:- ಈ ಪ್ರಕಾರ ಎಸ್ ಸಿ ಎಸ್ ಟಿ ಡೆವಲಪ್‌ಮೆಂಟ್ ಕಾರ್ಪೋರೇಷನ್ನಿಂದ ನಾವು ಸಹಾಯ ಒದಗಿಸುತ್ತಿದ್ದೇವೆ. ಜೊತೆಗೆ ನಾವು ಮಾರ್ಜಿನ್ ಮನಿ ಲೋನ್ಸ್, ಸಬ್ಸಿಡಿ ಲೋನ್ಸ್ ಅನ್ನು ಸಾಕಷ್ಟು ಜನರಿಗೆ ಕೊಡುತ್ತಿದ್ದೇವೆ. ಈ ಸಲ 21ಸಾವಿರ ಜನರಿಗೆ ಕೊಡಬೇಕೆಂದಿದ್ದೇವೆ.

(ಸಭಾಧ್ಯಕ್ಷರು ಅಧ್ಯಕ್ಷ ಸ್ಥಾನವನ್ನಲಂಕರಿಸಿದರು)

ಈಗ ನಾವು 16-17 ಸಾವಿರ ಜನರಿಗೆ ಕೊಡುತ್ತಿದ್ದೇವೆ. ಇದೇ ಪ್ರಕಾರ ಮೋಟಾರ್ ಡ್ರೈವಿಂಗ್, ಕಂಪ್ಯೂಟರ್ ಟ್ರೈನಿಂಗ್, ಸ್ವಯಂ ಉದ್ಯೋಗ ಯೋಜನೆ ಏನಿದೆ ಇವು ಬಹಳ ಒಳ್ಳೆಯ ಯೋಜನೆಗಳಾಗಿವೆ. ಆದ್ದರಿಂದ , ಎಸ್‌ಸಿ ಎಸ್‌ಟಿ ಅಭಿವೃದ್ಧಿ ನಿಗಮ ಒಳ್ಳೆಯ ಕೆಲಸ ಮಾಡುತ್ತಿದೆ. ಆದರೂ ಕೂಡ ಯಾವುದೇ ತೊಂದರೆಗಳಿದ್ದರೂ ತಾವು ಅಧಿಕಾರಿಗಳ ಜೊತೆ ಮಾತನಾಡಿ ಸರಿಪಡಿಸಬಹುದೆಂದು ನನಗನ್ನಿಸುತ್ತದೆ. ಅದೇ ಪ್ರಕಾರ ಹಿಂದುಳಿದ ವರ್ಗಗಳಿಗೆ ಮತ್ತು ಅಲ್ಪಸಂಖ್ಯಾತರಿಗೆ ಕೂಡ ಸಾಕಷ್ಟು ಸಹಾಯ ಆಗುತ್ತಿದೆ. ಈ ವರ್ಗಗಳಿಗೆ ಸೇರಿದಂತೆ 700-800 ಗ್ರಾಂಟ್ ಇನ್ ಏಡ್ ಹಾಸ್ಟಲ್‌ಗಳಿವೆ ಮತ್ತು ಧಾರ್ಮಿಕ ಅಲ್ಪ ಸಂಖ್ಯಾತರ ಹಾಸ್ಟಲ್‌ಗಳಿಗೂ ಸಹ ಸಹಾಯ ಮಾಡುತ್ತಿದ್ದೇವೆ. ಈ ವರ್ಗದವರಿಗೆ ಪಠ್ಯ ಪುಸ್ತಕಗಳಾಗಲೀ ಲೈಬ್ರರಿಯಾಗಲೀ ಪ್ರತಿ ಅನುಕೂಲವನ್ನು ಮಾಡಿಕೊಟ್ಟಿದ್ದೇವೆಂದು ಹೇಳುತ್ತೇನೆ. ನನ್ನ ಸ್ನೇಹಿತರಾದ ಡೆರ್ರಿಕ್‌ರವರು ಆಂಗ್ಲೋ ಇಂಡಿಯನ್ನರ ಬಗ್ಗೆ ಹೇಳಿದರು. ಆಂಗ್ಲೋ ಇಂಡಿಯನ್ಸ್ ಅಂದರೆ ಕ್ರಿಶ್ಚಿಯನ್ಸ್ ಅಂತ ಬರುತ್ತದೆ. ಈ ಆಂಗ್ಲೋ ಇಂಡಿಯಸ್ ಬಗ್ಗೆ ಸರ್ವೆ ಮಾಡಿಸಿಲ್ಲ ಎಂದು ಅವರು ಹೇಳಿದ್ದಾರೆ. ನಾವು ಇಲಾಖೆ ವತಿಯಿಂದ socio-economic conditions of Anglo Indians ಬಗ್ಗೆ ಸರ್ವೆ ಮಾಡಿಸುತ್ತೇನೆ. ಈ ಕೆಲಸ ಆದ ಮೇಲೆ ಯಾವ ಪ್ರಕಾರ ಆಂಗ್ಲೋ ಇಂಡಿಯನ್ಸ್‌ಗೆ ಸಹಾಯ ಮಾಡಬೇಕೋ ಆ ರೀತಿ ಮಾಡುತ್ತೇವೆ. ಅಲ್ಪ ಸಂಖ್ಯಾತರು ಏನಿದ್ದಾರೆ ಅವರ ಏಳಿಗೆ ಸಲುವಾಗಿ ಹಿಂದುಳಿದ ವರ್ಗಗಳ ಇಲಾಖೆಯಿಂದ ನಾವು ಸಾಕಷ್ಟು ಕೆಲಸ ಮಾಡುತ್ತಿದ್ದೇವೆ. ಅಲ್ಪ ಸಂಖ್ಯಾತರು ಇದರ ಲಾಭ ಪಡೆದುಕೊಳ್ಳಬಹುದು. ಮಾನ್ಯ ಡೆರ್ರಿಕ್‌ರವರು ಹೇಳಿರುವಂತೆ ವಿಷಯದ ಬಗ್ಗೆ ಆಂಗ್ಲೋ ಇಂಡಿಯನ್ನರಿಗೆ ಸಾಕಷ್ಟು ಲಾಭ ಕೊಡಿಸುವಂತಹ ರೀತಿಯಲ್ಲಿ ಪ್ರಯತ್ನ ಮಾಡುತ್ತೇವೆ. ಅವರೂ ಕೂಡ ಈಗ ಮೈನಾರಿಟೀಸ್ ನಿಗಮಕ್ಕೆ ಹೋಗಿ ಸಾಲ ತೆಗೆದುಕೊಳ್ಳಬಹುದು, ಮತ್ತು ಅವರ ಬಹಳಷ್ಟು ಕಾರ್ಯಕ್ರಮಗಳಲ್ಲಿ ನಾನು ಭಾಗವಹಿಸಿ ಅವರಿಗೆ ಯಾವ ಅನಾನುಕೂಲತೆಗಳಿಲ್ಲದ ಹಾಗೆ ನೋಡಿಕೊಳ್ಳಲು ಪ್ರಯತ್ನಿಸುತ್ತೇನೆ. ಅದೇ ಪ್ರಕಾರ ಅಲ್ಪ ಸಂಖ್ಯಾತರ ಸಲುವಾಗಿ ಇನ್ನೂ ಕೆಲವು ಕಾರ್ಯಕ್ರಮಗಳನ್ನು ತೆಗೆದುಕೊಂಡಿರುವ ಬಗ್ಗೆ ಹೇಳಿದ್ದೇನೆ. ಟೈಲರಿಂಗ್ ಕಂ ಎಂಬ್ರಾಯಿಡರಿ, ಇನ್‌ಸ್ಟಿಟ್ಯೂಷನ್‌ಗಳನ್ನು ನಾವು ತೆಗೆದಿದ್ದೇವೆ.

Tailoring-cum-embroidary training Institutions, Irrigation Borewells, Stipend in ITI and Diploma students for minarities Stipend to Nurses Training, Subsidy for purchase of house sites and construction of Houses, and Acquisition of sites,

ಈ ಪ್ರಕಾರ ಕಾರ್ಯಕ್ರಮಗಳನ್ನು ಕೈಗೊಳ್ಳಲು ನಾವು ಮೂರು ಕೋಟಿ 64 ಲಕ್ಷ ರೂಪಾಯಿಗಳನ್ನು ಮೈನಾರಿಟಿ ಕಾರ್ಪೋರೇಷನ್‌ನಲ್ಲಿ ಇಟ್ಟಿದ್ದೇವೆ. ಈ ಎಲ್ಲಾ ಪ್ರೊಗ್ರಾಮ್‌ಗಳನ್ನು 1992-93 ರಲ್ಲಿ ನಾವು ಇಂಪ್ಲಿಮೆಂಟ್ ಮಾಡುವವರಿದ್ದೇವೆ. ಈ ಪ್ರಕಾರ ಮೈನಾರಿಟಿ ಜನಾಂಗದವರು ಸಾಕಷ್ಟು ಬೆನಿಫಿಟ್ ಇದರಲ್ಲಿ ತೆಗೆದುಕೊಳ್ಳಬಹುದು ಎಂದು ನಾನು ಹೇಳಬಯಸುತ್ತೇನೆ. ಆಮೇಲೆ ಮಾನ್ಯ ಉಮಾಪತಿಯವರು ಗೊಲ್ಲ ಕಮ್ಯುನಿಟಿ ಬಗ್ಗೆ ಹೇಳಿದರು. ಗೊಲ್ಲ ಕಮ್ಯುನಿಟಿ ಬಗ್ಗೆ ತಮಗೆ ಗೊತ್ತಿದೆ. ಈ ಲಿಸ್ಟನಲ್ಲಿ ಏ ಗ್ರೂಪ್‌ನಲ್ಲಿ ಸೇರಿದಂಥ ಕಮ್ಯುನಿಟಿ ಇದೆ. ಅದಕ್ಕೆ ಬ್ಯಾಕ್‌ವರ್ಡ್ ಟ್ರೈಬ್ ಎಂದು ಹೇಳಿ ಮೊದಲು ಟ್ರೀಟ್ ಮಾಡುತ್ತಿದೆವು. ಅದಕ್ಕೆ 5 ಪರ್ಸಂಟ್ ರಿಸರ್ವೇಷನ್ ಇದೆ. ಹೀಗಾಗಿ ಗೊಲ್ಲ ಕಮ್ಯುನಿಟಿ ಏನು ಸಹಾಯ ಬೇಕು ಎಂದು ಹೇಳಿದ್ದಾರೆ, ಅದೇ ಪ್ರಕಾರ ಮಾನ್ಯ ಮುಖ್ಯಮಂತ್ರಿಗಳು ಮತ್ತು ನಾವೂ ಕೂಡ ಅವರಿಗೆ ಬೋರ್ಡಿಂಗ್ ಮತ್ತು ಹಾಸ್ಟಲ್ ಬಗ್ಗೆ ಸಹಾಯವನ್ನು ಮಾಡಿದ್ದೇವೆ. ಈಗ ಅವರು ಈ ಜನಾಂಗವನ್ನು ಎಸ್.ಸಿ ಮತ್ತು ಎಸ್.ಟಿ ಜನಾಂಗದ ಜೊತೆ ಸೇರಿಸಬೇಕೆಂದು ಹೇಳಿದರು, ಆದರೆ ನಾವು ಯಾವುದೇ ಕಮ್ಯೂನಿಟಿಯನ್ನು ಎಸ್.ಸಿ ಮತ್ತು ಎಸ್.ಟಿಗೆ ಸೇರಿಸಬೇಕು ಎಂದು ಹೇಳಿದರೆ ಮೊದಲು ನಾವು ಕೇಂದ್ರ ಸರ್ಕಾರಕ್ಕೆ ಬರೆಯ

ಬೇಕಾಗುತ್ತದೆ. ತಮಗೆ ಗೊತ್ತಿದೆ , ಇಲ್ಲಿ ಸಿನಾನಿಮಸ್ ಕಮಿಟಿ ಎಂದು ಇದೆ. ಸಿನಾನಿಮಸ್ ಕಮಿಟಿಯಲ್ಲಿ ಸಾಕಷ್ಟು ಮೆಂಬರ್ಸ್‌ಗಳು ಇದ್ದಾರೆ. ಅಲ್ಲಿ ನಾವು ಚರ್ಚೆ ಮಾಡಿ ನಿಮ್ಮ ಸಲಹೆಗಳನ್ನು ಕರ್ನಾಟಕ ಸರ್ಕಾರದಿಂದ ಕೇಂದ್ರ ಸರ್ಕಾರಕ್ಕೆ ಕಳುಹಿಸುವಂಥ ಒಂದು ಸಂದರ್ಭ ಇದೆ. ಕರ್ನಾಟಕ ಸರ್ಕಾರ ಈ ಕಮಿಟಿಗೆ ರೆಕಮೆಂಡ್ ಮಾಡಬಹುದು. ಆದರೆ ಇನ್‌ಕ್ಲೂಡ್ ಮಾಡುವ ಪವರ್ಸ್ ನಮಗೆ ಇಲ್ಲ ಎಂದು ಹೇಳಬಯಸುತ್ತೇನೆ. ನಾಳೆ 28ನೇ ತಾರೀಖಿಗೆ ಮೀಟಿಂಗನ್ನು ಇಟ್ಟುಕೊಂಡಿದ್ದೇವೆ. ಆಗ ನಾವು ಇದನ್ನು ಕನ್‌ಸಿಡರ್ ಮಾಡುತ್ತೇವೆ ಎಂದು ಹೇಳಬಯಸುತ್ತೇನೆ. ಅದೇ ಪ್ರಕಾರ ನಮ್ಮ ಮಾನ್ಯ ಸದಸ್ಯರಾದ ಚಿಕ್ಕಮಾದು ಅವರು ಹೇಳಿದರು ಏನೆಂದರೆ, ಐದಾರು ಕಮ್ಯುನಿಟಿಗಳನ್ನು ಎಸ್.ಟಿ ಯಲ್ಲಿ ಸೇರಿಸಿದಾರೆ ಎಂದು, ಮಾನ್ಯ ಅಧ್ಯಕ್ಷರೇ, ಮೊನ್ನೆ ಸೋಷಿಯಲ್ ವೆಲ್‌ಫೇರ್ ಮಿನಿಸ್ಟರ್ಸ್ ಕಾನ್‌ಫರೆನ್ಸ್ ಆಯಿತು. ಅಲ್ಲಿ ಈ ರಿಜರ್‌ವೇಷನನ್ನು ಪಾಪ್ಯುಲೇಷನ್ ಪ್ರಕಾರ ಕೊಡಬೇಕು ಎಂದು ಹೇಳಿದ್ದಾರೆ. 15 ಪರ್ಸೆಂಟ್ ಎಸ್.ಸಿ.ಗಳಿಗೆ ಮತ್ತು ಮೂರು ಪರ್‌ಸೆಂಟ್ ಎಸ್.ಟಿ.ಗಳಿಗೆ ಕೊಡಬೇಕು ಎಂದು ಇದೆ

ವಿಷಯ:- ಪ್ರಕಟಣೆ ಟ್ರೆನಿಡಾಡ್ ಮತ್ತು ಟೊಬಾಗೊ ದೇಶದ ಹೌಸ್ ಆಫ್ ರೆಪ್ರೆಸೆಂಟಿಟೀವ್ಸ್ ಅಧ್ಯಕ್ಷರು ಸಭೆಗೆ ಆಗಮಿಸಿರುವ ಬಗ್ಗೆ.

ಅಧ್ಯಕ್ಷರು:- ಮಾನ್ಯ ಸದಸ್ಯರಲ್ಲಿ ಒಂದು ವಿನಂತಿ. ಟ್ರಿನಿಡಾಡ್ ಮತ್ತು ಟೊಬಾಗೊ ದೇಶದ ಹೌಸ್ ಆಫ್ ರೆಪ್ರೆಸೆಂಟಿಟೀವ್ಸ್‌ನ ಸನ್ಮಾನ್ಯ ಅಧ್ಯಕ್ಷರಾದ ಮಾನ್ಯ ಸೀ ಪಾಲ್‌ಅವರು ಈಗ ಇಲ್ಲಿ ದಯಮಾಡಿಸಿದ್ದಾರೆ. ಸಭೆಯ ಪರವಾಗಿ, ನನ್ನ ಪರನಾಗಿ ಅವರಿಗೆ ಹಾರ್ದಿಕವಾದಂಥ ಶುಭಕಾಮನೆಗಳನ್ನು ವ್ಯಕ್ತಪಡಿಸುತ್ತಿದ್ದೇನೆ ಅವರ ಶ್ರೀಮತಿಯವರು ಭಾರತದ ಸ್ಥಳದವರು. ಅವರು ಪಾಟ್ನಾದವರು. ಅವರ ವಂಶೀಕರು ಪಾಟ್ನಾದವರು. ಅವರು ಕೆಲವು ತಲೆಮಾರಿನ ಕೆಳಗೆ ಅಲ್ಲಿಗೆ ಹೋಗಿ ನೆಲೆಸಿ ಈಗ ಆ ದೇಶದ ಅತ್ಯುನ್ನತ ಸಭೆಯ ಸನ್ಮಾನ್ಯ ಅಧ್ಯಕ್ಷರಾಗಿರತಕ್ಕಂಥದ್ದು ನಮ್ಮ ದೇಶಕ್ಕೆ ಹೆಮ್ಮೆಯ ವಿಷಯ ಎಂದು ಹೇಳಿ ನಾನು ಅವರನ್ನು ವಿಶೇಷವಾಗಿ ಅಭಿನಂದಿಸುತ್ತೇನೆ.

(ಈ ಹಂತದಲ್ಲಿ ಎಲ್ಲಾ ಮಾನ್ಯ ಸದಸ್ಯರುಗಳು ಚಪ್ಪಾಳೆ ತಟ್ಟಿ ಅವರನ್ನು ಸ್ವಾಗತಿಸಿದರು)

(ಸಮಾಜ ಕಲ್ಯಾಣ ಇಲಾಖೆಯ ಬೇಡಿಕೆಗಳ ಮೇಲಿನ ಚರ್ಚೆಗೆ ಉತ್ತರ ಮುಂದುವರಿದುದು)

ಶ್ರೀ ಬಿ.ಶಿವಣ್ಣ:- ಮಾನ್ಯ ಅಧ್ಯಕ್ಷರೇ, ಮೊನ್ನೆ ದೆಹಲಿಯಲ್ಲಿ 21ನೇ ತಾರೀಖಿನ ದಿವಸ ಸೋಷಿಯಲ್ ವೆಲ್‌ಫೇರ್ ಮಿನಿಸ್ಟರ್ಸ್ ಕಾನ್‌ಫರೆನ್ಸ್ ನಡೆಯಿತು. ಆ ಮೀಟಿಂಗ್‌ನಲ್ಲಿ ನಾನು ಸೆಂಟ್ರಲ್ ಮಿನಿಸ್ಟರ್ಸ್‌ಗೆ ರಿಕ್ವೆಸ್ಟ್ ಮಾಡಿದ್ದೇನೆ. ಆಗ ಪಾಪ್ಯುಲೇಷನ್ ಆಧಾರದ ಮೇಲೆ ರಿಸರ್ವೇಷನ್ ಕೊಡಬೇಕು ಎಂದು ಹೇಳಿದ್ದಾಗಿದೆ. ಈಗ ಕರ್ನಾಟಕದಲ್ಲಿ ಅವರು ಹೇಳಿದ ಪ್ರಕಾರ ಕಮ್ಯುನಿಟಿಗಳು ಬೇಡ, ನಾಯಕರು ಎಸ್.ಟಿ ಯಲ್ಲಿ ಬಂದ ಕಾರಣ ನಮ್ಮ ಪಾಪ್ಯುಲೇಷನ್ ಹೆಚ್ಚಾಗುತ್ತದೆ ಮತ್ತು ರಿಸರ್ವೇಷನ್ ಬಹಳ ಕಡಿಮೆ ಇದೆ. ಈ ಪ್ರಕಾರ ರಿಜರ್‌ವೇಷನನ್ನು ನಾವು ಗೌರ್ನಮೆಂಟ್ ಆಫ್ ಇಂಡಿಯಾದವರು ರೈಸ್ ಮಾಡಿದರೆ ಅದನ್ನು ಕೊಡುವುದಕ್ಕೆ ಸಾಧ್ಯ ಇದೆ ಎಂದು ನಮ್ಮ ಸ್ನೇಹಿತರಿಗೆ ಹೇಳ ಬಯಸುತ್ತೇನೆ. ಈ ಪ್ರಕಾರ ಕರ್ನಾಟಕ ಸರ್ಕಾರ ಕಾರ್ಯಕ್ರಮವನ್ನು ಹಾಕಿಕೊಳ್ಳುತ್ತದೆ ಎಂದು ಹೇಳುತ್ತೇನೆ. ಅದೇ ಪ್ರಕಾರ ತಳವಾರ ಮತ್ತು ಪರಿವಾರ ಜನಾಂಗದ ಬಗ್ಗೆ ಹೇಳಿದರು, ಇದು ಸಿನಾನಿಮಸ್ ಕಮಿಟಿ ಮುಂದೆ ಬಂದಾಗ ನಾವು ಅದರ ಬಗ್ಗೆ ಒಂದು ಡಿಸಿಷನ್ ತೆಗೆದುಕೊಂಡು ಮತ್ತೆ ಕೇಂದ್ರ ಸರ್ಕಾರಕ್ಕೂ ಕೂಡಾ ಬರೆಯುತ್ತೇವೆ ಎಂದು ಹೇಳಬಯಸುತ್ತೇನೆ. ಹೀಗಾಗಿ ಬ್ಯಾಕ್‌ವರ್ಡ್ ಕ್ಲಾಸ್ ಇಲಾಖೆ ಮತ್ತು ಮೈನಾರಿಟೀಸ್ ಇಲಾಖೆ ಸಾಕಷ್ಟು ಜನರಿಗೆ ಲಾಭ ಮಾಡಿಕೊಡಬೇಕಾಗುತ್ತದೆ ಎಂದು ಹೇಳಬಯಸುತ್ತೇನೆ. ಆಮೇಲೆ ಬಹಳ ಮುಖ್ಯವಾದ ಕಾರ್ಯಕ್ರಮ ಎಂದು ಹೇಳಿದರೆ ವಿಮೆನ್ಸ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್‌ಗೆ ಸೇರಿದ್ದು. ಅದರಲ್ಲಿ ಹೆಚ್ಚಾಗಿ ಏನೆಂದರೆ ಐಸಿಡಿಎಸ್ ಪ್ರೊಗ್ರಾಮ್ ಬಗ್ಗೆ ಬಹಳವಾಗಿ ನಮ್ಮ ಶಾಸಕರು ಹೇಳಿದರು. ಇವತ್ತು ಕರ್ನಾಟಕದಾದ್ಯಂತ ಅಂಗನವಾಡಿ ವರ್ಕರ್ಸ್ ಸ್ಟ್ರೈಕ್

ಮಾಡಿದರು, ಡೆಮಾನ್‌ಸ್ಟ್ರೇಷನ್ ಮಾಡಿದರು ಮತ್ತೆ ಅವರ ಬೇಡಿಕೆಗಳನ್ನು ಕೂಡಾ ಸರ್ಕಾರದ ಮುಂದೆ ಇಟ್ಟರು. ಆ ಬೇಡಿಕೆಗಳ ಪ್ರಕಾರ ನಾವು ಮಾನ್ಯ ಮುಖ್ಯಮಂತ್ರಿಗಳು ಮತ್ತು ನಮ್ಮ ಅಧಿಕಾರಿಗಳ ಜೊತೆಯಲ್ಲಿ ಮಾತನಾಡಿ ಯಾವ ಪ್ರಕಾರ ಅವರ ಡಿಮ್ಯಾಂಡ್ಸನ್ನು ಫುಲ್ ಫಿಲ್ ಮಾಡಲು ನಾವು ಆ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ.

ಈ ಅಂಗನವಾಡಿ ವರ್ಕರ್ಸ್ ಅನ್ನು ಕೇಂದ್ರ ಸರ್ಕಾರದವರು ಅಪಾಯಿಂಟ್ ಮೆಂಟ್ ಮಾಡಿರುವುದು. ಹೀಗಾಗಿ ಸರ್ಕಾರ ಅವರಿಗೆ ಗೌರ್ನಮೆಂಟ್ ಸರ್ವೆಂಟ್ ಎಂದು ಟ್ರೀಟ್ ಮಾಡುವುದಕ್ಕೆ ಬರುವುದಿಲ್ಲ. ಹಾಗೂ ನಮ್ಮ ಕರ್ನಾಟಕ ಸರ್ಕಾರ ಏನು ಮಾಡುವುದಕ್ಕೂ ಕೂಡ ಆಗುವುದಿಲ್ಲ. ನಮ್ಮ ಹತ್ತಿರ 21 ಸಾವಿರಕ್ಕೂ ಹೆಚ್ಚು ಅಂಗನವಾಡಿ ಕಾರ್ಯಕರ್ತೆಯರು ಮತ್ತು 21 ಸಾವಿರ ಹೆಲ್ಪರ್ಸ್ ಇದ್ದಾರೆ. ಈ 42 ಸಾವಿರ ಜನರಿಗೆ ನಾವು 50 ರೂಪಾಯಿ ಲೆಕ್ಕದ ಪ್ರಕಾರ ಗೌರವಧನ ಏರಿಸಬೇಕಾದರೆ ಸರ್ಕಾರಕ್ಕೆ ಬಹಳ ಕಷ್ಟವಾಗುತ್ತದೆ. ಆದರೆ ಕೇಂದ್ರ ಸರ್ಕಾರ ಒಂದು ಸಾರಿ ಡಿಸಿಷನ್ ತೆಗೆದುಕೊಂಡರೆ ನಾವು ಅದರಂತೆ ಅಳವಡಿಸಿಕೊಂಡು ಹೋಗಬಹುದು. ಈ ದಿಸೆಯಲ್ಲಿ ನಾವು ಕೇಂದ್ರ ಸರ್ಕಾರಕ್ಕೆ ಪತ್ರವನ್ನು ಬರೆದಿದ್ದೇವೆ ಹಾಗೂ ರಿಕ್ವೆಸ್ಟ್ ಮಾಡಿದ್ದೇವೆ. ಇವರನ್ನು ಗೌರ್ನಮೆಂಟ್ ಸರ್ವೆಂಟ್ ಎಂದು ಟ್ರೀಟ್ ಮಾಡಬೇಕೆಂದು ಅವರಿಗೂ ಕೂಡ ಹೇಳಿದ್ದೇವೆ. ಆದರೆ ಕೇಂದ್ರ ಸರ್ಕಾರ ಇದನ್ನು ನಿರಾಕರಣೆ ಮಾಡಿದೆ. ಆದಕಾರಣ ಇವರನ್ನು ಗೌರ್ನಮೆಂಟ್ ಸರ್ವೆಂಟ್ ಎಂದು ಟ್ರೀಟ್ ಮಾಡುವುದಕ್ಕಾಗುವುದಿಲ್ಲ. ಆದರೆ ಗೌರವಧನವನ್ನು ಹೆಚ್ಚು ಮಾಡುವ ಬಗ್ಗೆ it is under the active consideration of the Government. ಅಂತ ಅವರು ಹೇಳಿದ್ದಾರೆ. ಈ ಪ್ರಕಾರ ಅಂಗನವಾಡಿ ಕಾರ್ಯಕರ್ತೆಯರಿಗೆ ಅನುಕೂಲ ಮಾಡಿ ಕೊಡುತ್ತೇವೆಂದು ಹೇಳಬೇಕಾಗುತ್ತದೆ. ಇನ್ನು ಕೆಲವೊಂದು ಡಿಮ್ಯಾಂಡ್ಸ ನಮ್ಮ ಸರ್ಕಾರದ ಮುಖೇನ ಕಾರ್ಯಗತ ಆಗಬೇಕೆಂದರೆ ನಾವು ಅದನ್ನು ಮಾಡುವುದಕ್ಕೆ ಯಾವತ್ತೂ ಸಿದ್ಧರಿದ್ದೇವೆಂದು ಹೇಳುತ್ತೇನೆ. ಕೇಂದ್ರ ಸರ್ಕಾರದವರು ಕರೆದಿದ್ದ ಹೋದ ಮೀಟಿಂಗ್‌ನಲ್ಲಿಯೂ ಕೂಡ, ಅಂದರೆ 16ನೇ ತಾರೀಖು ನಡೆದಂಥ ಮೀಟಿಂಗ್‌ನಲ್ಲಿಯೂ ಕೂಡ ಹೇಳಿದ್ದೇವೆ. ಇಂದಿರಾ ಮಹಿಳಾ ಯೋಜನೆ ಏನಿದೆ ಇದು they are restructuring the whole women workers programmes....... ಇದರಿಂದ ಹೆಣ್ಣು ಮಕ್ಕಳಿಗೆ ಸಹಾಯ ಮಾಡಬಹುದು. ಈ ಹೆಣ್ಣು ಮಕ್ಕಳನ್ನು ಅಭಿವೃದ್ಧಿ ಯೋಜನೆಗಳಲ್ಲಿ ತೊಡಗಿಸುವ ಬಗ್ಗೆ Human Resources ಮಿನಿಸ್ಟರ್‌ರವರನ್ನು ಕರೆದು ಡಿಸ್‌ಕಸ್ ಮಾಡಿದ್ದಾರೆ. ಆ ಕಾಲದಲ್ಲಿಯೂ ನಾನು ಅಂಗನವಾಡಿ ಕಾರ್ಯಕರ್ತೆಯರ ಬಗ್ಗೆ ಹೇಳಿದ್ದೇನೆ. ಅಂಗನವಾಡಿ ಕಾರ್ಯಕರ್ತೆಯರನ್ನು ಕೂಡ ಇದರಲ್ಲಿ ಇನ್‌ವಾಲ್ವ ಮಾಡಿ ಗೌರವಧನವನ್ನು ಹೆಚ್ಚು ಮಾಡುವಂತಹ ಪ್ರಸಂಗಗಳು ಇದ್ದಾವೆಂದು ಹೇಳಬೇಕಾಗುತ್ತದೆ. ಈ ಬಗ್ಗೆ ಸೆಂಟ್ರಲ್ ಗೌರ್ನಮೆಂಟ್ ಏನು ಡಿಸಿಷನ್ ತೆಗೆದುಕೊಳ್ಳುತ್ತದೆಂದು ಸ್ವಲ್ಪ ದಿವಸ ಕಾದು ನೋಡಬೇಕಾಗುತ್ತದೆ. ಈ ಪ್ರಕಾರ ಹೆಣ್ಣು ಮಕ್ಕಳ ಅಭಿವೃದ್ಧಿ ಸೋಷಿಯಲೀ, ಎಕನಾಮಿಕಲಿ, ಮತ್ತು ಎಲ್ಲಾ ತರಹದಿಂದ ಆಗಲಿಕ್ಕೆ ಇಂದಿರಾ ಮಹಿಳಾ ಯೋಜನೆ ಸಾಕಷ್ಟು ಸಹಾಯಕಾರಿಯಾಗುತ್ತದೆಂದು ನಾನು ತಮಗೆ ಹೇಳಬಯಸುತ್ತೇನೆ. ಅದೇ ಪ್ರಕಾರ ಸೆಂಟ್ರಲ್ ಸೆಕ್ಟಾರ್, ಸ್ಟೇಟ್ ಸೆಕ್ಟಾರ್ ಬಗ್ಗೆ ಮಾನ್ಯ ಮೋಟಮ್ಮನವರು ಕೇಳಿದ್ದಾರೆ. ಸ್ಟೇಟ್ ಸೆಕ್ಟಾರ್‌ನಲ್ಲಿ 30 ಪ್ರಾಜೆಕ್ಟ್‌ಗಳು ಇವೆ. ಒಂದೊಂದು ಅಂಗನವಾಡಿಗಳು ಒಂದೊಂದು ಪ್ರಾಜೆಕ್ಟ್‌ಗೆ ಬರುತ್ತವೆ. ಇದರಿಂದ ಬಹಳ ಕಡಿಮೆಯಾಗುತ್ತದೆಯೇ ಹೇಗೆ ಎಂದು ಅವರು ಕೇಳಿದ್ದಾರೆ. ಆದರೆ ನಾವು ಈ ಪಾಪ್ಯುಲೇಷನ್ ಬೇಸಿಸ್ ಮೇಲೆ ಸೆಂಟ್ರಲ್ ಸೆಕ್ಟಾರ್ ಅಂಗನವಾಡಿ ಪ್ರಕಾರ ಸ್ಟೇಟ್ ಸೆಕ್ಟಾರ್ ಅಂಗನವಾಡಿಗಳ ಕಾರ್ಯಕ್ರಮವನ್ನು ಹಾಕಿಕೊಳ್ಳಲಿಕ್ಕೆ ಸಿದ್ಧರಿದ್ದೇವೆ. ಅದಕ್ಕೆ ಎಲ್ಲಾ ವ್ಯವಸ್ಥೆಯನ್ನೂ ಮಾಡಿದ್ದೇವೆ. ಅದೇ ಪ್ರಕಾರ ಮಾನ್ಯ ಹನುಮೇಗೌಡರು ಬಹಳ ಒಳ್ಳೆಯ ಸಜೆಷನ್ ಕೊಟ್ಟರು. Sir, he is a very dynamic legislator. ಅವರು ಯಾವಾಗಲೂ ಎಲ್ಲಾ ಕಾಲಕ್ಕೂ ನಮ್ಮ ಪಾರ್ಟಿಯ ತತ್ವಗಳಲ್ಲಿ ನಂಬಿಕೆಯಿಟ್ಟು, ಬಡವರು, ಹಿಂದುಳಿದ ವರ್ಗದವರು ಅಲ್ಪ ಸಂಖ್ಯಾತರು ಮತ್ತು ಷೆಡ್ಯೂಲ್ ಕ್ಯಾಸ್ಟ್ ಜನಾಂಗದ ಪರವಾಗಿ ಮೊದಲಿನಿಂದಲೂ ಸೇವೆಯನ್ನು ಮಾಡಿಕೊಂಡು

ಬಂದಿದ್ದಾರೆಂದು ನಾನು ಹೇಳಬೇಕಾಗುತ್ತದೆ. ಒಂದು ಕಡೆ ಬಡವರ ಅಭಿವೃದ್ಧಿ ಆಗಬೇಕೆಂದು ಹೇಳುತ್ತೀರಿ. ಆದರೆ ಅವರಲ್ಲಿ ಕುಡಿತ ಹೆಚ್ಚಾಗಿ ಬಿಟ್ಟಿದೆ ಅದಕ್ಕೆ ಏನು ಮಾಡುತ್ತೀರಿ ಅಂಥ ಕೇಳಿದರು. ಇದು ಬಹಳ ದೊಡ್ಡ ಕಠಿಣ ಪ್ರಸಂಗ, ಇದನ್ನು ಯಾರೂ ಸಾಲ್ವ್ ಮಾಡುವುದಕ್ಕಾಗುವುದಿಲ್ಲ. ನಮ್ಮ ಜನರಿಗೆ ಕುಡಿಬಾರದೆಂದು ಹೇಳುತ್ತೇವೆ. ಆದರೆ ಅದನ್ನು ನಿಲ್ಲಿಸಲಿಕ್ಕೆ ಯಾರ ಕೈಯಿಂದಲೂ ಆಗುತ್ತಿಲ್ಲ. ಯಾವ ಕಾನೂನನ್ನು ಮಾಡಿದರೂ ಮನುಷ್ಯನನ್ನು ಕಂಟ್ರೋಲ್ ಮಾಡುವುದು ಕಷ್ಟವಾಗಿದೆ. Man, is, by nature has got instinct of animal. I think plateau has said this. ಮನುಷ್ಯನ ಪ್ರವೃತ್ತಿ ಏನೆಂದರೆ By instinct, he is animal. ಅನಂತರ Social Reforms, political, economical development ಆದವು. ಆದರೂ ಸಹ His instincts are of that type, it is very difficult to remove.

Mr. SPEAKER:- And all animals drink.

ಶ್ರೀ ಬಿ. ಶಿವಣ್ಣ: - ಈ ದಿಕ್ಕಿನಲ್ಲಿ ಸರ್ಕಾರವಾಗಲಿ, ಶಾಸಕರಾಗಲಿ ಸಹಾಯ ಮಾಡಬೇಕೋ ಅಷ್ಟನ್ನು ಮಾಡುತ್ತಿದ್ದೇವೆ. ಡೆವಲಪ್‌ಮೆಂಟ್ ಆಫ್ ಷೆಡ್ಯೂಲ್ ಕ್ಯಾಸ್ಟ್ ಬ್ಯಾಕ್‌ವರ್ಡ್‌ಕ್ಲಾಸ್ ಮೈನಾರಿಟೀಸ್ ಕರ್ನಾಟಕದಲ್ಲಿ ಸಾಕಷ್ಟು ಆಗುತ್ತಿದೆ. ಇನ್ನು 10 ವರ್ಷಗಳಲ್ಲಿ ಎಲ್ಲಾ ಬೋರ್ಡ್‌ಗಳು ಕಾರ್ಪೋರೇಷನ್‌ಗಳು ಚೆನ್ನಾಗಿ ಕೆಲಸ ಮಾಡಿದರೆ ಈ ಜನರೂ ಸಹ ಸಾಕಷ್ಟು ಮುಂದೆ ಬರುತ್ತಾರೆ ಹಾಗೂ ಮುಂದೆ ಸಾಹುಕಾರರು, ಬಡವರು ಎಂಬ ವ್ಯತ್ಯಾಸವಿರುವುದಿಲ್ಲ. ಡಾ. ಬಾಬಾ ಸಾಹೇಬ್ ಅಂಬೇಡ್ಕರ್‌ರವರು ಈ ಜನರ ಬಗ್ಗೆ ಏನು ಹೇಳಿದ್ದಾರೆಂದರೆ See, after all, political freedom are there; and anybody can contest the election, but to contest the election, if there is no money for deposit, they how can he become a candidate? Political freedom is not sufficient at all. He should be backed by the economic freedom. That's how he wanted to rationalise the whole rich and poor. ಅದಕ್ಕೇ he committed to socialist ಎಂದು ಹೇಳಿದರು. Fundamental rights and directive principle of state policies ಜೊತೆಗೆ ಆರ್ಟಿಕಲ್ 46 ನೋಡಿದರೆ ಆರ್ಟಿಕಲ್ 14 ಅನ್ನು ಓದಿದಂಥ ಕಾಲದಲ್ಲಿ ನನಗನ್ನಿಸುತ್ತದೆ. Dr. Ambedkar's contribution to this country is greater than anything ಎಂದು ಹೇಳಬೇಕಾಗುತ್ತದೆ ಅನಂತರ ನಾವು 17 ಹಾಸ್ಟಲ್‌ಗಳನ್ನು ಮಹಿಳಾ ಕಲ್ಯಾಣ ನಿರ್ದೇಶನಾಲಯದಿಂದ ಹೆಣ್ಣು ಮಕ್ಕಳ ಸಲುವಾಗಿ ನಡೆಸುತ್ತಿದ್ದೇವೆ. ಈಗ 10 ಹಾಸ್ಟಲುಗಳ ಕೆಲಸ ನಡೆಯುತ್ತಿದ್ದು, ಇನ್ನೂ 7 ಹಾಸ್ಟಲುಗಳನ್ನು ಕಟ್ಟಬೇಕಾಗಿದೆ ಮತ್ತು ಇದರ ಬಗ್ಗೆ ಭಾರತ ಸರ್ಕಾರಕ್ಕೆ ಬರೆಯುತ್ತಿದ್ದೇವೆ. ವಾಲಂಟರಿ ಆರ್ಗನೈಸೇಷನ್‌ಗಳ ಮೂರು ಓಲ್ಡ್ ಏಜ್ ಹೋಮ್‌ಗಳನ್ನು ನಡೆಸುತ್ತಿವೆ. ಅದಕ್ಕೆ ಭಾರತ ಸರ್ಕಾರದವರು 50 ಪರ್ಸಂಟ್ ದುಡ್ಡು ಕೊಡುತ್ತಾರೆ. ವಾಲಂಟರಿ ಆರ್ಗನೈಸೇಷನ್‌ಗಳು ಓಲ್ಡ್ ಏಜ್ ಹೋಮ್ಸ್ ತೈಗೆಯಬೇಕೆಂದರೆ we have no objection, we will definitely recommend to Government of India... ಇದರ ಜೊತೆಗೆ ಓಲ್ಡ್ ಏಜ್ ಹೋಮ್‌ಗಳನ್ನು ರಾಜ್ಯ ಸರ್ಕಾರ ತೆಗೆಯಬೇಕೆಂಬ ಉದ್ದೇಶ ಕೂಡ ಇದೆ. ಒಂದೊಂದು ಜಿಲ್ಲೆಗೆ ಒಂದೊಂದು ಓಲ್ಡ್ ಏಜ್ ಹೋಮ್ ತೆಗೆಯಬೇಕೆಂಬುದರ ಬಗ್ಗೆ ನಮ್ಮ ಇಲಾಖೆಯ ನಿರ್ದೇಶಕರು ಮತ್ತು ಕಾರ್ಯದರ್ಶಿಗಳ ಜೊತೆ ನಾನು ಮಾತನಾಡಿದ್ದೇನೆ. ಬಹುಶ: ಆದರ ಬಗ್ಗೆ ಮುಂದೆ ಒಂದು ನಿರ್ಣಯ ತೆಗೆದುಕೊಳ್ಳಬಹುದು. ಓಲ್ಡ್ ಏಜ್ ಹೋಮ್ ಬಹಳ ಅವಶ್ಯಕತೆಯಿದೆಯೆಂದು ಅವರು ಹೇಳಿದ್ದಾರೆ. ನಾನು ಕೂಡ ಇದಕ್ಕೆ ಒಪ್ಪಿಕೊಳ್ಳುತ್ತೇನೆಂದು ಹೇಳಬೇಕಾಗುತ್ತದೆ. ಈ ಪ್ರಕಾರ ಸಾಕಷ್ಟು ಕಾರ್ಯಗಳನ್ನು ನಮ್ಮ ಇಲಾಖೆಯಲ್ಲಿ ನಾವು ಮಾಡಿದ್ದೇವೆಂದು ಹೇಳಬೇಕಾಗುತ್ತದೆ. ನಾನು ಮಂತ್ರಿಯಾದ ನಂತರ 1990-91 ರಲ್ಲಿ 27 ಹಾಸ್ಟಲುಗಳನ್ನು ಕೊಟ್ಟಿದ್ದೇವೆ.

1991-92ರಲ್ಲಿ 76 ಹಾಸ್ಟೆಲುಗಳನ್ನು ಕೊಟ್ಟಿದ್ದೇವೆ. ಅದರಲ್ಲಿ 39 ಹುಡುಗಿಯರ ಹಾಸ್ಟಲುಗಳಾಗಿದ್ದು, 64 ಹುಡುಗರ ಹಾಸ್ಟಲುಗಳಾಗಿವೆ. ಅಲ್ಲದೆ, ಸಾಕಷ್ಟು ಹಾಸ್ಟೆಲುಗಳನ್ನು ಹಿಂದುಳಿದ ವರ್ಗಗಳವರಿಗೆ ಕೊಟ್ಟಿದ್ದೇವೆ ಮತ್ತು ಅಲ್ಪಸಂಖ್ಯಾತರಿಗೆ ಕೊಡ ಹ ಆಸ್ಟಲುಗಳನ್ನು ಕೊಟ್ಟಿದ್ದೇವೆಂದು ಹೇಳಬೇಕಾಗುತ್ತದೆ. ಅಧ್ಯಕ್ಷರೇ, ಈಗ ನನಗನ್ನಿಸುತ್ತದೆ: ನನ್ನ ಇಲಾಖೆಗೆ ಸಂಬಂಭಪಟ್ಟಂತೆ ಯಾವುದೇ ನ್ಯೂನತೆಗಳಿದ್ದರೂ ಅದನ್ನು ಸರಿಪಡಿಸಿಕೊಳ್ಳುತ್ತೇನೆ. ಆದುದರಿಂದ, ಮಾನ್ಯ ಸದಸ್ಯರು ಯುನಾನಿಮಸ್ ಪ್ರೇಮದಿಂದ ನನ್ನ ಇಲಾಖೆಯ ಬೇಡಿಕೆಗಳ ಅನುಮೋದನೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು:- ಏನು ಹೇಳಿದಿರಿ, ಪ್ರೇಮದಿಂದ, ಅದಕ್ಕೆ ಪ್ರೇಮಾನು ಸೇರಬೇಕು. ನೀವು ಪ್ರೇಮದ ವಿಚಾರ ಮಾತನಾಡುತ್ತಿದ್ದೀರಲ್ಲಾ, ಅದೇ ಒಂದು ವಿಶೇಷ. No, No, At any time he can acquire that right.

ಶ್ರೀ ಬಿ. ಶಿವಣ್ಣ:- ಇನ್ನೊಂದು ವಿಚಾರವೇನೆಂದರೆ ಈ ಜಿಲ್ಲಾ ಪರಿಷತ್‌ಗಳು ಬಂದ ನಂತರ ನಮ್ಮ ಕಂಟ್ರೋಲ್ ಏನೂ ಇರುವುದಿಲ್ಲ. ಇದರ ಬಗ್ಗೆ ನಮ್ಮ ಸಲಹೆಗಳಿವೆ. ಸ್ಟೇಟ್ ಸೆಕ್ಟರ್‌ನಲ್ಲಿ ಆಫೀಸರ್ಸ್, ಮಿನಿಸ್ಟರ್ಸ್, ಏನಾದರೂ ಪತ್ರ ಬರೆದರೆ ಕೆಲವು ಸಲ ಉತ್ತರ ಕೂಡ ಅಲ್ಲಿಂದ ಬರುವುದಿಲ್ಲ. ಜಿಲ್ಲಾ ಪರಿಷತ್‌ನವರೇ ಹಾಸ್ಟಲುಗಳನ್ನು ತೆಗೆದುಬಿಡುತ್ತಾರೆ. ಅವರು ನಮ್ಮನ್ನು ಕೇಳುವುದಿಲ್ಲ. ನಾವು ಅಬ್ಜಕ್ಷನ್ ಮಾಡಿದರೆ ಅದು ಒಂದು ದೊಡ್ಡ ಜಗಳ. ಈ ಪ್ರಕಾರ ಸಾಕಷ್ಟು ನ್ಯೂನತೆಗಳು ಇವೆ. ಜಿಲ್ಲಾ ಪರಿಷತ್ತುಗಳು ಬಂದ ನಂತರ ನಮ್ಮ ಇಲಾಖೆಗೆ ಬಹಳ ತೊಂದರೆಯಾಗಿದೆಯೆಂದು ನಾನು ಮುಖ್ಯಮಂತ್ರಿಗಳಿಗೆ, ಶ್ರೀಮಾನ್ ವೀರಪ್ಪಮೊಯಿಲಿಯವರಿಗೆ, ಶ್ರೀಮಾನ್ ಅಜೀಜ್ ಸೇಠ್‌ರವರಿಗೆ, ಶ್ರೀಮತಿ ನಾಗರತ್ನಮ್ಮ ನವರಿಗೆ ಮತ್ತು ಶ್ರೀಮಾನ್ ಪುಟ್ಟಸ್ವಾಮಿಗೌಡರಿಗೆ ಮನವಿ ಮಾಡಿಕೊಂಡು ನಮ್ಮನ್ನು ಜಿಲ್ಲಾ ಪರಿಷತ್‌ನಿಂದ ಸ್ವಲ್ಪದೂರ ಮಾಡಿ ಎಂದು ಕೇಳಿಕೊಂಡಿದ್ದೇನೆ. ಇಲ್ಲವೆಂದರೆ, ಏನೂ ಕೆಲಸ ಮಾಡುವುದಕ್ಕಾಗುವುದಿಲ್ಲವೆಂದು ಹೇಳಬೇಕಾಗುತ್ತದೆ. ಇನ್ನೊಂದು ಎಸ್.ಸಿ.ಪಿ. ಫಂಡ್ ಬಹಳ ಮುಖ್ಯವಾದುದು. ಮೊನ್ನೆ ದಿವಸ ನಡೆದ ಸಮಾಜ ಕಲ್ಯಾಣ ಮಂತ್ರಿಗಳ ಸಮ್ಮೇಳನದಲ್ಲಿ ಈ ಬಗ್ಗೆ ಹೇಳಿದೆ. ಆಗ ಭಾರತ ಸರ್ಕಾರದ ಕಲ್ಯಾಣ ಮಂತ್ರಾಲಯದವರು ಕರ್ನಾಟಕ ರಾಜ್ಯದ ಸ್ಟಾಂಡ್ ಅನ್ನು ಬಹಳವಾಗಿ ಅಪ್ರಿಷಿಯೇಟ್ ಮಾಡಿಬಿಟ್ಟರು. They have appreciated Karnataka's stand on this. Whether you agree or not; the Hon'ble Speaker is going to protect me.

MR. SPEAKER:- I will certainly protect you from the lady members.

ಶ್ರೀ ಆರ್. ಎನ್. ನಾಯಕ್:- ಮಾನ್ಯ ಅಧ್ಯಕ್ಷರೇ, ತಾವು ಬಂದ ನಂತರ ಅವರಿಗೆ ಭಾರಿ ಧೈರ್ಯ ಬಂದುಬಿಟ್ಟಿದೆ. ತಾವು ಬಂದು ಕುಳಿತ ಮೇಲೆ ಅವರಿಗೆ ಸಿಕ್ಕಾಪಟ್ಟೆ ಧೈರ್ಯ ಬಂದಿದೆ. ನಮಗೆ ಆ ಧೈರ್ಯ ಉಡುಗಿ ಹೋಗಿದೆ.

SRI A. K. ANANTHA KRISHNA:- Mr. Speaker, the Hon'ble Minister knows numerology and astrology, from which end he gets an attack or love or affection.

ಶ್ರೀ ಬಿ. ಶಿವಣ್ಣ:- ಸೋಷಿಯಲ್ ಅಡ್ವಸರಿ ಬೋರ್ಡ್ ಬಗ್ಗೆ ಅವರು ಹೇಳಿದರು. ಅವರು ಹೇಳಿದ ಪ್ರಕಾರವಾಗಿ ನಾವು ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೇವೆ. ನಾವು ಅಲ್ಲಿ ಆಡಳಿತಾಧಿಕಾರಿಯನ್ನು ನೇಮಿಸಿದ್ದೇವೆ. ಮತ್ತು ಮುಂದಿನ ಕೆಲವು ದಿವಸಗಳಲ್ಲಿ ಅದನ್ನು ರಿಕಾನ್ಸ್‌ಟಿಟ್ಯೂಟ್ ಮಾಡುತ್ತೇವೆಂದು ಹೇಳಬಯಸುತ್ತೇನೆ. ಈ ಎಸ್.ಸಿ.ಪಿ. ಫಂಡ್ ಬಹಳ ಮಹತ್ವವಾದುದು. ಹಣಕಾಸು ಇಲಾಖೆಯವರು ವರ್ಷದಿಂದ ವರ್ಷಕ್ಕೆ ಹಣವನ್ನು

ಬಿಡುಗಡೆ ಮಾಡುವುದಿಲ್ಲ ಅಥವಾ ಜಿಲ್ಲಾ ಪರಿಷತ್‌ನವರು ಹಣವನ್ನು ಖರ್ಚು ಮಾಡುವುದಿಲ್ಲ ಅಥವಾ ಸ್ಟೇಟ್ ಸೆಕ್ಟರ್‌ನಲ್ಲಿ ಆ ಹಣವನ್ನು 38 ಇಲಾಖೆಗಳಿಗೆ ಏನು ಹಂಚಿ ಬಿಡುತ್ತೇವೆ, ಆ ದುಡ್ಡು ಅಲ್ಲಿ ಖರ್ಚಾಗುವುದಿಲ್ಲ. ಹೀಗಾಗಿ ಕೆಲವು ಸಲ ಎಸ್.ಸಿ.ಪಿ. ಫಂಡ್ಸ್ ಲ್ಯಾಪ್ಸ್ ಆಗಿದೆ.

ಈಗಲೂ ಕೂಡ ಲ್ಯಾಪ್ಸ್ ಆಗತಕ್ಕ ಅಪಾಯವಿದೆಯೆಂದು ಹೇಳಿ ನಾನು ಇದರ ಬಗ್ಗೆ ಸಾಕಷ್ಟು ಮೀಟಿಂಗ್‌ಗಳನ್ನು ಮಾಡಿದ್ದೇನೆ. ನಮ್ಮ ನಿರ್ದೇಶಕರುಗಳು , ನಮ್ಮ ಅಧಿಕಾರಿಗಳೆಲ್ಲಾ ಬೇರೆ ಬೇರೆ ಜಿಲ್ಲೆಗಳಲ್ಲಿ ತಿರುಗಾಡಿ, ಇದರ ಬಗ್ಗೆ ಸಭೆಯನ್ನು ಮಾಡಿದ್ದಾರೆ. ಮೊನ್ನೆ ಹೈ ಪವರ್ ಕಮಿಟಿಯಲ್ಲಿ ಕೂಡ ಈ ಎಸ್.ಸಿ.ಪಿ.ಫಂಡ್ ಬಗ್ಗೆ ಅಧಿಕಾರಿಗಳ ಜೊತೆ ಮಾತನಾಡಿದ್ದೇನೆ. ಅಲ್ಲಿ ಏನಾಗಿದೆಯೆಂದರೆ, ಸ್ಟೇಟ್ ಸೆಕ್ಟಾರ್ ಮತ್ತು ಜಿಲ್ಲಾ ಸೆಕ್ಟಾರ್‌ಗಾಗಿ ಒಟ್ಟು 138 ಕೋಟಿ ರೂಪಾಯಿಗಳಿದ್ದರೆ, ಅದರಲ್ಲಿ ಸ್ಟೇಟ್ ಸೆಕ್ಟಾರ್‌ಗೆ 75 ಕೋಟಿ ಇರುತ್ತದೆ ಮತ್ತು ಜಿಲ್ಲಾ ಸೆಕ್ಟಾರ್‌ಗಳಿಗೆ 63ಕೋಟಿ ಇರುತ್ತದೆ. ಇದಲ್ಲದೆ 12 ಕೋಟಿ ಕೇಂದ್ರ ಸರ್ಕಾರದಿಂದ ಸಹಾಯಧನ ರೂಪದಲ್ಲಿ ಬರುತ್ತದೆ. ಇವೆಲ್ಲವೂ ಸೇರಿ ಎಸ್.ಸಿ.ಪಿ.ಫಂಡ್‌ಲ್ಲಿ 150 ಕೋಟಿ ಇರುತ್ತದೆಂದು ನಾನು ಹೇಳಿದ್ದೇನೆ. 150 ಕೋಟಿ ಎಸ್.ಸಿ.ಪಿ. ಫಂಡ್ ಅನ್ನು ಉಪಯೋಗಿಸಲು ನಮ್ಮ ಶಾಸಕರು, ತಾಲ್ಲೂಕು ಸಮಿತಿಯವರು, ಜಿಲ್ಲಾ ಸಮಿತಿಯವರು ಯಾವುದಾದರೂ ಪ್ಲಾನ್ ಅಥವ ಕಾರ್ಯಕ್ರಮವನ್ನು ಹಾಕಿಕೊಂಡು ಅದನ್ನು ಕಾರ್‍ಯರೂಪಕ್ಕೆ ತಂದರೆ ಸಾಕಷ್ಟು ಏಳಿಗೆಯಾಗಬಹುದು. ಆದರೆ, ಈಗ ಪರಿಸ್ಥಿತಿ ಏನಾಗಿದೆಯೆಂದರೆ ನಾವು ಅದನ್ನು ರಿವ್ಯೂ ಮಾಡತಕ್ಕ ಕಾಲದಲ್ಲಿ ಕೇವಲ 57-58 ಕೋಟಿ ರೂಪಾಯಿಗಳು ಬಹಳಷ್ಟು ಎಂದರೆ 60 ಕೋಟಿ ರೂಪಾಯಿಗಳು ಅದರಲ್ಲಿ ಖರ್ಚಾಗಿದೆ. ಇನ್ನುಳಿದಿರತಕ್ಕ 70-80 ಕೋಟಿ ರೂಪಾಯಿಗಳು ಲ್ಯಾಪ್ಸ ಆಗತಕ್ಕ ಸಂದರ್ಭ ಇದೆ.

ಒಬ್ಬ ಮಾನ್ಯ ಸದಸ್ಯರು:- ಲ್ಯಾಪ್ಸ್ ಆಗಲು ತಾವು ಏಕೆ ಬಿಟ್ಟಿರಿ? ತಮ್ಮ ಇಲಾಖೆಗೆ ಕೊಟ್ಟಿರತಕ್ಕ ಹಣವನ್ನು ಖರ್ಚು ಮಾಡದೆ ಲ್ಯಾಪ್ಸ ಮಾಡಿದೆವು ಎಂದು ತಾವೇ ಹೇಳಿಕೊಳ್ಳುತ್ತೀರಲ್ಲಾ, ಇದೇ ಏನು ನೀವು ಕೆಲಸ ಮಾಡತಕ್ಕ ರೀತಿ? ಅಧಿಕಾರಿಗಳಿಗೆ ಹಣವನ್ನು ಕೊಟ್ಟು ಹಾಳು ಮಾಡುತ್ತಿದ್ದೀರಿ.

ಶ್ರೀ ಎನ್. ಜಿ. ನಾಯಕ್:- ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಸರಿಯಾಗಿ ಹಣವನ್ನು ಖರ್ಚು ಮಾಡುತ್ತಿಲ್ಲ. ಅದಕ್ಕೋಸ್ಕರ ಆ ಹಣವು ಲ್ಯಾಪ್ಸ್ ಆಗುತ್ತಿದೆ. ಕೇಂದ್ರ ಸರ್ಕಾರದಿಂದ ಬಂದಿರತಕ್ಕ ಹಣ ಲ್ಯಾಪ್ಸ್ ಆಗುತ್ತದೆ. ಸರಿಯಾದ ರೀತಿಯಲ್ಲಿ ಆಡಳಿತವನ್ನು ನಡೆಸಿದರೆ ಲ್ಯಾಪ್ಸ್ ಏಕೆ ಆಗುತ್ತದೆ ? ಈ ಬಗ್ಗೆ ಮಾನ್ಯ ಸಚಿವರು ಉತ್ತರವನ್ನು ಕೊಡಬೇಕು.

ಶ್ರೀ ಆರ್. ಎನ್. ನಾಯಕ್:- ಸನ್ಮಾನ್ಯ ಅಧ್ಯಕ್ಷರೇ, ತಾವು ಸಭೆಗೆ ಬರುವುದಕ್ಕಿಂತ ಮೊದಲು ನಮ್ಮ ಅಧಿಕಾರಿಗಳು ಬಹಳ ಅತ್ಯುತ್ತಮವಾಗಿದ್ದಾರೆಂದು ಮಾನ್ಯ ಮಂತ್ರಿಗಳೇ ಹೇಳಿದರು. ಇಷ್ಟೊಂದು ಅತ್ಯುತ್ತಮವಾಗಿರತಕ್ಕ ಅಧಿಕಾರಿಗಳಿದ್ದರೆ ಅವರಿಂದ ನೀವು ಕೆಲಸವನ್ನು ತೆಗೆದುಕೊಳ್ಳುವುದಾದರೆ ಹಣವು ಏಕೆ ಲ್ಯಾಪ್ಸ್ ಆಗಿ ಹೋಯಿತು?ಕೇಂದ್ರ ಸರ್ಕಾರದಿಂದ ಬಂದಿರತಕ್ಕ ಹಣದ ಬಗ್ಗೆ ನೀವು ನೋಡಬೇಕು. ಆದುದರಿಂದ, ತಾವು ಅದಕ್ಷ ಅಧಿಕಾರಿಗಳನ್ನು ಇಟ್ಟುಕೊಂಡಿದ್ದೇವೆಂದು ಈಗ ಹೇಳಬೇಕು. ನೀವು ಈ ರೀತಿ ಹೇಳಿದರೆ ನಮಗೆ ಸಂತೋಷವಾಗುತ್ತದೆ.

ಶ್ರೀ ಬಿ. ಶಿವಣ್ಣ:- ಇದರಲ್ಲಿ ಅಧಿಕಾರಿಗಳ ತಪ್ಪೇನೂ ಇಲ್ಲ. ಆದರೆ ಕಷ್ಟವೇನೆಂದರೆ.....

ಅಧ್ಯಕ್ಷರು:- ನಿಮ್ಮ ಕಷ್ಟವೇನು ಎನ್ನುವುದನ್ನು ಪ್ರಾಮಾಣಿಕವಾಗಿ ಹೇಳಿಬಿಡಿ.

ಶ್ರೀ ಬಿ. ಶಿವಣ್ಣ:- ಅಧ್ಯಕ್ಷರೇ ನಾನು ಬಹಳ ಸೂಕ್ಷ್ಮವಾಗಿರತಕ್ಕ ವಿಚಾರವನ್ನು ಹೇಳುತ್ತಿದ್ದೇನೆ. ಎಸ್.ಸಿ.ಪಿ. ಫಂಡ್‌ನಲ್ಲಿ 78-80 ಕೋಟಿ ಹಣ ಲ್ಯಾಪ್ಸ್ ಆಗತಕ್ಕ ಕಾಲದಲ್ಲಿ ಅದು ನಮ್ಮ ಕೈಯಲ್ಲಿರಲಿಲ್ಲ. ಅದು ಹಣಕಾಸಿನ ಇಲಾಖೆಯಿಂದ ಮತ್ತು ಖಜಾನೆಯಿಂದ ರಿಲೀಸ್ ಆಗಬೇಕಾಗುತ್ತದೆ, ಸ್ಟೇಟ್ ಸೆಕ್ಟಾರ್‌ನಲ್ಲಿ ಆಯಾಯ ಇಲಾಖೆಯವರು ಕಾರ್ಯಕ್ರಮಗಳನ್ನು ಹಾಕಿಕೊಂಡು ಇದನ್ನು ಖರ್ಚು ಮಾಡಬೇಕು. ಜಿಲ್ಲಾ

ಸೆಕ್ಟಾರ್‌ನಲ್ಲಿ ಜಿಲ್ಲಾಪರಿಷತ್ತಿನವರು ಇದನ್ನು ಖರ್ಚು ಮಾಡಬೇಕು. ಆದರೆ ಹಣಕಾಸಿನ ಇಲಾಖೆಯವರು ಏನಾದರೂ ಹಣವನ್ನು ರಿಲೀಸ್ ಮಾಡಲಿಲ್ಲವೆಂದರೆ ಯಾರೂ ಸಹ ಈ ಹಣವನ್ನು ಖರ್ಚುಮಾಡುವಂತಿಲ್ಲ. ಹೀಗಾಗಿ ಅಲ್ಲಿ ತೊಂದರೆಯಾಗಿದೆ.

ಶ್ರೀ ಆರ್. ಎನ್. ನಾಯಕ್:- ಸನ್ಮಾನ್ಯ ಅಧ್ಯಕ್ಷರೇ, ಈ ಕೆಲಸ ಮಾಡುವ ಸಲುವಾಗಿಯೇ ಆ ಅಧಿಕಾರಿಗಳನ್ನು ಇಟ್ಟಿದ್ದೇವೆ ಈ ಎಲ್ಲವನ್ನೂ ಮಾಡುವುದಕ್ಕಾಗಿಯೇ ಮಂತ್ರಿಗಳಾದ ತಾವು ಮತ್ತು ನಿಮ್ಮ ನಿರ್ದೇಶಕರು ಇರುವುದು. ತಾವು ಈ ರೀತಿ ಏಕೆ ಹೇಳುತ್ತೀರಿ ? ಅವರು ಹಣವನ್ನು ಖರ್ಚು ಮಾಡಲಿಲ್ಲ ಎಂದು ತಾವು ಹೇಳಬಾರದು. ಏಕೆಂದರೆ, ನಮ್ಮ ರಾಜ್ಯದಲ್ಲಿ ರಾಷ್ಟ್ರಪತಿಗಳ ಆಡಳಿತವಿಲ್ಲ. ತಾವು ಇದ್ದೀರಿ, ಕ್ಯಾಬಿನೆಟ್ ಇದೆ, ಮಂತ್ರಿಗಳಾದ ತಾವು ಅಧಿಕಾರಿಗಳನ್ನು ಹದ್ದು ಬಸ್ತಿನಲ್ಲಿ ಟ್ಟುಕೊಂಡು ಅವರಿಂದ ಕೆಲಸವನ್ನು ತೆಗೆದುಕೊಂಡು ಎಲ್ಲಾ ಹಣವನ್ನು ಖರ್ಚು ಮಾಡಬೇಕು. ಇಲ್ಲದಿದ್ದರೆ ತಾವು ಎಷ್ಟರಮಟ್ಟಿಗೆ ಪ್ರಾಮಾಣಿವಾಗಿ, ಎಫಿಷಿಯೆಂಟ್ ಆಗಿ ಕೆಲಸವನ್ನು ಮಾಡುತ್ತಿದ್ದೀರಿ ಎಂದು ನಿಮ್ಮನ್ನು ನೀವೆ ಪರೀಕ್ಷೆ ಮಾಡಿ ನೋಡಿಕೊಳ್ಳಬೇಕು. ಅದುಬಿಟ್ಟು ಅದನ್ನು ನೋಡುತ್ತೇವೆ ಇದನ್ನು ನೋಡುತ್ತೇವೆ ಎಂದು ಹೇಳುತ್ತೀರಿ, ಯಾವಾಗ ನೋಡಿದರೂ ತಾವು ಪರಿಶೀಲನೆ ಮಾಡುತ್ತೇನೆ, ಫೈಲ್ ನೋಡುತ್ತೇನೆಂದು ಹೇಳಲು ಆಗುವುದಿಲ್ಲ. ನೀವು ಆ ಫೈಲನ್ನು ನೋಡಿಲ್ಲ. ನಿಮಗೆ ಅದರ ಬಗ್ಗೆ ಗೊತ್ತಿಲ್ಲ. ಇದನ್ನು ನೀವು ಇವತ್ತೊ ಅಥವಾ ನೆನ್ನೆಯೋ ಅರ್ಥಮಾಡಿಕೊಂಡಿದ್ದೀರಿ. ಯಾವಾಗ ನೋಡಿದರೂ ನಿಮ್ಮ ಇಲಾಖೆಯ ಹಣ ಲ್ಯಾಪ್ಸ್ ಆಗಿ ಹೋಗುತ್ತಿದೆ. ಇವತ್ತು ನೀವು ಇಷ್ಟು ಜನ ಅಧಿಕಾರಿಗಳನ್ನು ಹೊಂದಿದ್ದು, ಅವರ ಹತ್ತಿರ ಕೆಲಸವನ್ನು ಮಾಡಿಸಿಕೊಳ್ಳಬೇಕಲ್ಲವೇ? ಅವರಿಂದ ಕೆಲಸವನ್ನು ಮಾಡಿಸಿಕೊಳ್ಳಲಿಲ್ಲವೆಂದರೆ ದಕ್ಷತೆ ಮತ್ತು ಅದಕ್ಷತೆಯ ಬಗ್ಗೆ ಯಾರು ತೀರ್ಮಾನ ಮಾಡಬೇಕು? ಆದರ ಬಗ್ಗೆ ಅಧ್ಯಕ್ಷರೇ ತೀರ್ಮಾನವನ್ನು ಕೊಡಬೇಕು.

ಶ್ರೀಮತಿ ಮೋಟಮ್ಮ:- ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಉತ್ತರವನ್ನು ಹೇಳುತ್ತಾ ಈ ಎಸ್.ಸಿ.ಪಿ. ಫಂಡ್ ಲ್ಯಾಪ್ಸ್ ಆಗುತ್ತಿದೆ ಎನ್ನತಕ್ಕ ಮಾತನ್ನು ಹೇಳುತ್ತಿದ್ದಾರೆ.

ಅಧ್ಯಕ್ಷರು:- ಲ್ಯಾಪ್ಸ ಆಗಬಹುದು ಎಂದು ಹೇಳುತ್ತಿದ್ದಾರೆ, ಹೌದು ತಾನೇ?

ಶ್ರೀಮತಿ ಮೋಟಮ್ಮ:- ಇದನ್ನೇ ನಿನ್ನೆ ದಿನಾ ಇಲಾಖೆಯ ಬಗ್ಗೆ ಮಾತನಾಡುತ್ತಾ ಹೇಳಿದೆ.

ಅಧ್ಯಕ್ಷರು:- ಮಾನ್ಯ ಶಿವಣ್ಣನವರೇ, ಅವರು ಬಹಳ ಕುಪಿತರಾಗಿರುವಂತೆ ಕಾಣುತ್ತಿದೆ.

ಶ್ರೀಮತಿ ರೇಣುಕಾರಾಜೇಂದ್ರನ್:- ಯಾವಾಗ ನೋಡಿದರೂ ಇವರು ಲ್ಯಾಪ್ಸ್, ಲ್ಯಾಪ್ಸ್ ಎಂದು ಹೇಳುತ್ತಾರೆ.

ಶ್ರೀ ಬಿ.ಶಿವಣ್ಣ:- ಶ್ರೀಮತಿ ರೇಣುಕಾರಾಜೇಂದ್ರನ್‌ರವರು ಹಿಂದೆ ಮಂತ್ರಿಗಳಾಗಿದ್ದರು. ಆಗ ಏನು ಮಾಡಿದ್ದಾರೆ, ಎಷ್ಟು ಹಣ ಲ್ಯಾಪ್ಸ್ ಮಾಡಿದ್ದಾರೆಂಬುದನ್ನು ಅವರು ಹೇಳಬೇಕು!

ಶ್ರೀಮತಿ ಮೋಟಮ್ಮ:- ಮಾನ್ಯ ಮಂತ್ರಿಗಳು ಕನ್‌ಫ್ಯೂಷನ್ ಮಾಡಿಕೊಂಡಂತೆ ಕಾಣುತ್ತದೆ. ಈ ಎಸ್. ಸಿ. ಪಿ. ಫಂಡ್ಸ್ ಲ್ಯಾಪ್ಸ್ ಆಗುತ್ತಿದೆ. ಈ ಹಣವನ್ನು ಬೇರೆ ಬೇರೆ ಇಲಾಖೆಗೆ ಕೊಟ್ಟಾಗ ಅವರು ಖರ್ಚು ಮಾಡದಿರುವುದರಿಂದ ಹರಿಜನ ಗಿರಿಜನರಿಗೆ ಸರಿಯಾದ ರೀತಿಯಿಂದ ಉಪಯೋಗವಾಗುತ್ತಿಲ್ಲ ಎನ್ನುವುದು ಎಲ್ಲರಿಗೂ ಗೊತ್ತಾಗಿದೆ. ಅದಕ್ಕೆ ಇನ್ನು ಮುಂದೆ ಅವಕಾಶ ಮಾಡಿಕೊಡಬೇಡಿ. ಡಾ.ಅಂಬೇಡ್ಕರ್ ಶತಮಾನೋತ್ಸವದ ಯೋಜನೆ ಮಾಡಬೇಕಾದರೆ ಅಥವಾ ಡಾ.ಅಂಬೇಡ್ಕರ್ ಶತಮಾನೋತ್ಸವಕ್ಕೆ 30 ಕೋಟಿ ಪೂಲ್ ಫಂಡ್ ಅಂತ ಮಾಡಿ ಬೇರೆ ಬೇರೆ ಕಾರ್ಯಕ್ರಮಗಳಿಗೆ ಖರ್ಚುಮಾಡುತ್ತಿದ್ದೀರಿ. ಪ್ರತಿ ವರ್ಷ ಎಸ್.ಸಿ.ಪಿ. ಫಂಡನ್ನು ಖರ್ಚು ಮಾಡುವುದಕ್ಕೆ ಒಂದು ಯೋಜನೆಯನ್ನಾದರೂ ತಯಾರುಮಾಡಿ ಸರ್ಕಾರಕ್ಕೆ ಮನವಿಯನ್ನಾದರೂ ಮಾಡಿ ಅಥವಾ ಕೇಂದ್ರ ಸರ್ಕಾರದ ಅನುಮತಿ ಬೇಕಾರೆ ಅದನ್ನು ತೆಗೆದುಕೊಳ್ಳಿ ಎಂದು ನಾನು ಹೇಳಿದ್ದೆ. ಅದರ ಬಗ್ಗೆ ಇವರು ಮಾತನಾಡಿಲ್ಲ. ಅದರ ಬಗ್ಗೆ ವಿಚಾರ ಮಾಡದೇ ಈ ಲ್ಯಾಪ್ಸಸ್ ಬಗ್ಗೆ ಹೇಳುತ್ತಿದ್ದಾರೆ. ಆಮೇಲೆ

ಅಧಿಕಾರಿಗಳ ಅಧಕ್ಷತೆ ಬಗ್ಗೆ ನಾನು ಕೆಲವು ನಿದರ್ಶನಗಳನ್ನು ಕೊಟ್ಟು ಹೇಳಿದೆ. ಏಕೆಂದರೆ ಮೂಡಿಗೆರೆ ಕಾಲೇಜು ಬಾಯ್ಸ್ ಹಾಸ್ಟಲ್ ಸ್ಟಾರ್ಟ್ ಆಗಿದ್ದು 1984ರಲ್ಲಿ ಇದುವರೆಗೂ ಅಲ್ಲಿ ಹಾಸ್ಟಲ್ ಕಟ್ಟಡ ಇಲ್ಲ. 100 ಮಕ್ಕಳಿಗೆ ಎರಡು ಬಾಡಿಗೆ ಮನೆಯಲ್ಲಿ ಹಾಸ್ಟಲನ್ನು ನಾವು ನಡೆಸುತ್ತಿದ್ದೇವೆ. ನಮ್ಮಲ್ಲಿ 6 ತಿಂಗಳ ಕಾಲ ಮಳೆಗಾಲ ಇರುತ್ತದೆ. ಒಂದು ಬಾಡಿಗೆ ಕಟ್ಟಡಕ್ಕೂ ಇನ್ನೊಂದು ಬಾಡಿಗೆ ಕಟ್ಟಡಕ್ಕೂ ಅರ್ಧ ಕಿ.ಮೂ. ಅಂತರವಿದೆ. ಅವರ ಊಟ ತಿಂಡಿಗೆ ಒಂಗುದು ಕಟ್ಟಡದಿಂದ ಇನ್ನೊಂದು ಕಟ್ಟಡಕ್ಕೆ ಪ್ರತಿದಿನ ಬೆಳಗ್ಗೆ ಮತ್ತು ರಾತ್ರಿ ಹೋಗಬೇಕಾಗಿದೆ. ಹೀಗಿರುವುದರಿಂದ ಇವರಿಗೆ ಒಂದು ಕಟ್ಟಡ ಕಟ್ಟಿಸಬೇಕೆಂದು ಹೇಳಿದೆ. ಇವರು ಮಂತ್ರಿಗಳಾಗಿ ಬಂದಾಗಿನಂದ ಹಾಗೂ ನಾನು ಶಾಸಕಳಾಗಿ ಬಂದಾಗಿನಿಂದ ಒತ್ತಾಯ ಮಾಡುತ್ತಿದ್ದೇನೆ. ಅದಕ್ಕೆ ಬೇಕಾದ ಪ್ಲಾನ್ ಎಸ್ಟಿಮೇಟ್ ಎಲ್ಲಾ ತಯಾರಾಗಿದೆ. ಅಡ್ಮಿನಿಸ್ಟ್ರೇಟಿವ್ ಅಪ್ರೂವಲ್‌ಗೆ ಮೂರು ತಿಂಗಳು ಟೈಂ ತೆಗೆದುಕೊಂಡಿದ್ದಾರೆ. ಡೈರೆಕ್ಟರ್‌ಗೆ 10 ಸಾರಿ ಹೇಳಿದ್ದೇನೆ, ಸೆಕ್ರೆಟರಿಗೆ 10 ಸಾರಿ ಹೇಳಿದ್ದೇನೆ. ನಾನು ಲ್ಯಾಂಡ್‌ಆರ್ಮಿಯವರ ಹತ್ತಿರ ಕೇಳಿದ್ದೇನೆ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಪ್ರಸ್ತಾಪ ಮಾಡಿಲಿಲ್ಲ. ಆದರೂ ಅವರ ಅಧಿಕಾರಿಗಳ ದಕ್ಷತೆಯನ್ನು ಇವರು ಏನು ಇಲ್ಲಿ ಜಸ್ಟಿಫೈ ಮಾಡಿಕೊಳ್ಳುವುದು, ಡಿಫೆಂಡ್ ಮಾಡಿಕೊಳ್ಳುವುದು ನಡೆದಿದೆ. ಇವರ ಅಧಿಕಾರಿಗಳು ವಿಜಿಲೆಂಟಾಗಿ ಕೆಲಸ ಮಾಡಿದ್ದೇ ಆದರೆ ಈ ಇಲಾಖೆಯಲ್ಲಿ ಏಕೆ ಹಣ ಲ್ಯಾಪ್ಸ್ ಆಗುತ್ತದೆ? ಏಕೆ ಕಾರ್ಯಕ್ರಮಗಳು ಸರಿಯಾದ ರೀತಿಯಲ್ಲಿ ಆಗುವುದಿಲ್ಲ ಎನ್ನುವುದಕ್ಕೆ ಮಾನ್ಯ ಮಂತ್ರಿಗಳು ಉತ್ತರ ಹೇಳಬೇಕಾಗುತ್ತದೆ.

ಶ್ರೀ ಬಿ.ಶಿವಣ್ಣ:- ಅಧ್ಯಕ್ಷರೆ, ನಾನು ಮೊದಲೇ ಹೇಳಿದಹಾಗೆ ಮೂಡಿಗೆರೆ ಮೆನ್ ಹಾಸ್ಟಲ್ ಬಗ್ಗೆ 7-3-92 ಕ್ಕೆ ಆಡಳಿತಾತ್ಮಕ ಒಪ್ಪಿಗೆ ಸಿಕ್ಕಿದೆ. ಒಂದೆರಡು ದಿವಸದಲ್ಲಿ ಹಣ ಕೋಡುತ್ತೇನೆ.

ಅಧ್ಯಕ್ಷರು:- ಕೊಡುತ್ತೀರಾ?

ಶ್ರೀ ಬಿ.ಶಿವಣ್ಣ:- ಮೆನ್ಸ್‌ಹಾಸ್ಟಲಿಗೆಂದು 6 ಲಕ್ಷ ರೂಪಾಯಿ ಇದೆ, ಅದನ್ನು ಕೊಡುತ್ತೇವೆ.

ಶ್ರೀಮತಿ ಮೋಟಮ್ಮ:- ಅಧ್ಯಕ್ಷರೇ, ಮೂರು ತಿಂಗಳಾಗಿದೆ, ಅದಕ್ಕೆ ಏಕೆ ಇವರು ಅಧಿಕಾರಿಗಳನ್ನು ಕೊಶ್ಚನ್ ಮಾಡುವುದಿಲ್ಲ? ಇವರು ಏತಕ್ಕೆ ಡಿಫೆಂಡ್ ಮಾಡಿಕೊಳ್ಳುತ್ತಾರೆ. They are good; They are honest ಅಂತ ಇವರು ಡಿಫೆಂಡ್ ಮಾಡಿಕೊಳ್ಳತ್ತಾರೆ. ಹಾನೆಸ್ಟಿ ಬಗ್ಗೆ ನಾನೇನು ಪ್ರಶ್ನೆ ಮಾಡುವುದಿಲ್ಲ. ಈ ಇಲಾಖೆಯಲ್ಲಿ ನುಂಗುವಂತಹದ್ದು ಏನೂ ಇಲ್ಲ, ಆದರೆ ಇವರು ವಿಜಿಲೆಂಟಾಗಿ ಕೆಲಸ ಮಾಡಲಿಲ್ಲವೆಂದರೆ ಆ ಐದು ಜನ ಜಾಯಿಂಟ್ ಡೈರೆಕ್ಟರ್ಸ್ ಎಷ್ಟು ಜಿಲ್ಲೆಗಳಿಗೆ ಭೇಟಿ ಕೊಟ್ಟಿದ್ದಾರೆಂಬುದನ್ನು ತಿಳಿಸಬೇಕು.

ಶ್ರೀ ಬಿ.ಶಿವಣ್ಣ:- ಅದಕ್ಕೆ ಉತ್ತರ ಕೊಡುತ್ತೇನೆ, ಹಾಸ್ಟಲ್ ಕಟ್ಟಡದ ಬಗ್ಗೆ ವ್ಯವಸ್ಥೆ ಮಾಡುತ್ತಿದೇವೆಂದು ಹೇಳಿದ್ದೇನೆ.

ಶ್ರೀಮತಿ ಮೋಟಮ್ಮ:- ಅಧ್ಯಕ್ಷರೇ, ಇವರಿಗೆ ಮಕ್ಕಳು, ಹೆಂಡತಿ ಪ್ರಾಬ್ಲಮ್ ಏನೂ ಇಲ್ಲ, ಆದಕ್ಕೋಸ್ಕರ ತಮ್ಮ ಇಡೀ ಜೀವನವನ್ನು ಈ ಇಲಾಖೆಗೆ ಸ್ಯಾಕ್ರಿಫೈಸ್ ಮಾಡಿ ಕೆಲಸ ಮಾಡಬೇಕು. ನಮ್ಮ ಜಿಲ್ಲೆಗೆ ವಿಸಿಟ್ ಮಾಡಿಲ್ಲ, ಹಾಸನ ಜಿಲ್ಲೆಗೆ ವಿಸಿಟ್ ಮಾಡಿಲ್ಲ, ಶಿವಮೊಗ್ಗ ಜಿಲ್ಲೆಗೆ ವಿಸಿಟ್ ಮಾಡಿಲ್ಲ, ನೀವು 24 ಗಂಟೆ ನಿಮ್ಮ ಅಧಿಕಾರಿಗಳ ಜೊತೆ ದುಡಿದರೆ ಹರಿಜನ ಗಿರಿಜನರ ಯೋಜನೆಗಳು 100 ಪರ್ಸೆಂಟ್ ಸಕ್ಸೀಡ್ ಆಗುತ್ತವೆ.

SRI B.SHIVANNA:- I am the busiest Minister.

(ಗೊಂದಲ)

ಅಧ್ಯಕ್ಷರು:- ಶಿವಣ್ಣನವರೇ, you are not married. Mr.Anantakrishna says that you should wed this Department and you say that you are the busiest Minister. ಮೋಟಮ್ಮನವರು ನೀವು 24 ಗಂಟೆ ಇಲ್ಲಿ ಕೆಲಸ ಮಾಡಬೇಕೆಂದು ಹೇಳುತ್ತಾರೆ, ಆ 24 ಗಂಟೆಗಳಲ್ಲಿ ಹಗಲೂ ಸೇರುತ್ತದೆ, ರಾತ್ರಿಯೂ ಸೇರುತ್ತದೆ.

ಶ್ರೀ ಬಿ.ಶಿವಣ್ಣ:- ಆ ಬಡ ಜನರ ಕಳಕಳಿ ಬಗ್ಗೆ ಅವರು ಹೇಳಿದ್ದಾರೆ, ಅದನ್ನು ನಾನು ಒಪ್ಪುತ್ತಿದ್ದೇನೆ.

ಅಧ್ಯಕ್ಷರು:- ಈಗ ಮಹಿಳಾ ಸದಸ್ಯರದು ಆಯಿತು, ಇನ್ನು ಮುನಿಸ್ವಾಮಿಯವರು ಕೇಳಲು ರೆಡಿಯಾಗಿದ್ದಾರೆ.

ಶ್ರೀ ಬಿ.ಶಿವಣ್ಣ:- ಅಧ್ಯಕ್ಷರೇ, ಅವರು ಎಸ್.ಸಿ.ಪಿ.ಫಂಡ್ಸ್ ಬಗ್ಗೆ ಹೇಳುತ್ತಿದ್ದಾರೆ. ನಿಮಗೆ ಹೇಳಬೇಕೆಂದರೆ, ಈ ಒಂದು ಫಂಡ್ ಸ್ಟೇಟ್ ಸೆಕ್ಟರ್ ಮತ್ತು ಡಿಸ್ಟ್ರಿಕ್ಟ್ ಸೆಕ್ಟರ್ ಅಂತ ಡಿವೈಡ್ ಆಗುತ್ತದೆ. ಸ್ಟೇಟ್ ಸೆಕ್ಟರ್‌ನಲ್ಲಿ 38 ಡೆವಲಪ್‌ಮೆಂಟ್‌ಗಳಿವೆ. ಆ ಡಿಪಾರ್ಟ್‌ಮೆಂಟ್‌ಗಳವರು ಖರ್ಚು ಮಾಡಬೇಕಾಗುತ್ತದೆ. ಈ ಡಿಸ್ಟ್ರಿಕ್ಟ್ ಸೆಕ್ಟರ್‌ನಲ್ಲಿ ಜಿಲ್ಲಾ ಪರಿಷತ್ತುಗಳು ಖರ್ಚು ಮಾಡಬೇಕಾಗುತ್ತದೆ. ಇದರ ಮೇಲೆ ನಮಗೆ ಕಂಟ್ರೋಲ್ ಇಲ್ಲ. ನಮಗಿರುವ ಕಂಟ್ರೋಲ್ ಏನೆಂದರೆ, ಹೈ ಪವರ್ ಕಮಿಟಿ ಇದೆ. ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳಬೇಕು. ಏನೆಂದರೆ, ಯಾವ ಡಿಪಾರ್ಟ್‌ಮೆಂಟ್‌ಗಳು ಹಣ ಖರ್ಚು ಮಾಡಿಲ್ಲ, ಅದರ ಬಗ್ಗೆ pooling of the fund ಮಾಡಬೇಕೆಂದು, ಅದನ್ನು ನಾನು ಹೇಳುತ್ತೇನೆ. 1991-92ನೇ ಕಾಲಕ್ಕೆ ಅಂದರೆ ಮಾನ್ಯ ವೀರೇಂದ್ರ ಪಾಟೀಲರ ಕಾಲಕ್ಕೆ ಆ ಸಲಹೆ ಕೊಟ್ಟು 30 ಕೋಟಿ 10 ಲಕ್ಷ ರೂಪಾಯಿ ನಾವು ಕಲೆಕ್ಟ್ ಮಾಡಿದೆವು. ಆಗ ನಾವು ಸಾಕಷ್ಟು ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೆವು. ಆಗ ಈ ಹಣದಲ್ಲಿ 1 ಲಕ್ಷ ಮನೆಗಳನ್ನು 4 ವರ್ಷಗಳಲ್ಲಿ ಕಟ್ಟಿಕೊಡುವ ವ್ಯವಸ್ಥೆ ಮಾಡಿದೆವು. ಈಗಲೂ ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳಿಗೆ ನಾನು ಪತ್ರ ಬರೆದಿದ್ದೇನೆ, ಬಸಲಿಂಗಪ್ಪನವರಿಗೆ ಬರೆದಿದ್ದೇನೆ, ಖರ್ಗೆಯವರಿಗೆ ಬರೆದಿದ್ದೇನೆ ಮತ್ತು ಸಬ್ ಕಮಿಟಿಯವರಿಗೆ ಪತ್ರ ಬರೆದಿದ್ದೇನೆ.

ಸಭಾಧ್ಯಕ್ಷರು:- ಎಲ್ಲರಿಗೂ ಬರೆದಿದ್ದೀರಾ ?

ಶ್ರೀ ಬಿ.ಶಿವಣ್ಣ:- ಅಂಬೇಡ್ಕರ್ ಸೆಂಟಿನರಿ ಸೆಲಬ್ರೇಷನ್ ಕಮಿಟಿ ಮೀಟಿಂಗ್‌ನಲ್ಲಿ ಮುಖ್ಯಮಂತ್ರಿಗಳಿದ್ದರು. ಆಗ ನಾವೆಲ್ಲಾ ಡಿಸ್‌ಕಸ್ ಮಾಡಿದ್ದೇವೆ. ಆಗ ಮುಖ್ಯಮಂತ್ರಿಗಳಿಗೆ ಹೇಳಿದೆ. ಮುಖ್ಯಮಂತ್ರಿಗಳು ಸಹ ಒಪ್ಪಿಕೊಂಡಿದ್ದಾರೆ.ಅದೇ ಪ್ರಕಾರ ನಾನು ಲೆಟರ್ ಬರೆದಿದ್ದೇನೆ. ಈ ಹಣ ಲ್ಯಾಪ್ಸ್ ಆಗಬಾರದು. ಇದಕ್ಕೆ ನೀವು ಸಪರೇಟ್ ಆದ ಕಾರ್ಯಕ್ರಮಗಳನ್ನು ಹಾಕಿಕೊಳ್ಳಿರಿ ಅಥವಾ ಇಲಾಖೆಗಳಿಗೆ ದುಡ್ಡು ಹಂಚಿಕೊಡಿ, ಇದು ಲ್ಯಾಪ್ಸ್ ಆಗಬಾರದೆಂದು ತಿಳಿಸಿದ್ದೇನೆ. ಇಲ್ಲಿಯವರೆವಿಗೂ ಲ್ಯಾಪ್ಸ್ ಆಗುತ್ತಾ ಬಂದಿದೆ, ಇನ್ನು ಮುಂದೆ ಆಗಬಾರದೆಂದು ಹೇಳಿ ಮುಖ್ಯಮಂತ್ರಿಗಳಿಗೆ ಲೆಟರ್ ಬರೆದಿದ್ದೇನೆ. ಅಲ್ಲದೆ, ಸಂಬಂಧಪಟ್ಟಂಥ ಎಸ್.ಸಿ ಎಸ್.ಟಿ ಮಿನಿಸ್ಟರ್‌ಗಳಿಗೆಲ್ಲಾ ನಾನು ಬರೆದು ತಿಳಿಸಿದ್ದೇನೆ. ಈಗ ನಾವು ಆ ಫಂಡನ್ನು ಪೂಲ್ ಮಾಡಬಹುದು.

ಅಧ್ಯಕ್ಷರು:- ನೀವು ಕಳುಹಿಸಿರುವುದು ಒಂದು ಲೆಟರ್, ಅದನ್ನೇ, ಮೂರು ಸಾರಿ ಹೇಳಿದಿರಿ, ನಾನು ಲೆಟರ್ ಕಳುಹಿಸಿದ್ದೇನೆಂದು, If I have understood the spirit, the anxiety is that the funds earmarked for Scheduled Castes and Scheduled Tribes, under no circumstances, should be allowed to lapse. That is the concern of the House. I am sure you would take note and then follow it up apart from writing letters.

ಶ್ರೀ ಬಿ.ಶಿವಣ್ಣ:- ಬಹುಶ: ಇದಕ್ಕಿಂಥ ಕ್ಲಿಯರ್ ಆಗಿ ಹೇಳುವಂಥ ವ್ಯಕ್ತಿಗಳು ಬೇರೆ ಯಾರೂ ಸಿಕ್ಕುವುದಿಲ್ಲವೆಂದು ನನಗನ್ನಿಸುತ್ತದೆ. ಸ್ಟೇಟ್ ಸೆಕ್ಟರ್‌ನಲ್ಲಿ 38 ಇಲಾಖೆಗಳಿವೆ. ದುಡ್ಡು ಎಲ್ಲಾ ಆಟೋಮ್ಯಾಟಿಕ್ ಆಗಿ ಡೆವಲೆಪ್‌ಮೆಂಟ್ ಡಿಪಾರ್ಟ್‌ಮೆಂಟಿಗೆ ಹೊರಟು ಹೋಗುತ್ತದೆ. ನಮ್ಮ ಕೈಯಲ್ಲಿ ದುಡ್ಡು ನಿಲ್ಲುವುದಿಲ್ಲ ಅಥವಾ ಜಿಲ್ಲಾ ಪರಿಷತ್ತಿಗೆ ಆಟೋಮ್ಯಾಟಿಕ್ ಆಗಿ ಹೋಗುತ್ತದೆ. ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟಿಗೆ ಯಾವ ಕಂಟ್ರೋಲ್ ಇಲ್ಲ. ಆದರೆ, ಕೆಲಸ ಮಾಡಿದ್ದಾರಾ ಅಥವಾ ಇಲ್ಲವೇ ಎಂದು ಸೂಪರ್‌ವೈಸ್

ಮಾಡಬಹುದು. ಆ ಸೂಪರ್‌ವೈಸ್ ವರ್ಕ್ ಮಾಡಲು ಕಮಿಟಿಗಳನ್ನು ಮಾಡಿ ಎಂದು ನಾವು ಹೇಳಿದ್ದೇವೆ. ಈ ವರ್ಕ್ಸ್ ಸ್ಯಾಟಿಸ್‌ಫ್ಯಾಕ್ಟರಿ ಇಲ್ಲ ಅಂಥ ಕೂಡ ಆ ಹೈ ಪವರ್ ಕಮಿಟಿ ಮೀಟಿಂಗ್‌ನಲ್ಲಿ ನಾನು ಎಲ್ಲಾ ಅಧಿಕಾರಿಗಳ ಮುಂದೆ ಹೇಳಿದ್ದೀನಿ. ಜಿಲ್ಲಾ ಪರಿಷತ್ತುಗಳ ವರ್ಕ್ಸ್ ಕೂಡ ಸಕ್ಸಸ್ ಇಲ್ಲವೆಂದು ಹೇಳಿದ್ದೀನಿ. ಅದೇ ಪ್ರಕಾರ ಮುಖ್ಯಮಂತ್ರಿಗಳಿಗೂ ತಿಳಿಸಿದ್ದೇನೆ. ಪತ್ರಗಳನ್ನು ಬರೆದಿದ್ದೇನೆ. ಎಸ್.ಸಿ.ಪಿ. ಫಂಡ್ ಮಾತ್ರ ಎಂದೂ ಲ್ಯಾಪ್ಸ್ ಆಗಬಾರದು, ಈ ಫಂಡ್ ಪೂಲ್ ಮಾಡಬೇಕು ಹಾಗೂ ಇದೇ ಜನರ ಸಲುವಾಗಿ ಇಡಬೇಕೆಂದು ಹೇಳಿದ್ದೇನೆ. ಅದೇ ಪ್ರಕಾರ ಸೋಷಿಯಲ್ ವೆಲ್‌ಫೇರ್ ಮಿನಿಸ್ಟರ್ಸ್ ಕಾನ್‌ಫರೆನ್ಸ್‌ಗೆ ದೆಹಲಿಗೆ ಹೋದಾಗ ಅಲ್ಲಿ ಮಾನ್ಯ ಸೀತಾರಾಮ ಕೇಸರಿ ಅವರೂ ಕೂಡ ಈ ಪ್ರಪೋಸಲ್ ಅನ್ನು ಒಪ್ಪಿಕೊಂಡರು. ಕರ್ನಾಟಕ ಸ್ಟೇಟ್‌ನವರು ಮಾತ್ರ ಈ ಪ್ರಪೋಸಲ್ಸ್ ಕಳುಹಿಸಿದ್ದಾರೆ, ಎಸ್.ಸಿ.ಪಿ. ಫಂಡ್ಸ್ ಮಾತ್ರ ಲ್ಯಾಪ್ಸ್ ಆಗಬಾರದು. They must be pooled ಅಂಥ ಅವರೂ ಕೂಡ ಒಂದು ಡೈರೆಕ್ಷನ್ ಕೊಡುವವರಿದ್ದಾರೆ. ಈ ಪ್ರಕಾರ ನಾನು ಕಾರ್ಯಕ್ರಮವನ್ನು ಕೈಗೊಂಡಿದ್ದೇನೆ. ಆದರೆ ಹಂತಹಂತವಾಗಿ ಆಡಳಿತಾತ್ಮಕ ತೊಂದರೆಗಳು ಬರುತ್ತವೆ. ಅಧ್ಯಕ್ಷರೆ, ಎಲ್ಲಿಯಾದರೂ ಎಸ್.ಸಿ.ಗಳ ಮನೆಮುಂದೆ, ಯಾವುದೋ ಜೋಪಡಿ ಹತ್ತಿರ, ಅರಾಕ್ ಷಾಪ್ ಇರುತ್ತದೆ. ಅದನ್ನು ಸಮಾಜ ಕಲ್ಯಾಣ ಮಂತ್ರಿಯಾಗಿ ತೆಗೆಸಬೇಕೆಂದರೆ ನನಗೆ ಸಾಧ್ಯವಾಗುವುದಿಲ್ಲ. ಅದು ಎಕ್ಸೈಸ್ ಡಿಪಾರ್ಟ್‌ಮೆಂಟ್‌ಗೆ ಬರುತ್ತದೆ. ಎಲ್ಲೋ ಹೊಡೆದಾಟ ಮಾಡಿದರು, ಎಲ್ಲೋ ಜಗಳವಾಡಿದರು, ಕುಡಿದು ಸಿನಿಮಾ ಹತ್ತಿರ ಹೊಡದಾಡಿದರು ಎಂದರೆ, ಅದು ಗೃಹ ಇಲಾಖೆಗೆ ಸಂಬಂಧಪಟ್ಟದ್ದು ಇರುತ್ತದೆ. ಎಲ್ಲೋ ರೆವಿನ್ಯೂ ಇಲಾಖೆಯಲ್ಲಿ ಪಟ್ಟ ಮಾಡಿಕೊಡಲಿಲ್ಲ ಎಂದು ಜಗಳ ಆಡಿದರೆ ಅದು ರೆವಿನ್ಯೂಗೆ ಬರುತ್ತದೆ. ಇನ್ನು ಅವರು ಇವರು ಹೋಡೆದಾಡಿದರೆ ಅವರಲ್ಲಿ ಯಾರಾದರೂ ಹರಿಜನರು ಇದ್ದರೆ ಏನ್ರಿ, ಸೋಷಿಯಲ್ ವೆಲ್‌ಫೇರ್ ಮಿನಿಸ್ಟರ್ ಬರಲೇ ಇಲ್ಲ ಎಂದು ಹೇಳುತ್ತಾರೆ.

ಶ್ರೀ ಆರ್. ಎನ್. ನಾಯಕ್:- ಅಧ್ಯಕ್ಷರೆ, ಇವರಿಗೆ ಯಾವುದು ಬರುತ್ತದೆ ಎಂದು ಹೇಳಲಿ, ಇವರಿಗೆ ಕೆಲಸನೇ ಇಲ್ಲ. 24 ತಾಸು ಸುಮ್ಮನೆ ಇರಬಹುದು. ಇವರು ಎಲ್ಲಾ ಡಿಪಾರ್ಟ್‌ಮೆಂಟ್‌ಗಳಿಗೂ ಕೈ ಹಾಕಿಬಿಟ್ಟು, ನೀವು ಸುಮ್ಮನೆ ಇದ್ದುಬಿಟ್ಟರೆ, ಕೆಲಸಗಳು ಹೇಗೆ ಆಗುತ್ತವೆ?

ಶ್ರೀ ಎನ್. ಜಿ. ನಾಯಕ್:- ಸನ್ಮಾನ್ಯ ಅಧ್ಯಕ್ಷರೆ, ತಮ್ಮ ಮುಖಾಂತರ ನಾನು ಸಚಿವರಲ್ಲಿ ಹೇಳುತ್ತಿದ್ದೇನೆ. ಇದುವರೆಗೂ ನನ್ನ ಕ್ಷೇತ್ರಕ್ಕೆ ಇವರು ಬಂದಿಲ್ಲ. ಅಲ್ಲಿ ಹರಿಜನರು ಗಿರಿಜನರು ಸುಮಾರು 60 ಪರ್ಸೆಂಟ್ ಇದ್ದಾರೆ. 300 ಅಂಬೇಡ್ಕರ್ ಮನೆಗಳು ಸ್ಯಾಂಕ್ಷನ್ ಆಗಿದೆ. ಸೈಟುಗಳು ಕೊಟ್ಟಿದ್ದೇವೆ, ಎಲ್ಲಾ ಆಗಿದೆ. ಆದರೆ ಇದುವರೆಗೂ ಮನೆ ಕಟ್ಟಲು ಹಣ ಬಂದಿಲ್ಲ. ಈ ದುಡ್ಡೆಲ್ಲಾ ಏನಾಗುತ್ತದೆ ಅಂದರೆ ಲ್ಯಾಪ್ಸ್ ಆಗುತ್ತದೆ. ಏಕೆಂದರೆ ಸರಿಯಾಗಿ ಕಂಟ್ರೋಲ್ ಇಲ್ಲ, ಸರಿಯಾಗಿ ಮ್ಯಾನೇಜ್‌ಮೆಂಟ್ ಮಾಡಿಲ್ಲ ಎಂದು ನಾನು ಹೇಳುತ್ತಿದ್ದೇನೆ. ಸರಿಯಾಗಿ ಫೈಲ್‌ಗಳನ್ನು ನೋಡುತ್ತಾ ಇದ್ದರೆ ಏತಕ್ಕಾಗಿ ಲ್ಯಾಪ್ಸ್ ಆಗುತ್ತದೆ? ದಯವಿಟ್ಟು ತಮ್ಮ ಮುಖಾಂತರ ಅವರಿಗೆ ಕೇಳುತ್ತಿದ್ದೇನೆ, ಅವರು ನನಗೆ ಜವಾಬು ಕೊಡಬೇಕು.

ಶ್ರೀ ಬಿ. ಶಿವಣ್ಣ:- ಅಧ್ಯಕ್ಷರೇ ಅಧಿಕಾರಿಗಳು ಆಯಾ ಸಮಯದಲ್ಲಿ ಹಣ ಕೊಡುವುದರ ಬಗ್ಗೆ ಕಾರ್ಯಕ್ರಮ ಹಾಕಿಕೊಂಡು ಚೆನ್ನಾಗಿ ಕೆಲಸ ಮಾಡಿದ್ದಾರೆ.

ಶ್ರೀ ಆರ್. ಎನ್. ನಾಯಕ್: - ತಾವು ತಪ್ಪು ತಿಳಿದುಕೊಂಡಿದ್ದೀರಿ. ನನ್ನ ಉದ್ದೇಶ ಏನು ಎಂದರೆ ಹೀಗಾದರೂ ಸ್ವಲ್ಪ ನಿಮ್ಮನ್ನು ಇಲ್ಲಿ ಬೆಚ್ಚಗೆ ಮಾಡಿದರೆ ಮುಂದಿನ ಸಲ ಒಳ್ಳೆಯ ಕೆಲಸ ಮಾಡುತ್ತೀರಿ ಅನ್ನುವ ಕಾರಣಕ್ಕಾಗಿ ನಾನು ಹೇಳಿದೆ. ನೀವು ಅದನ್ನು ಸ್ಪೋರ್ಟಿವ್ ಆಗಿ ತೆಗೆದುಕೊಳ್ಳಬೇಕು. ನೀವು ಹಾಗೇನಾದರೂ ಭಾವನೆ ಪಟ್ಟರೆ ನಾನು ಒಂದು ಮಾತನ್ನೂ ಆಡುವುದಿಲ್ಲ. ಸುಮ್ಮನೆ ಕುಳಿತುಕೊಳ್ಳುತ್ತೇನೆ. ತಾವೇ ಸ್ವಲ್ಪ ತಿಳಿದುಕೊಳ್ಳಬೇಕು, ಬೇರೆ ಬೇರೆ ಡಿಪಾರ್ಟ್‌ಮೆಂಟ್‌ನವರು ಕೆಲಸ ಮಾಡುವುದಿಲ್ಲ ಅಂಥ ತಾವು ಹೇಳಿದಿರಿ, ತಾವು ವಿಚಾರ ಮಾಡಿ ಹೇಳಿ. ನಿಮಗೆ ಎಷ್ಟು ದೊಡ್ಡ ಅಧಿಕಾರ ಈ ಕರ್ನಾಟಕ ರಾಜ್ಯದಲ್ಲಿ ಇದೆ ನೋಡಿ. ಎಲ್ಲಾ

ಡಿಪಾರ್ಟ್‌ಮೆಂಟ್‌ಗಳನ್ನು ಸ್ವಲ್ಪ ಹೊತ್ತಾದರೂ ಹತೋಟಿಯಲ್ಲಿ ಇಟ್ಟುಕೊಳ್ಳುವಂಥ ಒಂದು ತಾಕತ್ತು ನಿಮ್ಮ ಮಂತ್ರಿಗಿರಿಗೆ ಇದೆ. ಆದ್ದರಿಂದ ಅವರು ಮಾಡೋದಿಲ್ಲ, ಇವರು ಮಾಡೋದಿಲ್ಲ ಅಂಥ ಹೇಳೋದು ಸರಿಯೇ? ತಾವು ವಿಚಾರ ಮಾಡಿ. ನಿಮ್ಮ ಕೆಲಸ ಏನು ಎಂದು ಸ್ವಲ್ಪ ಹೇಳಿ ಬಿಟ್ಟರೆ ಕೇಳಿಕೊಂಡು ಸುಮ್ಮನೆ ಆ ಕಡೆ ಊಟಕ್ಕೆ ಹೋಗುತ್ತೇವೆ.

ಶ್ರೀ ಬಿ. ಶಿವಣ್ಣ:- ಸನ್ಮಾನ್ಯ ಅಧ್ಯಕ್ಷರೆ, ನಾನು ಮತ್ತೊಮ್ಮೆ ಹೇಳುತ್ತಿದ್ದೀನಿ, ಸಾಕಷ್ಟು ವ್ಯವಸ್ಥಿತವಾಗಿ ಕೆಲಸ ಮಾಡುತ್ತಾ ಇದ್ದೇನೆ ನಾನು ಇನ್‌ಸ್ಟೆನ್‌ಸಸ್ ಕೊಟ್ಟೆ, ಸಂಬಂಧಪಟ್ಟಿಲ್ಲ ಎಂದು ಅರ್ಥ ಅಲ್ಲ, ಆದರೆ ಕೆಲವು ಸಾರಿ ಅದು ಇಂಟರ್ ಲಿಂಕ್ ಇರುತ್ತದೆ. ಆದ್ದರಿಂದ ನಾವು ಆ ಕೆಲಸ ಮಾಡಲಿಕ್ಕೆ ಆಗಿರುವುದಿಲ್ಲ. ಏಕೆಂದರೆ ಡಿಪಾರ್ಟ್‌ಮೆಂಟ್‌ನವರು ಮುಖ್ಯವಾಗಿರುತ್ತಾರೆ. ಸಂಬಂಧಪಟ್ಟ ವ್ಯಕ್ತಿ ಷೆಡ್ಯೂಲ್ ಕಾಸ್ಟ್, ಬ್ಯಾಕ್‌ವರ್ಡ್, ಮೈನಾರಿಟಿ ಇರಬಹುದು, ಎಲ್ಲೇ ಯಾವುದೇ ವಿಷಯಗಳು ಬಂದಂಥ ಕಾಲಕ್ಕೆ ನಾನು, ನಮ್ಮ ಸೀನಿಯರ್ ಆಫೀಸರ್ಸ್, ಡೈರೆಕ್ಟರ್ಸ್, ಮೆಂಬರ್ಸ್ ಆಯಿತು ನಾವೂ ಕೂಡ ಹೋಗಿ ಬಂದಿದ್ದೇವೆ ಎಂದು ಹೇಳಬೇಕಾಗುತ್ತದೆ. ಇನ್ನು ಎಲ್ಲಿಯಾದರೂ ಕಾರ್ಯಕ್ರಮಗಳು ಇದ್ದರೆ ನಾವು ಶಾಸಕ ಮಿತ್ರರ ಪ್ರೋಗ್ರಾಮ್ ತೆಗೆದುಕೊಂಡು ನಾವು ಹೋಗಲಿಕ್ಕೆ ಸಾಧ್ಯ ಇದೆ. ತಮಗೆ ಎರಡು ಹಾಸ್ಟಲ್ ಕೊಟ್ಟಿದ್ದೇನೆ, ಆ ಬಗ್ಗೆ ತಾವು ಏನೂ ಹೇಳುತ್ತನೇ ಇಲ್ಲ. ಈಗ ನಮ್ಮ ಶಾಸಕ ಮಿತ್ರರು ಕೊಟ್ಟಂತಹ ಸಲಹೆಗಳು ಎಫೆಕ್ಟೀವ್ ಆಗಿ ಆಗಬೇಕೆಂದು ಹೇಳಿದರು. ಬಹುಶ: ಇನ್ನು ಎಫೆಕ್ಟೀವ್ ಆಗಲಿಕ್ಕೆ ಪ್ರಯತ್ನ ಮಾಡುತ್ತೀವೆಂದು ಹೇಳುತ್ತೇನೆ.

(ಗೊಂದಲ)

ಶ್ರೀ ಎಂ. ಮಹದೇವ್:- ನೀವು ಎಫೆಕ್ಟೋ, ನಿಮ್ಮ ಕೆಲಸ ಎಫೆಕ್ಟೋ? ಅವರೆಲ್ಲರಿಗೂ ಒಂದೊಂದು ಹಾಸ್ಟಲ್ ಕೊಟ್ಟಿದ್ದೀರಿ.

ಶ್ರೀ ಎಲ್.ಆರ್.ಶಿವರಾಮೇಗೌಡ :- ಯಾರು ಮಾತನಾಡುತ್ತಾರೋ ಅವರಿಗೆ ಒಂದು ಹಾಸ್ಟಲ್ ಕೊಟ್ಟಿದ್ದಾರೆ. ಈಗ ನನಗೂ ಒಂದು ಕೊಟ್ಟಿದ್ದಾರೆ.

ಅಧ್ಯಕ್ಷರು :- ಶಿವಣ್ಣನವರೇ, ನಿಮ್ಮ ಉತ್ತರದಲ್ಲಿ ಒಂದು ಸ್ಪಷ್ಟವಾಯಿತು. ಇಲ್ಲಿ ನಿಮಗೆ ಬಹಳ ಜನ ಕೃತಜ್ಞರಿದ್ದಾರೆ ಎಂದು.

ಶ್ರೀ ಎಂ.ಮಹದೇವ್ :- ಶಿವಣ್ಣನವರು ಎಫೆಕ್ಟೀವ್ ಆಗಿದ್ದಾರೆ ಎಂಬುದಕ್ಕೆ ನಮಗೆ ಒಂದು ಹಾಸ್ಟಲನ್ನು ಕೊಟ್ಟಿದ್ದಾರೆ. ಆದುದರಿಂದ ಅವರು ಎಫೆಕ್ಟೀವ್ ಆಗಿದ್ದಾರೆ ಎಂದು ನಾನು ಭಾವಿಸಿಕೊಂಡಿದ್ದೇನೆ.

ಶ್ರೀ ಆರ್.ಎನ್.ನಾಯಕ್ :- ಅವರು ಹಾಸ್ಟಲ್ ಕೊಟ್ಟಿದ್ದಾರೆ. ಹಾಗಾದರೆ ನಾನು ಮನೆ ಬಿಟ್ಟು ಹಾಸ್ಟಲ್‌ಗೆ ಹೋಗಲೇ ?

ಶ್ರೀಮತಿ ಸುಮಾವಸಂತ್:- ಮಾನ್ಯ ಅಧ್ಯಕ್ಷರೇ, ಈ ಇಲಾಖೆಯ ಬಗ್ಗೆ ಸೀರಿಯಸ್‌ನೆಸ್ ಇಲ್ಲದೆ ಡಿಸ್ಕಷನ್ ಆಗುತ್ತಿದೆ ಎಂದು ನಾನು ಹೇಳಬಯಸುತ್ತೇನೆ. 1990-91 ರಲ್ಲಿ 30 ಕೋಟಿ ರೂ ಎಸ್‌ಇಪಿ ಮತ್ತು ಡಿಎಸ್‌ಪಿ ಓಲ್ಡ್ ಫಂಡ್ ಏನಿದೆ ಅದರಲ್ಲಿ ಅವರು ಕಾರ್ಯಕ್ರಮ ಹಾಕಿಕೊಂಡಿದ್ದಾರೆ. ಆದರೆ 1992ನೇ ಇಸವಿ ಬಂದರೂ ಕೂಡ ಈ ಕಾರ್ಯಕ್ರಮ ಪೂರ್ಣವಾಗಿ ಆಗಿಲ್ಲ. 2 ಪರ್ಸೆಂಟ್ ಹಣ ಮಾತ್ರ ಖರ್ಚಾಗಿದೆ. ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ?

ಇದೇ ರೀತಿ ಎಸ್ ಸಿ ಎಸ್ ಟಿ ಡೆವಲಪ್‌ಮೆಂಟ್ ಕಾರ್ಪೊರೇಷನ್ ಬಗ್ಗೆ ಇಲಾಖೆ ಬಹಳ ಒಳ್ಳೆಯ ಕೆಲಸ ಮಾಡಿದೆ ಎಂದು ಮಾನ್ಯ ಮಂತ್ರಿಗಳು ಹೇಳಿದರು. ನಮ್ಮ ವಿರಾಜಪೇಟೆ ತಾಲ್ಲೂಕಿನಲ್ಲಿ ಸುಮಾರು 40 ಸಾವಿರ ಟ್ರೈಬ್ಸ್ ಇದ್ದಾರೆ. ಫಾರೆಸ್ಟ್ ಬೆಲ್ಟ್ ಒಂದರಲ್ಲೇ ಸುಮಾರು 20 ಸಾವಿರ ಟ್ರೈಬ್ಸ್ ಇದ್ದಾರೆ ಅದರಲ್ಲೂ ನಾಗರಹೊಳೆ, ತಿತಿಮತಿ, ಸಿದ್ದಾಪುರ ಏರಿಯದಲ್ಲಿ ಬಹಳ ಜನ ಟ್ರೈಬ್ಸ್ ಇದ್ದಾರೆ. ಅವರಿಗೆ ಎಷ್ಟು ಮನೆಗಳನ್ನು ಕಟ್ಟಿದ್ದೀರಿ ? ಅವರ ಪರಿಸ್ಥಿತಿ ಹೇಗಿದೆ ? ಅವರ ಆರ್ಥಿಕ ಪರಿಸ್ಥಿತಿ ಉತ್ತಮವಾಗಿದೆಯೇ ? ಅವರಿಗೋಸ್ಕರ ನೀವು ಏನೇನು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೀರಿ ? ತಾವು ಅಲ್ಲಿಗೆ ಭೇಟಿ ಕೊಟ್ಟಿದ್ದೀರಾ ? ತಮ್ಮ ಅಧಿಕಾರಿಗಳು

ಬೇಟಿ ಕೊಟ್ಟಿದ್ದಾರೆಯೇ ? ನಾಗರ ಹೊಳೆ ಕಾಡು ಸುಟ್ಟು ಹೋಗಿರುವುದರಿಂದ ಅದನ್ನು ರಕ್ಷಿತ ಪ್ರದೇಶವೆಂದು ಘೋಷಣೆ ಮಾಡಿದ್ದೀರಿ. ಹೀಗಾದರೆ ಅಲ್ಲಿರತಕ್ಕ ಟ್ರೈಬ್ಸ್ ಜನರು ಎಲ್ಲಿಗೆ ಹೋಗಬೇಕು ? ಟಿಬೇಟಿಯನ್ನರಿಗೆ 200-ಎಕರೆ ಫಾರೆಸ್ಟನ್ನು ಬಿಟ್ಟು ಕೊಟ್ಟು ಅವರ ಜೀವನಕ್ಕೆ ವ್ಯವಸ್ಥೆ ಮಾಡಿ ಕೊಟ್ಟಿದ್ದೀರಿ. ಆದರೆ ಈ ಫಾರೆಸ್ಟ್ ಏರಿಯಾದಲ್ಲೇ 60 ವರ್ಷಗಳಿಂದ ಹುಟ್ಟಿ ಬೆಳೆಯುತ್ತಿರತಕ್ಕ ಈ ಟ್ರೈಬ್ಸ್‌ನವರಿಗೆ ಇದುವರೆಗೆ ಏನೇನು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೀರಿ, ಇಷ್ಟು ಹಣವನ್ನು ಏನು ಮಾಡಿದ್ದೀರೆಂದು ಹೇಳಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಶಿವಣ್ಣ:- ಮಾನ್ಯ ಅಧ್ಯಕ್ಷರೆ, ಮಾನ್ಯ ಸುಮಾವಸಂತ್‌ರವರು ನಮ್ಮ ಸಮಿತಿಯ ಸದಸ್ಯರಾಗಿದ್ದಾರೆ.

ಅಧ್ಯಕ್ಷರು:- ಶಿವಣ್ಣವನರೇ, ಇದು ಬಹಳ ಗಂಭೀರವಾದ ಮತ್ತು ಗಹನವಾದ ವಿಚಾರ ಎಂದು ಶ್ರೀಮತಿ ಸುಮಾ ವಸಂತರವರು ಹೇಳಿದ್ದಾರೆ.

ಶ್ರೀ ಬಿ. ಶಿವಣ್ಣ:- ಅವರು ನಮ್ಮ ಸಮಿತಿಯ ಸದಸ್ಯರಾಗಿದ್ದಾರೆ. ಅವರಿಗೆ ಎಲ್ಲಾ ಗೊತ್ತಿದೆ. ಡಾ|| .ಅಂಬೇಡ್ಕರ್ ಸೆಂಟಿನರಿ ಸೆಲೆಬ್ರೇಷನ್‌ಗೋಸ್ಕರ ಈ ಜನರಿಗೋಸ್ಕರ 279 ಕೋಟಿ ರೂಗಳ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇನೆ. ನಾವು 3 ವರ್ಷಗಳಲ್ಲಿ ಹಂತ ಹಂತವಾಗಿ ಖರ್ಚು ಮಾಡಬೇಕೆಂದು ಯೋಜನೆ ಹಾಕಿಕೊಂಡಿದ್ದೇವೆ.

ಅಧ್ಯಕ್ಷರು:- ಅವರು ನಿರ್ದಿಷ್ಟವಾಗಿ ನಾಗರಹೊಳೆ, ತಿತಿಮತಿಯಲ್ಲಿರತಕ್ಕ ಟ್ರೈಬ್ಸ್ ಬಗ್ಗೆ ಬಹಳ ಆಸಕ್ತಿಯಿಂದ ಕೇಳಿದ್ದಾರೆ.

ಶ್ರೀ ಬಿ. ಶಿವಣ್ಣ:- ಹಣ ಖರ್ಚಾಗಿಲ್ಲವೆಂದು ಅವರು ಹೇಳಿದರು. ಮೊನ್ನೆ ರಿವ್ಯೂ ಮೀಟಿಂಗ್‌ನಲ್ಲಿ ಕೂಡ ನಾವು ಡಿಸ್ಕಷನ್ ಮಾಡಿದ್ದೇವೆ. ನಾವು 3 ವರ್ಷಗಳಲ್ಲಿ ಹಂತಹಂತವಾಗಿ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತೇವೆಂದು ಹೇಳಬಯಸುತ್ತೇನೆ. ಟ್ರೈಬಲ್ ಸಬ್ ಪ್ಲಾನ್‌ನಲ್ಲಿ ಈ ವರ್ಷ 20.43 ಕೋಟಿ ರೂಗಳನ್ನಿಟ್ಟಿದ್ದೇವೆ. ಇದರಲ್ಲಿ 1991-92ಕ್ಕೆ ಸುಮಾರು 8 ಸಾವಿರ ಜನರು ಫಲಾನುಭವಿಗಳಿದ್ದಾರೆ. ಇದೇರೀತಿ 92-93ನೇ ಸಾಲಿನಲ್ಲಿ 9 ಸಾವಿರ ಫಲಾನುಭವಿಗಳಿಗೆ ಅನುಕೂಲ ಮಾಡಿಕೊಡುತ್ತಿದ್ದೇವೆ.

ಶ್ರೀಮತಿ ಸುಮಾವಸಂತ:- ನಾಗರಹೊಳೆಯಲ್ಲಿರುವರಿಗೆ ಮನೆ ಮತ್ತಿತರ ಅವಶ್ಯಕತೆಗಳನ್ನು ಒದಗಿಸಿಕೊಟ್ಟಿದ್ದೀರಾ? ನಮ್ಮಲ್ಲಿ ಹೆಚ್ಚು ಜನರು ಫಾರೆಸ್ಟ್ ಬೆಲ್ಟ್‌ನಲ್ಲೇ ಇದ್ದಾರೆ. ಇವರಿಗೆ ಯಾವ ರೀತಿಯಿಂದಲೂ ಹಣವನ್ನು ನಿಮ್ಮ ಇಲಾಖೆಯಿಂದ ಖರ್ಚು ಮಾಡುವುದಕ್ಕಾಗುತ್ತಿಲ್ಲ. ಇಲ್ಲಿ ಯಾವುದೇ ಕಾರ್ಯಕ್ರಮಗಳನ್ನೂ ಕೂಡ ಮಾಡುವುದಕ್ಕೆ ನಿಮ್ಮ ಫಾರೆಸ್ಟ್ ಅಧಿಕಾರಿಗಳು ಅವಕಾಶ ಕೊಡುತ್ತಿಲ್ಲ. ಅವರು ಇನ್ನೂ ಗುಡಿಸಲುಗಳನ್ನು ಕಟ್ಟಿಕೊಂಡೇ ಜೀವನ ನಡೆಸುತ್ತಿದ್ದಾರೆ. ಟಿಬೇಟಿಯನ್ನರಿಗೆ ಯಾವ ರೀತಿ ಅನುಕೂಲ ಮಾಡಿಕೊಟ್ಟಿದ್ದೀರಿ ಅದೇರೀತಿ ಇವರಿಗೂ ಕೂಡ ಫಾರೆಸ್ಟ್ ಬೆಲ್ಟ್‌ನಲ್ಲಿ 200 ಎಕರೆಯನ್ನು ಕೊಡುವಂತೆ ಕೇಂದ್ರ ಸರ್ಕಾರದ ಜೊತೆ ಮಾತನಾಡಿ ಇವರಿಗೂ ಅನುಕೂಲ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಶಿವಣ್ಣ:- ನಾಗರಹೊಳೆ ಅರಣ್ಯದಲ್ಲಿ ಇದ್ದಂಥ ಜನರಿಗೆ ಅಂದರೆ ನಮಗೆ ಸಂಬಂಧಪಟ್ಟಂಥ ಟ್ರೈಬಲ್ಸ್ ಸಬ್ ಪ್ಲಾನ್‌ನಲ್ಲಿ ಯಾರು ಬರುತ್ತಾರೆ ಅವರಿಗೆ ಎಲ್ಲಾ ರೀತಿಯ ರಕ್ಷಣೆ ಕೊಡುತ್ತಿದ್ದೇವೆ. ಅಷ್ಟೇ ಅಲ್ಲದೆ ತಮಗೆ ಗೊತ್ತಿರಬಹುದು, ಮೊನ್ನೆ ಎರಡು ಕೇಸ್‌ಗಳಾಯಿತು. ಅಲ್ಲಿ ಕೇವಲ 5-6-7-8 ಜನರು 3-4 ತಿಂಗಳಲ್ಲಿ ಸತ್ತದ್ದು ಕೌನ್ಸಿಲ್‌ನಲ್ಲಿಯೂ ಕೂಡ ಪ್ರಸ್ತಾಪಕ್ಕೆ ಬಂದಿದೆ. ಅದರ ಬಗ್ಗೆ ಅಲ್ಲಿ ಹೇಳಿಕೆಯನ್ನು ಕೂಡ ಕೊಟ್ಟಿದ್ದೇವೆ. ಅವರಿಗೆ ಮಳೆಗಾಲದ ವೇಳೆಯಲ್ಲಿ ಉದ್ಯೋಗ ಸಿಗುವುದಿಲ್ಲ. ಆದ್ದರಿಂದ ಫಾರೆಸ್ಟ್ ಡಿಪಾರ್ಟ್‌ಮೆಂಟ್‌ನಲ್ಲಿ ಮತ್ತು ರೆವಿನ್ಯೂ ಡಿಪಾರ್ಟ್‌ಮೆಂಟ್‌ನಲ್ಲಿ ಮಾತನಾಡಿ ಅವರಿಗೆ ಅಗ್ರಿಕಲ್ಚರ್ ಲ್ಯಾಂಡ್ ಕೊಡಬೇಕೆಂದು ಯೋಚಿಸಿದ್ದೇವೆ. ಮತ್ತು ಡಿಪಾರ್ಟ್‌ಮೆಂಟ್‌ನಿಂದ ಸಹಾಯ ಮಾಡಬೇಕೆಂದು ನಿರ್ಧರಿಸಿದ್ದೇವೆ. ಅವರು ಉಪ ಜೀವನ ಮಾಡುವುದಕ್ಕೆ ಅವರಿಗೆ 6ರೂ ಮತ್ತು 3ರೂ ವೇತನ ಕೊಡುತ್ತಿದ್ದೇವೆ. ಇದರಲ್ಲಿ

ಫಾರೆಸ್ಟ್ ಡಿಪಾರ್ಟ್‌ಮಂಟ್‌ನವರ ಹಾಗೂ ನಮ್ಮ ಡಿಪಾರ್ಟ್‌ಮೆಂಟ್‌ನವರೂ ಅಡ್ಜಸ್ಟ್ ಮಾಡಿಕೊಂಡು ಹೋಗಬೇಕಾಗಿದೆ. ಅವರು ಬಹಳವಾಗಿ ಫಾರೆಸ್ಟ್‌ನಲ್ಲಿ ಇರುವಂಥ ಜನರೆಂದು ತಿಳಿದು ಅವರಿಗಾಗಿ ಇಂಥ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಟ್ರೈಬಲ್ ಪ್ಲಾನ್‌ನಲ್ಲಿ ನಾವು ಕೆಲಸವನ್ನು ಮಾಡುತ್ತಿದ್ದೇವೆ. ನಾಲ್ಕು ಡಿಸ್ಟ್ರಿಕ್ಟ್‌ಗಳಲ್ಲಿ ಈ ರೀತಿ ಎರಡು ಮೂರು ತಾಲ್ಲೂಕುಗಳಿವೆ. 1686 ಹಳ್ಳಿಗಳಲ್ಲಿ ನಮ್ಮ ಟ್ರೈಬಲ್ಸ್ ಸಬ್ ಪ್ಲಾನ್‌ನಲ್ಲಿ ಬರುತ್ತಾರೆ. ಇವರಲ್ಲಿ ಷೆಡ್ಯೂಲ್ ಕ್ಯಾಸ್ಟ್ ಮತ್ತು ಷೆಡ್ಯೂಲ್ ಟ್ರೈಬ್ಸ್ ಪಾಪ್ಯುಲೇಷನ್ 18,25,000 ಅದರಲ್ಲಿ ನಾಲ್ಕು ಫರ್ಸೆಂಟ್ ಜನರಿಗೆ ಎಜ್ಯುಕೇಷನ್ ಫೆಸಿಲಿಟೀಸ್ ಕೂಡ ಕೊಡುತ್ತಿದ್ದೇವೆ. ಈಗ ನಮ್ಮಲ್ಲಿ ಮಹಿಳಾ ಮತ್ತು ಮಕ್ಕಳ ವೆಲ್‌ಫೇರ್ ಸೆಂಟರ್ಸ್ 95 ಇವೆ. ಇದರಲ್ಲಿ 4750 ಹೆಣ್ಣು ಮಕ್ಕಳಿಗೆ ಸಹಾಯ ಮಾಡಬಹುದು. 62 ಆಶ್ರಮ ಶಾಲೆಗಳು, ವಿಶೇಷವಾಗಿ ಷೆಡ್ಯೂಲ್ ಟ್ರೈಬ್ಸ್‌ಗಾಗಿ ಇವೆ. ಅಲ್ಲದೆ ಗೌರ್ನಮೆಂಟ್ ಬಾಯ್ಸ್ ಹಾಸ್ಟಲ್ ಫಾರ್ ಷೆಡ್ಯೂಲ್ ಟ್ರೈಬ್ಸ್ ಎಂದು 17 ಇವೆ. ಗೌರ್ನಮೆಂಟ್ ಗರ್ಲ್ಸ್ ಹಾಸ್ಟಲ್ ಫಾರ್ ಷೆಡ್ಯೂಲ್ ಟ್ರೈಬ್ಸ್ ಎರಡು ಇವೆ. ಗ್ರ್ಯಾಂಟ್ ಇನ್ ಏಡ್ ಹಾಸ್ಟಲ್ ಫಾರ್ ಷೆಡ್ಯೂಲ್ ಟ್ರೈಬ್ಸ್ 11 ಹಾಸ್ಟಲ್‌ಗಳಿವೆ. ಪ್ರೀಮೆಟ್ರಿಕ್ ಹಾಗೂ ಪೋಸ್ಟ್ ಮೆಟ್ರಿಕ್ ಸ್ಕಾಲರ್‌ಷಿಪ್ ಎಂದು 4575 ಮತ್ತು 7191 ವಿದ್ಯಾರ್ಥಿಗಳಿಗೆ ಕೊಡುತ್ತಿದ್ದೇವೆ. 19 ಲ್ಯಾಂಪ್ ಸೊಸೈಟಿಗಳಿವೆ. ಇದನ್ನು ಅಗ್ರಿಕಲ್ಚರ್ ಮಲ್ಟಿಪರ್ಪಸ್ ಕೋ ಆಪರೇಟಿವ್ ಸೊಸೈಟಿಗಳೆಂದು ಹೇಳುತ್ತಾರೆ. Functioning in the tribal area of mysore, Coorg, Dakshina Kannada and Chikmagalur districts. ಮೈಸೂರು, ಕೂರ್ಗ್, ದಕ್ಷಿಣಕನ್ನಡ ಜಿಲ್ಲೆ, ಚಿಕ್ಕಮಗಳೂರು, ಡಿಸ್ಟ್ರಿಕ್ಟ್‌ಗಳಲ್ಲಿ ಟ್ರೈಬಲ್ಸ್ ಎಲ್ಲಿರುತ್ತಾರೆ ಅಲ್ಲಿ 38 ಸಾವಿರ ಜನ ಟ್ರೈಬಲ್ಸ್ ಸದಸ್ಯರುಗಳಾಗಿ ಈ ಸೊಸೈಟಿಗಳಲ್ಲಿ ಎನ್‌ರೋಲ್ಡ್ ಆಗಿರುತ್ತಾರೆ. All the persons are engaged in the collection of minor forest produce. ಈಗ ನಾವು ಹೊಸದಾಗಿ ಕಾರ್ಯಕ್ರಮ ಹಾಕಿರುವುದೆಂದರೆ ಅವರಿಗೆ ಇನ್‌ಷೂರೆನ್ಸ್ ಪಾಲಿಸಿ ಮಾಡಿಸಬೇಕೆಂದು. ಹೆಣ್ಣು ಮಕ್ಕಳ ವಿದ್ಯಾಭ್ಯಾಸ ಸಲುವಾಗಿ ಪ್ರಾವಿಷನ್ ಮಾಡಬೇಕೆಂದೂ. ಮತ್ತು ಇನ್‌ಷೂರೆನ್ಸ್ ಸ್ಕೀಮ್ ಮಾಡಬೇಕೆಂದು ಇದ್ದೇವೆ. ಹೀಗೆ ಟ್ರೈಬಲ್ಸ್ ಜನರಿಗೆ ಎಲ್ಲಾ ರೀತಿಯ ಅನುಕೂಲತೆಗಳು, ಆಸ್ಪತ್ರೆಗಳು, ಡಾಕ್ಟರ್‌ಗಳು, ಆರೋಗ್ಯ ತಪಾಸಣೆ, ರಸ್ತೆಗಳು, ಕುಡಿಯುವ ನೀರಿನ ವ್ಯವಸ್ಥೆ ಅಂದರೆ ಎಲ್ಲಿ ನೀರು ಇಲ್ಲವೋ ಅಲ್ಲಿ ನೀರನ್ನು ಒದಗಿಸುವ ಪ್ರಯತ್ನ ಮಾಡುತ್ತಿದ್ದೇವೆ. ಹೀಗೆ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಮೈಸೂರಿನಲ್ಲಿ ಒಂದು ಸೆಮಿನಾರ್ ಮಾಡಬೇಕೆಂದು ಹೇಳಿ ನಾವು ಒಂದು ನಿರ್ಣಯ ಕೂಡ ಮಾಡಿದ್ದೇವೆ. ಸಂಬಂಧಪಟ್ಟ ಶಾಸಕರು ಮತ್ತು ಜಿಲ್ಲಾ ಮಂತ್ರಿಗಳು ಈ ಸೆಮಿನಾರ್‌ಗೆ ಬಂದರೆ ಒಳ್ಳೆಯದು. ಏಕೆಂದರೆ ಆ ಸೆಮಿನಾರ್‌ನಲ್ಲಿ ನಮ್ಮ ಪ್ಲಾನ್ ಏನಿದೆ, ಏನು ಪ್ರೋಗ್ರಾಮ್ ಇದೆ, ಏನು ಮಾಡುತ್ತೇವೆ ಎನ್ನುವುದೆಲ್ಲಾ ತಿಳಿಯಲು ಸಹಾಯವಾಗುತ್ತದೆ. ಮತ್ತು ಎಲ್ಲಿಗೆ ಬೇಕಾದರೂ ಸ್ಪಾಟ್ ಇನ್‌ಸ್ಪೆಕ್ಷನ್ ಮಾಡಬೇಕೆಂದರೆ ನಾನು ಬರಲು ಸಿದ್ಧನಿದ್ದೇನೆ. ಮಾನ್ಯ ಸದಸ್ಯರು ಇನ್ನು ಅನೇಕ ತೊಂದರೆಗಳ ಬಗ್ಗೆ ಹೇಳಿದ್ದಾರೆ. ಅದರ ಬಗ್ಗೆ ಅಧಿಕಾರಿಗಳ ಜೊತೆಯಲ್ಲಿ ಮಾತನಾಡಿ ಏನು ಪರಿಹಾರಬೇಕೋ ಅದನ್ನು ಮಾಡುತ್ತೇನೆಂದು ಹೇಳುತ್ತಾ ತಮ್ಮ ಅಪ್ಪಣೆಯನ್ನು ಪಡೆದು ಶಾಸಕರು ನಮ್ಮ ಇಲಾಖಾ ಬೇಡಿಕೆಗಳಿಗೆ ತಮ್ಮ ಒಪ್ಪಿಗೆಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು:- ನಾನು ಸದನದ ಸುತ್ತ ನೋಡಿದರೆ ಈ ಸಮಸ್ಯೆ ಬಹಳ ಬೇಗ ಬಗೆಹರಿಯುವುದಿಲ್ಲ. ಏತಕ್ಕೆಂದರೆ ನಿಮ್ಮ ಭಾಷಣ ಎಷ್ಟು ಸ್ವಾರಸ್ಯವಾಗಿತ್ತೆಂದರೆ ವಿವರಣೆಗಳನ್ನು ಅಪೇಕ್ಷೆ ಮಾಡಿ ನಾನು ಸದಸ್ಯರು ನನ್ನ ಗಮನ ಸೆಳೆಯುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಆದ್ದರಿಂದ ಮುಂದಿನ ವರ್ಷ ಬೇಕಾದರೆ ನೀವು ವಿವಣೆಗಳನ್ನು ನೀಡಬಹುದು.

ಶ್ರೀಮತಿ ಮೋಟಮ್ಮ:- ಮಾನ್ಯ ಮುಖ್ಯ ಮಂತ್ರಿಗಳು ಬಂದಿದ್ದಾರೆ, ನಿನ್ನೆ ನಾನು ಅವರಿಗೆ ಒಂದು ಸಲಹೆ ಮಾಡಿದ್ದೆ. ಏನೆಂದರೆ ಈ ಒಂದು ಇಲಾಖೆಗೆ ಯಾರೇ ಹರಿಜನ ಶಾಸಕರನ್ನು ಮಂತ್ರಿಯಾಗಿ ಮಾಡಬೇಡಿ,

ಇದನ್ನು ಮುಖ್ಯ ಮಂತ್ರಿಗಳೇ ಇಟ್ಟುಕೊಂಡು ಎಫೆಕ್ಟೀವ್ ಆಗಿ ನಡೆಸಿಕೊಂಡು ಹೋಗಬೇಕೆಂದು. ಇದನ್ನೇ ತಮ್ಮ ಮೂಲಕ ಅವರಲ್ಲಿ ಮತ್ತೊಮ್ಮೆ ಮನವಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು:- ಅವರು ಸದನದ ಮುಂದೆ ಒಂದು ಪ್ರಶ್ನೆ ಇಟ್ಟಿದ್ದಾರೆ, ಏನೆಂದರೆ ಅವರಿಗೆ ಬರತಕ್ಕ ಫಂಡ್ಸ್ 38 ಇಲಾಖೆಗಳ ಮೂಲಕ ವಿತರಣೆ ಆಗುತ್ತಿದೆ ಎಂದು. ಅದು ಅವರ ಕಷ್ಟ. ಅವರ ಕಷ್ಟವನ್ನು ನೀವು ಅರ್ಥ ಮಾಡಿಕೊಳ್ಳಬೇಕಾಗುತ್ತದೆ.

ಶ್ರೀಮತಿ ಮೋಟಮ್ಮ:- ಇಲಾಖೆಯಲ್ಲಿ ಹಣ ಖರ್ಚಾಗಿದೆಯೇ ಇಲ್ಲವೇ ಎಂಬುದನ್ನು ನೋಡಿಕೊಳ್ಳುವುದಕ್ಕೆ ಸೋಷಿಯಲ್ ವೆಲ್‌ಫೇರ್ ಆಫೀಸರ್ ಇದ್ದಾರೆ. ಜಾಯಿಂಟ್ ಡೈರೆಕ್ಟರ್ ಇದ್ದಾರ, ಸೆಕ್ರೇಟರಿ ಇದ್ದಾರೆ.

ಶ್ರೀ ಬಿ. ಶಿವಣ್ಣ:- ನಾನು ಮೀಟಿಂಗ್ಸ್ ಮಾಡಿದ್ದೇನೆ, ಇನ್ಸ್‌ಫೆಕ್ಷನ್ ಮಾಡಿದ್ದೇನೆ. ಆದರೂ ಕೂಡ ಎಷ್ಟು ಖರ್ಚಾಗಬೇಕು ಅಷ್ಟು ಆಗಿಲ್ಲ.

ಶ್ರೀ ಎಂ. ರಾಮಪ್ಪ:- ಶ್ರೀಮತಿ ಮೋಟಮ್ಮನವರು ಹೇಳಿದ ಹಾಗೆ ಅವರ ಜಾಗಕ್ಕೆ ಇನ್ನೊಬ್ಬರನ್ನು ಕೂರಿಸಿದರೆ ಹೇಗೆ ಆಗುತ್ತದೆ?

ಶ್ರೀಮತಿ ಮೋಟಮ್ಮ:- ಇದು ಬಹಳ ಮುಖ್ಯವಾದ ಖಾತೆ. ಬಹಳ ನೊಂದಿರತಕ್ಕ ಜನರಿಗೆ ಸಂಬಂಧಪಟ್ಟ ಇಲಾಖೆ. ಅದನ್ನು ಅವರೇ ಏತಕ್ಕೆ ಇಟ್ಟುಕೊಂಡು ನಡೆಸುತ್ತಾರೆ?

ಒಬ್ಬ ಮಾನ್ಯ ಸದಸ್ಯರು:- ಅವರನ್ನು ಬಿಟ್ಟು ಬೇರೆಯವರಿಗೆ ಕೊಡಿ ಎಂಬುದು ಸರಿಯಲ್ಲ. ಈ ಸದನದಲ್ಲಿ ಯಾರೂ ಸಹ ಎಲ್ಲರನ್ನೂ ಸರಿ ಮಾಡಿಕೊಂಡು ಹೋಗುವುದಕ್ಕೆ ಸಾಧ್ಯವಿಲ್ಲ.

ಶ್ರೀ ಹೆಚ್. ವಿಶ್ವನಾಥ್:- ಮಾನ್ಯ ಸಚಿವರು ಉತ್ತರದ ಉದ್ದಕ್ಕೂ ಬಹಳಷ್ಟು ವಿಚಾರಗಳನ್ನು ಹೇಳಿದ್ದಾರೆ. ಆದರೆ ರಾಜ್ಯದ ಶೇಕಡ 60 ಭಾಗ ಇರತಕ್ಕ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಬಗ್ಗೆಯಾಗಲಿ, ಹಿಂದುಳಿದ ವರ್ಗದ, ಅಲ್ಪ ಸಂಖ್ಯಾತರ ಮೀಸಲಾತಿ ಬಗ್ಗೆಯಾಗಲಿ, ಚಿನ್ನಪ್ಪರೆಡ್ಡಿ ವರದಿಯನ್ನು ಜಾರಿಗೆ ಕೊಡುವುದರ ಬಗ್ಗೆಯಾಗಲಿ ಚಕಾರ ಎತ್ತಿಲ್ಲ. ಇದು ನಮ್ಮ ದುರಾದೃಷ್ಟಕರ. ಹಿಂದುಳಿದ ವರ್ಗದ ಅಭಿವೃದ್ಧಿ ನಿಗಮಕ್ಕೆ ಹೋದ ಸಾರಿ ನಾಲ್ಕೂವರೆ ಕೋಟಿ ರೂಪಾಯಿ ಷೇರು ಬಂಡವಾಳ ಕೊಟ್ಟಿದ್ದೀರಿ, ಈ ಸಾರಿ ಎಷ್ಟು ಕೊಟ್ಟಿದ್ದೀರಿ? ಅದರಲ್ಲಿ ಎಷ್ಟು ಬಿಡುಗಡೆ ಆಗಿದೆ? ಎಷ್ಟು ಜನ ಫಲಾನುಭವಿಗಳನ್ನು ಗುರುತಿಸಿ ಸಹಾಯ ಮಾಡಿದ್ದೀರಿ? ಚಿನ್ನಪ್ಪ ರೆಡ್ಡಿ ವರದಿಯನ್ನು ಜಾರಿಗೆ ಕೊಡುವ ಬಗ್ಗೆ ಸಚಿವ ಸಂಪುಟದ ಸಮಿತಿ ವರದಿ ಕೊಟ್ಟಿದೆಯೇ? ಕೊಟ್ಟಿದ್ದರೆ ಅದನ್ನು ಯಾವಾಗ ಜಾರಿಗೆ ಕೊಡುತ್ತೀರಿ?

ಶ್ರೀ ಬಿ.ಶಿವಣ್ಣ:- ತಮಗೆ ಗೊತ್ತಿದೆ, ಹಾವನೂರ್ ಕಮಿಷನ್ ರಿಪೋರ್ಟ್ ಆದಮೇಲೆ ಸುಪ್ರೀಂ ಕೋರ್ಟಿನಲ್ಲಿ ಕರ್ನಾಟಕ ಗವರ್ನಮೆಂಟ್ ಅಂಡರ್ ಟೇಕಿಂಗ್ ಕೊಡುವ ಸಂದರ್ಭ ಬಂತು, ರಿಸರ್ವೇಷನ್ ಮಾಡುವುದು ಸರಿಯಲ್ಲ ಎಂದು. ನಂತರ ವೆಂಕಟಸ್ವಾಮಿ ಆಯೋಗ ಬಂತು. ಆ ವೆಂಕಟಸ್ವಾಮಿ ಕಮಿಟಿ ರಿಪೋರ್ಟನ್ನು ಒಪ್ಪಿಕೊಳ್ಳಲಿಲ್ಲ. ನಂತರ ಚಿನ್ನಪ್ಪ ರೆಡ್ಡಿಯವರು 1990ರಲ್ಲಿ ವರದಿ ಕೊಟ್ಟರು. ತರುವಾಯ ಸರ್ಕಾರ ಕ್ಯಾಬಿನೆಟ್ ಸಬ್ ಕಮಿಟಿ ಮಾಡಿತು. ಈಗ ಅದು ಪರಿಶೀಲನೆಯಲ್ಲಿದೆ. ಎರಡು ಮೂರು ಮೀಟಿಂಗ್ ಮಾಡಿದ್ದೇವೆ. ಈಗ ಮಂಡಲ್ ಕಮಿಷನ್ ರಿಪೋರ್ಟ್ ಸುಪ್ರೀಂ ಕೋರ್ಟಿನಲ್ಲಿದೆ. ಕೋರ್ಟಿನಲ್ಲಿರುವಾಗ ನಾವು ಡಿಶಿಷನ್ ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ. ಅವರ ಡಿಶಿಷನ್ ಅನ್ನು ಕಾದಿದ್ದೇವೆ. ಡಿಶಿಷನ್ ಬಂದ ಮೇಲೆ ಮುಖ್ಯ ಮಂತ್ರಿಗಳು ನಾವು ಕೂಡಿ ಯಾವ ರೀತಿ ಮಾಡಬೇಕೆಂದು ಒಂದು ನಿರ್ಣಯ ತೆಗೆದುಕೊಳ್ಳುತ್ತೇವೆ. ಒಟ್ಟಿನಲ್ಲಿ ಬ್ಯಾಕ್‌ವರ್ಡ್ ಕ್ಲಾಸ್‌ಗೆ ಅನ್ಯಾಯವಾಗದಂತೆ ನೋಡಿಕೊಳ್ಳುತ್ತೇವೆಂದು ಹೇಳಬಯಸುತ್ತೇನೆ. ಬ್ಯಾಕ್‌ವರ್ಡ್ ಕ್ಲಾಸಸ್, ಮೈನಾರಿಟಿ ಕಾರ್ಪೋರೇಷನ್‌ನಲ್ಲಿ ಸಾಕಷ್ಟು ಪ್ರೋಗ್ರಾಂಗಳನ್ನು ಹಾಕಿಕೊಂಡಿದ್ದೇವೆ. ಟೈಲರಿಂಗ್ ಟ್ರೈನಿಂಗ್ ಸೆಂಟರ್ ಎಂದು ಮಾಡಿದ್ದೇವೆ.

ಅಧ್ಯಕ್ಷರು:- ಅವರು ಹಣ ಎಷ್ಟು ಎಂದು ಕೇಳಿದ್ದಾರೆ.

ಶ್ರೀ ಬಿ. ಶಿವಣ್ಣ:- 42 ಕೋಟಿ 81 ಲಕ್ಷ ರೂಪಾಯಿಗಳನ್ನು ಈ ಬಡ್ಜಟ್ಟಿನಲ್ಲಿ ಇಟ್ಟಿದ್ದೇವೆ. 91-92ರಲ್ಲಿ 60 ಲಕ್ಷ ರೂಪಾಯಿಗಳನ್ನು ಈ ಕಾರ್ಪೋರೇಷನ್‌ಗೆ ಕೊಟ್ಟಿದ್ದೇವೆ. ಈ ಕಾರ್ಪೋರೇಶನ್‌ಗೆ ಸರ್ಕಾರದವರು 60 ಲಕ್ಷ ರೂಪಾಯಿ ರಿಲೀಸ್ ಮಾಡಿದ್ದಾರೆ.

ಶ್ರೀ ಎಚ್. ವಿಶ್ವನಾಥ್:- 420 ಲಕ್ಷ ರೂಪಾಯಿ ಎಂದು ಹೇಳಿ 60 ಲಕ್ಷ ರೂಪಾಯಿ ಮಾತ್ರ ಬಿಡುಗಡೆ ಆಗಿದೆ ಎಂದು ಹೇಳುತ್ತೀರಲ್ಲಾ. ಹಿಂದುಳಿದ ವರ್ಗದ ಜನರ ಬಗ್ಗೆ ನಿಮಗೆ ಸರಿಯಾದ ಅರಿವೇ ಇಲ್ಲ. ನೀವು ಅವರನ್ನು ನೋಡಿದ್ದೀರೊ ಇಲ್ಲವೋ ಗೊತ್ತಿಲ್ಲ.

ಶ್ರೀ ಬಿ.ಶಿವಣ್ಣ:- 1991-92ಕ್ಕೆ 80 ಲಕ್ಷ ರೂಪಾಯಿ ಈ ಕಾರ್ಪೋರೇಷನ್‌ಗೆ ಇದ್ದದ್ದು. ಅದರಲ್ಲಿ 60 ಲಕ್ಷ ರೂಪಾಯಿ ರಿಲೀಸ್ ಮಾಡಿದ್ದೇವೆ. ನಾಲ್ಕು ಕೋಟಿ ಅಲ್ಲ.

ಶ್ರೀ ಎಚ್. ವಿಶ್ವನಾಥ್:- 420 ಲಕ್ಷ ರೂಪಾಯಿ ಇಯರ್‌ಮಾರ್ಕ್ ಆಗಿದೆ. ಈ ಸದನದಲ್ಲಿ ಅದರ ಬಗ್ಗೆ ಈ ಸರ್ಕಾರವನ್ನು ಮನಸಾರೆ ಹೊಗಳಿದ್ದೇವೆ. ಹಿಂದುಳಿದವರ್ಗದ ಅಭಿವೃದ್ಧಿ ನಿಗಮಕ್ಕೆ 420 ಲಕ್ಷ ರೂಪಾಯಿ ಕೊಟ್ಟಿದ್ದೇವೆ ಎಂದು ಹೇಳಿದ್ದಕ್ಕೆ ಹೊಗಳಿದ್ದೇವೆ. ಏಕೆಂದರೆ ಕಳೆದ 12 ವರ್ಷದಿಂದ ಆ ನಿಗಮಕ್ಕೆ 300 ಲಕ್ಷ ರೂಪಾಯಿ ಷೇರು ಬಂಡವಾಳ ಕೊಡಬೇಕಾಗಿತ್ತು. ಇಲ್ಲಿಯವರೆಗೆ ಅದು 60 ಲಕ್ಷ ರೂಪಾಯಿ ದಾಟಿಲ್ಲ. ಆದ್ದರಿಂದ ಹೋದಸಾರಿ ನೀವು 420 ಲಕ್ಷ ರೂಪಾಯಿ ಎಂದು ಹೇಳಿದ್ದಕ್ಕೆ ಮನಸಾರೆ ಹೊಗಳಿದ್ದೇವೆ. ಆದರೆ ಈಗ 80 ಲಕ್ಷ ರೂಪಾಯಿ ಇಟ್ಟಿದೆ ಎಂದು ಹೇಳಿ 60ಲಕ್ಷ ರೂಪಾಯಿ ಬಿಡುಗಡೆಯಾಗಿದೆ ಎಂದು ಹೇಳುತ್ತೀರಿ. ಸರಿಯಾಗಿ ಓದಿ ಹೇಳಿ ಅದನ್ನು.

ಶ್ರೀ ಬಿ. ಎಚ್. ಲಕ್ಷ್ಮಣಯ್ಯ:- ಅಧ್ಯಕ್ಷರೇ. . . . .

ಅಧ್ಯಕ್ಷರು:- ಒಂದು ನಿಮಿಷ ಅವಕಾಶ ಮಾಡಿ ಕೊಡಿ ಅವರಿಗೆ.

ಶ್ರೀ ಬಿ. ಎಚ್. ಲಕ್ಷ್ಮಣಯ್ಯ:- ಮಾನ್ಯ ಅಧ್ಯಕ್ಷರೇ . . . . . .

ಅಧ್ಯಕ್ಷರು:- ವಿಶ್ವನಾಥ್ ಅವರಿಗೆ ಅಂಕಿ ಅಂಶ ಸಂಗ್ರಹಿಸಿ ಹೇಳುತ್ತಾರೆ.

ಶ್ರೀ ಎಚ್. ವಿಶ್ವನಾಥ್:- ಇದು ಬಹಳ ವಿಷಾದನೀಯ. ಸಂಪುಟ ದರ್ಜೆ ಸಚಿವರಿಗೆ ತಮ್ಮ ಇಲಾಖೆಯಲ್ಲಿ ಹಿಂದುಳಿದ ವರ್ಗ ಮತ್ತು ಅಲ್ಪ ಸಂಖ್ಯಾತರ ವಿಚಾರದಲ್ಲಿ ಎಷ್ಟು ಹಣ ಇಟ್ಟಿದ್ದಾರೆ ಎಂದು ಕೂಡ ಅರಿವಿಲ್ಲದೇ ಇರುವುದು ಬಹಳ ಶೋಚನೀಯ ಸ್ವಾಮಿ.

ಶ್ರೀ ಬಿ. ಹೆಚ್. ಲಕ್ಷ್ಮಣಯ್ಯ:- ಮಾನ್ಯ ಅಧ್ಯಕ್ಷರೇ, ಎಸ್.ಇ.ಪಿ. ಪ್ರೋಗ್ರಾಂ ಬಗ್ಗೆ ಮಾತನಾಡುತ್ತಾ ಮಾನ್ಯ ಮಂತ್ರಿಗಳು ಚೀಫ್ ಮಿನಿಸ್ಟರ್‌ಗೆ ಕಾಗದ ಬರೆದಿದ್ದೇನೆ, ಇತರೆ ಮಂತ್ರಿಗಳಿಗೆ ಕಾಗದ ಬರೆದಿದ್ದೇವೆ ಎಂದು ಹೇಳಿದರು. ಸ್ವಾಮಿ ಕ್ಯಾಬಿನೆಟ್ ಇದೆ. ಎಸ್.ಇ.ಪಿ. ಪ್ರೋಗ್ರಾಂನಲ್ಲಿ ಸರಿಯಾಗಿ ಹಣ ಖರ್ಚಾಗದೆ ಪ್ರತಿವರ್ಷ ಲ್ಯಾಪ್ಸ್ ಆಗುತ್ತಿದೆ. ಇದನ್ನು ತಡೆಗಟ್ಟುವುದಕ್ಕೆ ಒಂದೇ ಸಚಿವ ಖಾತೆಯಲ್ಲಿ ಎಂದರೆ ಸಮಾಜ ಕಲ್ಯಾಣ ಖಾತೆಯಲ್ಲಿ ಅದನ್ನು ಬೇರೆ ಇಲಾಖೆಗಳಿಗೆ ಹಂಚಿ ಖರ್ಚಾಯಿತೆ ಇಲ್ಲವೇ ಎಂಬ ಬಗ್ಗೆ ಸಮಾಜ ಕಲ್ಯಾಣ ಇಲಾಖೆಯವರು ವಿಚಾರ ಮಾಡಬಹುದು. ಕ್ಯಾಬಿನೆಟ್‌ನಲ್ಲಿ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತಂದು ಮಾಡಿಸಬಹುದು. ಅದರ ಜೊತೆಗೆ ಎರಡನೆಯದು, ದಿಲಗೂಲಿ ನೌಕರರ ಬಗ್ಗೆ ಸುಪ್ರೀಂ ಕೋರ್ಟ್ ಆದೇಶ ಕೊಟ್ಟಿದೆ. ಮತ್ತೆ ಡಿಪಿಎಆರ್ ನವರು ಸರ್ಕ್ಯುಲರ್ ಇಷ್ಯೂ ಮಾಡಿದ್ದಾರೆ. ಆದರೆ ಷೆಡ್ಯೂಲ್ಡ್ ಕ್ಯಾಸ್ಟ್‌ನಲ್ಲಿ ಬಹಳ ಜನರನ್ನು ಕೆಲಸಕ್ಕೆ ವಾಪಸ್ ತೆಗೆದುಕೊಂಡಿಲ್ಲ. ಇದರ ಬಗ್ಗೆ ಸಮಾಜ ಕಲ್ಯಾಣ ಇಲಾಖೆ ಏನು ಕೆಲಸ ಮಾಡಿದೆ? ಅವರನ್ನು ವಾಪಸ್ ತೆಗೆದುಕೊಳ್ಳಲು ಪ್ರಯತ್ನ ನಡೆಸಿದೆಯೆ? ಇದು ಅವರ ಜವಾಬ್ದಾರಿ ಅಲ್ಲವೆ?

ಶ್ರೀ ಬಿ. ಶಿವಣ್ಣ:- ಮಾನ್ಯ ಅಧ್ಯಕ್ಷರೆ, ರಿಸರ್ವೇಷನ್ಸ್ ಬಗ್ಗೆ ಯಾವ ಯಾವ ಇಲಾಖೆಗಳಲ್ಲಿ ಎಷ್ಟೆಷ್ಟು ಭರ್ತಿ ಆಗಿದೆ ಎಂಬ ಬಗ್ಗೆ ಅಂಕಿ ಅಂಶ ನೋಡಿ ಕ್ಯಾಬಿನೆಟ್‌ನಲ್ಲಿ ಒಂದುಡಿಸಿಷನ್ ತೆಗೆದುಕೊಂಡಿದ್ದೇವೆ. ಅದೇ

ಪ್ರಕಾರ ಬ್ಯಾಕ್‌ಲಾಗ್ ರಿಸರ್ವೇಷನ್ ಏನು ತುಂಬಬೇಕೋ ಆ ಪ್ರಕಾರ . . . .

(ಉಪಾಧ್ಯಕ್ಷಿಣಿಯವರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ಶ್ರೀ ಬಿ. ಎಚ್. ಲಕ್ಷ್ಮಣಯ್ಯ:- ದಿನಗೂಲಿ ನೌಕರರು.

ಶ್ರೀ ಬಿ. ಶಿವಣ್ಣ:- ಅದು ಲೇಬರ್ ಇಲಾಖೆಗೆ ಬರುತ್ತದೆ. ನನಗೆ ಬರುವುದಿಲ್ಲ.

ಶ್ರೀ ಬಿ. ಎಚ್. ಲಕ್ಷ್ಮಣಯ್ಯ:- ಅಲ್ಲ ಸ್ವಾಮಿ; ದಿನಗೂಲಿ ನೌಕರರ ಪೈಕಿ ಷೆಡ್ಯೂಲ್ಡ್ ಕ್ಯಾಸ್ಟ್ ಷೆಡ್ಯೂಲ್ಡ್ ಟ್ರೈಬ್‌ನವರು ಏನಿದ್ದಾರೆ, ಅವರನ್ನು ಮತ್ತೆ ಕೆಲಸಕ್ಕೆ ತೆಗೆದುಕೊಳ್ಳುತ್ತಿಲ್ಲ. ಬೇರೆಯವರಿಗೆ ಸುಪ್ರೀಂ ಕೋರ್ಟ್ ಆದೇಶದ ಮೇರೆಗೆ ಹೈಕೋರ್ಟ್ ಆದೇಶದ ಮೇರೆಗೆ ಡಿಪಿಎಆರ್ ಸರ್ಕ್ಯುಲರ್ ಮೇಲೆ ತೆಗೆದುಕೊಳ್ಳುತ್ತಿದ್ದಾರೆ. ಆದರೆ ಷೆಡ್ಯೂಲ್ಡ್ ಕ್ಯಾಸ್ಟ್ ಷೆಡ್ಯೂಲ್ಡ್ ಟ್ರೈಬ್‌ನವರನ್ನು ಕೈಬಿಟ್ಟಿದ್ದಾರೆ. ಇಂಥವರು ಯಾವ ಯಾವ ಇಲಾಖೆಯಲ್ಲಿ ಎಷ್ಟು ಜನರಿದ್ದಾರೆ? ಇನ್ನು ಏತಕ್ಕೆ ತೆಗೆದುಕೊಂಡಿಲ್ಲ ಎಂದು ತಾವೇನಾದರೂ ಸುತ್ತೋಲೆ ಕಳುಹಿಸಿ ಬೇರೆ ಮಂತ್ರಿಗಳ ಜೊತೆ ಚರ್ಚೆ ಮಾಡಿದ್ದೀರಾ? ಇವರನ್ನೂ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀ ಎಸ್. ಬಂಗಾರಪ್ಪ(ಸಭಾನಾಯಕರು):- ಮಾನ್ಯ ಸಭಾಧ್ಯಕ್ಷಿಯವರೆ, ದಿನಗೂಲಿ ನೌಕರರು ಏನಿದ್ದಾರೆ ಅವರನ್ನು ತೆಗೆದುಕೊಳ್ಳುವ ವಿಚಾರದಲ್ಲಿ ಕಟ್ ಆಫ್ ಡೇಟ್ ಸುಪ್ರೀಂ ಕೋರ್ಟ್ ಆರ್ಡರ್‌ಪ್ರಕಾರ 1984 ಯಾವುದೋ ಇದೆ; ಕೆಲವು ಷರತ್ತುಗಳನ್ನೂ ಅವರು ಹಾಕಿದ್ದಾರೆ. ಆ ರೀತಿ ಇರತಕ್ಕವರನ್ನು ತೆಗೆದುಕೊಳ್ಳಬೇಕೆಂದು ಅವರು ಹೇಳಿದ್ದಾರೆ.

ಇದರಲ್ಲಿ ಪರಿಶಿಷ್ಟ ಜಾತಿಯವರೂ ಬರುತ್ತಾರೆ, ಹಿಂದುಳಿದವರೂ ಬರುತ್ತಾರೆ. ಬೇರೆ ಬೇರೆ ಜಾತಿಯವರು, ಕ್ಯಾಟಗರಿ ಪ್ರಕಾರ ಬರುತ್ತಾರೆ. ಆ ರೀತಿಯಾಗಿ ನಾವು ಈಗಾಗಲೇ ತೆಗೆದುಕೊಳ್ಳತಕ್ಕ ಕಾರ್ಯಕ್ರಮ ಹಾಕಿದ್ದು ಡಿಪಿಎಂಆರ್ ಮುಖಾಂತರ ನಾವು ಆರ್ಡರ್ ಹೊರಡಿಸಿದ್ದೇವೆ. ಎಲ್ಲಾ ಇಲಾಖೆಯಲ್ಲಿ ಇದನ್ನು ಮಾಡುತ್ತಿದ್ದೇವೆ. ಮೊನ್ನೆ ಅಗ್ರಿಕಲ್ಚರ್ ಯೂನಿವರ್ಸಿಟಿ ಬಗ್ಗೆ ಕೂಡಾ ನಾವು ಕ್ಯಾಬಿನೆಟ್ ನಿರ್ಣಯ ಮಾಡಿದ್ದೇವೆ. ಅಲ್ಲೂ ಕೂಡ ಹರಿಜನರಾದಿಯಾಗಿ, ಎಲ್ಲರನ್ನೂ ಕನ್‌ಫರ್ಮ್ ಮಾಡಬೇಕೆಂದು ತೀರ್ಮಾನ ಮಾಡಿದ್ದೇವೆ. ಆದ್ದರಿಂದ ಮಾನ್ಯ ಸದಸ್ಯರು ಏನೂ ಯೋಚನೆ ಮಾಡಬೇಕಾಗಿಲ್ಲ. ಪರಿಶಿಷ್ಟ ಜಾತಿ ಹಾಗೂ ಪಂಗಡಗಳನ್ನೂ ಸೇರಿಸಿಕೊಂಡಹಾಗೆ ಖಾಯಂ ಮಾಡುವ ಕಾರ್ಯಕ್ರಮ ಹಾಕಿದ್ದೇವೆ. ಎಲ್ಲಾದರೂ ಯಾವುದೇ ಇಲಾಖೆಯಲ್ಲಿ ಸುಪ್ರೀಂ ಕೋರ್ಟ್ ತೀರ್ಮಾನದ ಪ್ರಕಾರ ಅದೂ ಕೂಡಾ ಬಿಟ್ಟುಹೋಗಿದ್ದರೆ ಅದನ್ನೂ ಸಹ ನೋಡಬೇಕೆಂದು ನಾವು ಈಗಾಗಲೇ ಡಿಪಿಎಆರ್ ಮೂಲಕ ಆದೇಶವನ್ನು ಕೊಟ್ಟಿದ್ದೇವೆ.

ಶ್ರೀ ಎಂ. ವಿ. ವೆಂಕಟಪ್ಪ:- ಡಾ|| ಅಂಬೇಡ್ಕರ್ ಶತಮಾನೋತ್ಸವ ಸಮಾರಂಭ ಮಾಡುವುದಕ್ಕೆ 1 ತಾಲ್ಲೂಕಿಗೆ 1 ಸಾವಿರದಂತೆ ಕಳುಹಿಸುತ್ತಾರೆಂದು ಗೊತ್ತಾಯಿತು. ಈ ಹಣ ಈವತ್ತು ಏನೇನೂ ಸಾಲದು. ಆ ಸಮಾರಂಭದಲ್ಲಿ ಮಕ್ಕಳಿಗೆ ಪೇಪರ್‌ಮೆಂಟ್ ಕೊಡಲೂ ಸಹ ಸಾಕಾಗುವುದಿಲ್ಲ. ಈ ಸಮಾರಂಭ ಮುಂದಿನ ತಿಂಗಳ 14ನೇ ತಾರೀಖು ಇದ್ದು ಇದಕ್ಕೆ 13ನೇ ತಾರೀಖು ಹಣವನ್ನು ಕಳುಹಿಸಿಕೊಡುತ್ತಾರೆ ಎಂದರೆ ಒಂದು ದಿವಸ ಮುಂಚೆ ಹಣ ಬರುತ್ತದೆ. ಈ ಏನು ಹಣ ನಿಗದಿ ಮಾಡಿದ್ದೀರೋ ಅದನ್ನು ಕನಿಷ್ಟ 5ರಿಂದ 10ಸಾವಿರದವರೆಗೆ ಏರಿಸಬೇಕು. ಮತ್ತು ಇದನ್ನು ಆದಷ್ಟು ಜಾಗ್ರತೆ ಬಿಡುಗಡೆ ಮಾಡಿ ಅಲ್ಲಿಗೆ ತಲುಪಿಸುವ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ:- ಡಾ|| ಅಂಬೇಡ್ಕರ್‌ರವರ ಶತಮಾನೋತ್ಸವ ಸಮಾರಂಭ ಆಚರಣೆ ಬಗ್ಗೆ ರಾಜ್ಯಮಟ್ಟದ ಒಂದು ಸಮಿತಿ ಕೂಡಾ ರಚಿಸಲಾಗಿದೆ. ಈ ಕಾರ್ಯಕ್ರಮದ ಆಚರಣೆ ಬಗ್ಗೆ ನಾವು ಒಟ್ಟು ಎಲ್ಲಾ ಇಲಾಖೆಯಲ್ಲಿ ಕೂಡ ಪೂಲ್ ಮಾಡಿದ್ದೇವೆ. ಸುಮಾರು 279 ಕೋಟಿ ರೂಪಾಯಿಗಳನ್ನು ನಾವು ತೆಗೆದುಕೊಂಡಿದ್ದೇವೆ. ತಾವು ಕೇಳತಕ್ಕದ್ದು ಅವರ ಜನ್ಮಶತಾಬ್ಧಿ ಸಮಾರಂಭದ ಸಲುವಾಗಿ ನಡೆಸತಕ್ಕ

ಕಾರ್ಯಕ್ರಮಗಳು ಏನಿವೆ ಅದಕ್ಕೆ ತಾಲ್ಲೂಕಿಗೆ 1 ಸಾವಿರ ರೂಪಾಯಿ ಎಂದು ಏನು ಕೇಳುತ್ತಿದ್ದೀರಿ ಅದು ಈಗ ನನ್ನ ನೆನಪಿಗೆ ಬರುತ್ತಿದೆ. ತಾವು ಈ ವಿಚಾರದ ಬಗ್ಗೆ ಗಮನಸೆಳೆದಿದ್ದಕ್ಕೆ ನಾನು ತಮ್ಮನ್ನು ಅಭಿನಂದಿಸುತ್ತೇವೆ. ಡಾ|| ಅಂಬೇಡ್ಕರ್ ಜನ್ಮಶತಾಬ್ದಿ ಸಲುವಾಗಿ 6 ಕೋಟಿ ರೂಪಾಯಿ ವೆಚ್ಚದಲ್ಲಿ ಒಂದು ಕಟ್ಟಡದ ನಿರ್ಮಾಣ ಮಾಡುವ ಕಾರ್ಯ ಹಾಕಿದ್ದು ಕೆಲಸ ಕಾರ್ಯ ಈಗಾಗಲೇ ನಡೆಯುತ್ತಿದೆ. ಅದೇ ರೀತಿ ಹಲವಾರು ಕಾರ್ಯಕ್ರಮಗಳನ್ನು ಪ್ರಚಾರದ ಸಲುವಾಗಿ, ಸಾಹಿತ್ಯ ಮತ್ತು ಸಂಶೋಧನೆ ಸಲುವಾಗಿ ಹಾಕಿದ್ದು ಆ ಬಗ್ಗೆ ಅದರಲ್ಲಿ ಒಂದು ವಿಂಗ್ ಕೂಡಾ ಹಾಕಿದ್ದೇವೆ. ಆ ಬಿಲ್ಡಿಂಗ್‌ನಲ್ಲಿ ಅದನ್ನು ಮಾಡುತ್ತಿದ್ದೇವೆ. ತಾವು ಕೇಳಿರತಕ್ಕ ವಿಚಾರ ಆ ಹಣ 1 ಸಾವಿರ ಕಡಿಮೆ ಇದೆ, 4-5 ಸಾವಿರ ಮಾಡಬೇಕು ಎಂಬ ಅಭಿಪ್ರಾಯ ತಮ್ಮದು ಇದೆ. ಎಲ್ಲಾ ಪಕ್ಷದವರು ಕೂಡ ಇರತಕ್ಕ ಒಂದು ಸಮಿತಿಯನ್ನು ಕೂಡಾ ನಾವು ಮಾಡಿದ್ದೇವೆ. ತಾವು ಒಳ್ಳೆಯ ಸಲಹೆ ಕೊಟಿದ್ದೀರಿ. ಕಾಲಕ್ಕೆ ಸರಿಯಾಗಿ ಹಣ ಕೊಡಬೇಕು, ಇದು ಒಳ್ಳೆಯ ಸಲಹೆ. ಈ ಬಗ್ಗೆ ಕೂಡಲೇ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಈಗಾಗಲೇ ನಾವು ತಿಳಿಸಿದ್ದೇವೆ. ಹಣವನ್ನು ಕಳುಹಿಸುವ ವಿಚಾರ ಮಾಡೋಣ.

ಶ್ರೀ ಎಂ. ವಿ. ವೆಂಕಟಪ್ಪ:- ಡಾ|| ಅಂಬೇಡ್ಕರ್‌ರವರ ಹೆಸರಿನಲ್ಲಿ ಭಾಗ್ಯಜ್ಯೋತಿಯನ್ನು ಒಂದೊಂದು ಕ್ಷೇತ್ರಕ್ಕೆ 1 ಸಾವಿರ ಕೊಡುವುದಾದರೆ ಸುಮಾರು 11 ಕೋಟಿ ರೂಪಾಯಿ ಖರ್ಚು ಬರಬಹುದು. ದಯವಿಟ್ಟು ಇದನ್ನು? ಮಾಡಬೇಕು.

ಶ್ರೀ ಎಸ್. ಬಂಗಾರಪ್ಪ:- ಅದೂ ಕೂಡಾ ಸಮಿತಿ ಮುಂದೆ ಬಂದಿತ್ತು. ಭಾಗ್ಯಜ್ಯೋತಿ ರೆಗ್ಯುಲರ್ ಸ್ಕೀಮ್ ಏನು ತೆಗೆದುಕೊಳ್ಳುತ್ತೇವೆ ಅದು ಸಾಲದು; ಅಂಬೇಡ್ಕರ್‌ರವರ ಜನ್ಮಶತಾಬ್ದಿ ವರ್ಷದಲ್ಲಿ ಜಾಸ್ತಿ ಮಾಡಬೇಕೆನ್ನುವ ವಿಚಾರ ಒಂದು ಚರ್ಚೆ ಮಾಡಿದ್ದೇವೆ. ಇದನ್ನು ಎನ್‌ಹ್ಯಾನ್ಸ್ ಮಾಡಬೇಕು, ಆದಷ್ಟು ಕವರ್ ಮಾಡಬೇಕೆಂದು ಇಟ್ಟುಕೊಂಡಿದ್ದೇವೆ. ಫಂಡ್ಸ್ ಹೇಗೆ ಅಡ್ಜಸ್ಟ್ ಮಾಡಬೇಕೆಂದು ಈಗಾಗಲೇ ಚರ್ಚೆ ಮಾಡಿ ಅಧಿಕಾರಿಗಳಿ ಆದೇಶ ಕೊಟ್ಟಿದ್ದೇವೆ. ಅದನ್ನು ಸರಿಪಡಿಸಬೇಕೆನ್ನುವ ವಿಚಾರವನ್ನು ತಿಳಿಸಿದ್ದೇವೆ.

ಶ್ರೀಮತಿ ದಮಯಂತಿ ಬೋರೇಗೌಡ:- ಹಿಂದೆ ಪರಿಶಿಷ್ಟಜಾತಿ ಹಾಗೂ ಪಂಗಡದವರಿಗೆ ಸಪರೇಟ್ ಶಾಲೆಗಳು ಇದ್ದವು. ಅದೇ ರೀತಿ ಅವರಿಗೆ ಸಪರೇಟ್ ಹಾಸ್ಟೆಲ್ ಕೊಡುವ ಬದಲು ಜನರಲ್ ಹಾಸ್ಟೆಲ್ ಏನಿವೆ ಅಲ್ಲಿ ಹೆಚ್ಚಿನ ಸೀಟ್ಸ್ ಇವರಿಗೆ ರಿಸರ್ವ್ ಮಾಡಿದರೆ ಕಾಲಕ್ಕೆ ಅನುಗುಣವಾಗಿ ಪ್ರಗತಿಪರವಾದ ಯೋಜನೆಯಾಗುತ್ತದೆಂದು ನನ್ನ ಅಭಿಪ್ರಾಯ.

ಶ್ರೀ ಬಿ. ಶಿವಣ್ಣ:- ಹಿಂದೆ 25 ಪರ್ಸೆಂಟ್ ಬ್ಯಾಕ್‌ವರ್ಡ್‌ಕ್ಲಾಸ್ ಹಾಸ್ಟೆಲ್‌ನಲ್ಲಿ ರಿಸರ್ವೇಷನ್ ಇತ್ತು. ತಾವು ಹೇಳಿದ ಸಲಹೆಗೆ ಖರ್ಚು ಬಹಳ ಬರುತ್ತದೆ. ಇದರಿಂದ ಫೈನಾನ್ಸ್‌ನಲ್ಲಿ ಸ್ವಲ್ಪ ತೊಂದರೆ ಬರುತ್ತದೆ. ಅದನ್ನು ಮುಂದೆ ನೋಡೋಣ.

ಶ್ರೀ ಎಂ. ಮುನಿಸ್ವಾಮಿ:- ಸಮಾಜ ಕಲ್ಯಾಣ ಸಚಿವರು ತಮ್ಮ ಉತ್ತರದಲ್ಲಿ ನನ್ನ ಕ್ಷೇತ್ರದಲ್ಲಿ ಇರತಕ್ಕ ಕೆಲವು ಹಾಸ್ಟೆಲುಗಳ ಬಗ್ಗೆ ಹಾಗೂ ಮಹಾತ್ಮಾಗಾಂಧಿ ರಸ್ತೆಯಲ್ಲಿರುವ ಹಾಸ್ಟೆಲು ಬಗ್ಗೆ ಏನೂ ತಿಳಿಸಿಲ್ಲ. ಇದರ ಬಗ್ಗೆ ಕಳೆದ ವರ್ಷ ಇದೇ ಬಡ್ಜೆಟ್ ಅಧಿವೇಶನದಲ್ಲಿ ನಾನು ಕೆಲವು ಸಲಹೆಗಳನ್ನು ಕೊಟ್ಟಿದ್ದೆ. ಹಾಸ್ಟಲ್‌ಗಳಲ್ಲಿರತಕ್ಕ ಮಕ್ಕಳಿಗೆ ಹಾಸಿಗೆಯಿಲ್ಲ. ಅವರಿಗೆ ಕೊಡತಕ್ಕ ಅನುದಾನ ಸಾಲುವುದಿಲ್ಲ. ಊಟದ ವ್ಯವಸ್ಥೆಗೆ ಸರಿಯಾಗಿ ಹಣ ಬರುತ್ತಿಲ್ಲವೆಂದು ನಾನು ನನ್ನ ಕ್ಷೇತ್ರದಲ್ಲಿರತಕ್ಕ ಮೂರು ಹಾಸ್ಟಲ್‌ಗಳ ಬಗ್ಗೆ ಹೇಳಿದ್ದೆ. ಅದರ ಬಗ್ಗೆ ಮಾನ್ಯ ಸಚಿವರು ಒಂದು ವಿಚಾರವನ್ನು ಸಹ ತಿಳಿಸಲಿಲ್ಲ. ಷೆಡ್ಯುಲ್ಡ್ ಕಾಸ್ಟ್‌ನವರ ವಿಚಾರ ಏನಿದೆ ಅದು ಇಡೀ ರಾಷ್ಟ್ರದಲ್ಲಿ ಬಹಳ ಗಂಭೀರವಾದ ಪ್ರಶ್ನೆಯಾಗಿರುವಾಗ ನಮ್ಮ ಸದನದಲ್ಲಿ ನಗತಕ್ಕ ಮಾತಾಗಿದೆ. ಅದನ್ನು ಶ್ರೀಮತಿ ಮೋಟಮ್ಮನವರು ತಮಗೆ ತಿಳಿಸಿದ್ದಾರೆ. ಇವತ್ತು ಮಾನ್ಯ ಮುಖ್ಯಮಂತ್ರಿಗಳು ಹರಿಜನ ಗಿರಿಜನರಿಗಾಗಿ ಹೆಚ್ಚಿನ ರೀತಿಯಲ್ಲಿ ಸೌಲಭ್ಯಗಳನ್ನು ಕೊಡಬೇಕೆಂದು ಕೊಟ್ಟಿರತಕ್ಕ ಹಣವನ್ನು ಸರಿಯಾಗಿ ಉಪಯೋಗಿಸದೆ ಅದನ್ನು ಲ್ಯಾಪ್ಸ್ ಮಾಡುವುದು ಬಹಳ ವಿಷಾದನೀಯವಾಗಿರತಕ್ಕ ಒಂದು ವಿಚಾರ. ಮಾನ್ಯ ಸಮಾಜ ಕಲ್ಯಾಣಮಂತ್ರಿಗಳು

ದಯಮಾಡಿ ಇನ್ನು ಮುಂದಾದರೂ ಗಮನಕ್ಕೆ ತೆಗೆದುಕೊಂಡು ಕೆಲಸ ಮಾಡಬೇಕು. ಇಲ್ಲದೇ ಹೋದರೆ ಶ್ರೀಮತಿ ಮೋಟಮ್ಮನವರು ಹೇಳಿದ ಹಾಗೆ ಈ ಇಲಾಖೆಯನ್ನು ಮಾನ್ಯ ಮುಖ್ಯಮಂತ್ರಿಗಳು ವಹಿಸಿಕೊಂಡರೆ ಆಗ ಮಾತ್ರ ಈ ಬಡ ಜನರಿಗೆ ಹರಿಜನ ಗಿರಿಜನರಿಗೆ ಒಳ್ಳೆಯ ಕೆಲಸವಾಗುತ್ತದೆಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಬಿ. ಶಿವಣ್ಣ:- ಮಾನ್ಯ ಉಪಾಧ್ಯಕ್ಷಿಣಿಯವರೆ, ಮಾನ್ಯ ಸದಸ್ಯರಾದ ಮುನಿಸ್ವಾಮಿಯವರು ತಮ್ಮ ಕ್ಷೇತ್ರದ ಹಾಸ್ಟಲ್‌ಗಳ ಬಗ್ಗೆ ಹೇಳಲಿಲ್ಲವೆಂದು ಹೇಳಿದರೂ ಪ್ರೀಮೆಟ್ರಿಕ್ ಹಾಸ್ಟಲ್‌ನಲ್ಲಿರತಕ್ಕ ಒಬ್ಬ ವಿದ್ಯಾರ್ಥಿಗೆ 150 ರೂಪಾಯಿ ಅನುದಾನ ಕೊಡುತ್ತವೆ. ಪೋಸ್ಟ್‌ಮೆಟ್ರಿಕ್ ಹಾಸ್ಟಲ್‌ನಲ್ಲಿರತಕ್ಕ ವಿದ್ಯಾರ್ಥಿಗೆ 200 ರೂಪಾಯಿ ಕೊಡುತ್ತಿದ್ದೇವೆ. ನಾನು ಮಾನ್ಯ ಮುಖ್ಯಮಂತ್ರಿಗಳ ಜೊತೆಯಲ್ಲಿ ಮಾತನಾಡಿದ್ದೇನೆ. ಬಹುಶಃ ನನಗನಿಸುತ್ತದೆ, ಮುಖ್ಯಮಂತ್ರಿಗಳು ಈ ಬಗ್ಗೆ ಒಂದು ತೀರ್ಮಾನ ತೆಗೆದುಕೊಂಡು ಈಗ ಹೇಳಬಹುದು. ಆದರೆ ಇದೇ ಕಾಲಕ್ಕೆ ಏನಪ್ಪ ಅಂದರೆ, ನಮ್ಮ ಆಹಾರ ಮಂತ್ರಿಗಳಿಗೆ ಅಭಿನಂದನೆಗಳನ್ನು ಸಲ್ಲಿಸಬೇಕಾಗುತ್ತದೆ. ಅವರು ನಮಗೆ ಗ್ರೀನ್‌ಕಾರ್ಡ್‌ಗೆ ಕೊಡುವ ರೇಟಿನಲ್ಲಿ ಕನ್ಸಿಷನ್ ರೇಟ್‌ನಲ್ಲಿ ಫುಡ್‌ಗ್ರೈನ್ಸ್ ಕೊಡುತ್ತಿದ್ದಾರೆ. ಹೀಗಾಗಿ ಮಾನ್ಯ ಮುಖ್ಯಮಂತ್ರಿಗಳಲ್ಲಿ ನಾನು ಕೇಳಿಕೊಳ್ಳುತ್ತೇನೆ ಮಕ್ಕಳಿಗೆ ಕೊಡತಕ್ಕ ಅನುದಾನವನ್ನು ಹೆಚ್ಚಿಗೆ ಮಾಡಬೇಕೆನ್ನುವ ಮನಸ್ಸು ಇದೆ, ಅವರು ಹೆಚ್ಚು ಮಾಡಬಹುದು. ಈ ಬಗ್ಗೆ ಯಾವ ಪ್ರಕಾರ ತೀರ್ಮಾನ ತೆಗೆದುಕೊಳ್ಳುತ್ತಾರೋ ಅದು ಅವರಿಗೆ ಬಿಟ್ಟಿದ್ದು. ಇನ್ನು ನಮ್ಮ ಇಲಾಖೆಯಲ್ಲಿ ಸಾಕಷ್ಟು ಕಾರ್ಯಕ್ರಮಗಳನ್ನು ಮಾಡಬೇಕಾಗಿದೆಯೆಂದು ಹೇಳಿದ್ದೇನೆ. ಅಲ್ಲಿ ಇಲ್ಲಿ ಎಲ್ಲಿಯಾದರೂ ಲ್ಯಾಪ್ಸಸ್ ಆಗಿದ್ದರೆ ಬಹುಶಃ ನನಗನಿಸುತ್ತದೆ ನಾವು ಮುಂದೆ ಬಹಳ ಎಫ್‌ಕ್ಟೀವ್ ಆಗಿ ಕೆಲಸ ಮಾಡುವುದಕ್ಕೆ ಸಾಧ್ಯ. ಆದರೆ ಒಂದು ವಾದವನ್ನು ಶ್ರೀಮತಿ ಮೋಟಮ್ಮನವರು ನಿನ್ನೆಯಿಂದ ಹೇಳುತ್ತಿದ್ದಾರೆ. ಈ ಇಲಾಖೆಯನ್ನು ಮಾನ್ಯ ಮುಖ್ಯಮಂತ್ರಿಗಳು ವಹಿಸಿಕೊಂಡರೆ ಒಳ್ಳೆಯದೆಂದು ಹೇಳುತ್ತಿದ್ದಾರೆ. ಹಾಗೆ ಮಾಡಿದರೆ ನನಗೆ ಬಹಳ ಸಂತೋಷವಾಗುತ್ತದೆ. ಏಕೆಂದರೆ ನಾನು ಒಬ್ಬ ಷೆಡ್ಯುಲ್ಡ್‌ಕಾಸ್ಟ್‌ನವ ಇದ್ದೇನೆ. ಬಹಳಷ್ಟು ಜನರಿಗೆ ಅದಕ್ಷತೆ ಮಿನಿಸ್ಟರ್, ಯೂಸ್‌ಲೆಸ್ ಮಿನಿಸ್ಟರ್ ಅನ್ನುವುದು ಸಾಬೀತು ಆದಹಾಗೆ ನನಗನಿಸುತ್ತಿದೆ. ಆದ್ದರಿಂದ ಈ ಖಾತೆಯನ್ನು ಮುಖ್ಯಮಂತ್ರಿಗಳಿಗೆ ಕೊಡಬೇಕೆನ್ನುವ ವಾದ ಮೋಟಮ್ಮನವರದ್ದು ಇದೆ. ಮಾನ್ಯ ಮುಖ್ಯಮಂತ್ರಿಗಳು ಇದ್ದಾಗ ಹೇಳಬೇಕೆಂದು ಇದ್ದೆ. ಬಹಳ ಸಂತೋಷ, ಈ ಇಲಾಖೆಯನ್ನು ಮುಖ್ಯಮಂತ್ರಿಗಳು ಮೊದಲು ವಹಿಸಿಕೊಳ್ಳುತ್ತಾ ಇದ್ದರು. ನನ್ನ ಕಾಲಕ್ಕೆ ಇವರುಗಳೆಲ್ಲಾ ಕೂಡಿ ಈ ಇಲಾಖೆ ಹೋಗಬೇಕೆಂದು ಹೇಳುತ್ತಿದ್ದಾರೆ. ನನಗೆ ಬಹಳ ಸಂತೋಷ, ನಾನು ಮುಖ್ಯಮಂತ್ರಿಗಳಲ್ಲಿ ರಿಕ್ವೆಸ್ಟ್ ಮಾಡುತ್ತೇನೆ. ಈ ಇಲಾಖೆಯನ್ನು ತಾವು ತಮ್ಮ ಹತ್ತಿರ ಇಟ್ಟುಕೊಂಡು ನಮಗೆ ಬಿಟ್ಟುಬಿಡಿರಿ. ಅದು ತಮಗೆ ಬಿಟ್ಟಿದ್ದು. ಅದು ಸೆಕೆಂಡರಿ. ಕೆಲಸ ಮಾಡಬೇಕು, ಶಕ್ತಿಮೀರಿ ಕೆಲಸ ಮಾಡೋಣವೆಂದು ಹೇಳುತ್ತಾ, ಏನು ಕುಂದುಕೊರತೆಗಳು ಇವೆ ಅವುಗಳನ್ನು ಸುಧಾರಿಸುವುದಕ್ಕೆ ಪ್ರಯತ್ನ ಮಾಡುತ್ತೇನೆಂದು ಹೇಳುತ್ತೇನೆ.

ಶ್ರೀ ಕೆ. ಬಿ. ಕೋಳಿವಾಡ:- ಮಾನ್ಯ ಉಪಾಧ್ಯಕ್ಷಣಿಯವರೇ,, ನಾನು ಕ್ರಿಯಾಲೋಪ ಎತ್ತುತ್ತೇನೆ. ಇಲ್ಲಿರುವ ಸದಸ್ಯರುಗಳ ಪೈಕಿ ಯಾರನ್ನೇ ಆಗಲಿ ಮಂತ್ರಿಗಳನ್ನಾಗಿ ತೆಗೆದುಕೊಳ್ಳತಕ್ಕ ಬಿಡತಕ್ಕ ಮತ್ತು ಪೋರ್ಟ್‌ಪೊಲಿಯೋ ಕೊಡತಕ್ಕ ಬಿಡತಕ್ಕ ಹಕ್ಕು ಮಾನ್ಯ ಮುಖ್ಯಮಂತ್ರಿಗಳಿಗೆ ಸಂಬಂಧಪಟ್ಟಿದ್ದು. It is the prerogative right of the Chief Minister. We are not entitled to talk about that in this House. It is my point of order.

ಶ್ರೀಮತಿ ಮೋಟಮ್ಮ:- ಇದರಲ್ಲಿ ಪಾಯಿಂಟ್ ಆಫ್ ಆರ್ಡರ್ ಪ್ರಶ್ನೆ ಬರಲಿಲ್ಲ.

ಶ್ರೀ ಬಿ. ಹೆಚ್. ಲಕ್ಷ್ಮಣಯ್ಯ:- ಹರಿಜನರ ಗಿರಿಜನರ ಉದ್ಧಾರ ಮತ್ತು ಏಳಿಗೆಯ ಬಗ್ಗೆ ಸಲಹೆ ಕೊಡುವಾಗ ಪಾಯಿಂಟ್ ಆಫ್ ಆರ್ಡರಾ?

ಶ್ರೀಮತಿ ಮೋಟಮ್ಮ:- ಸಮಾಜ ಕಲ್ಯಾಣ ಇಲಾಖೆಯಲ್ಲಿ ಸಮರ್ಪಕವಾದ

ಕೆಲಸವಾಗುತ್ತಿಲ್ಲವೆನ್ನುವುದು ಬಹಳ ವರ್ಷಗಳಿಂದ ಕಂಡುಬರುತ್ತಿದೆ. ಬಹಳ ವರ್ಷಗಳಿಂದ ಈ ಜನರ ಏಳಿಗೆಯಾಗುತ್ತಿಲ್ಲ. ಆದ್ದರಿಂದ ಮುಖ್ಯವಾದ ಖಾತೆಗಳನ್ನು ಮುಖ್ಯಮಂತ್ರಿಗಳ ಕೈಯಲ್ಲಿ ಇಟ್ಟುಕೊಂಡಿರುತ್ತಾರೆ. ಅದರಲ್ಲಿ ಸಮಾಜ ಕಲ್ಯಾಣ ಇಲಾಖೆಯನ್ನು ಅವರೇ ಇಟ್ಟುಕೊಂಡು ಏತಕ್ಕೆ ದಕ್ಷತೆಯಿಂದ ನಡೆಸಿಕೊಂಡು ಹೋಗಬಾರದು? ಮಾನ್ಯ ಮಂತ್ರಿಗಳಾದ ಶಿವಣ್ಣನವರು. ಇನ್‌ಎಫಿಷಿಯೆಂಟ್ ಎಂದು ನಾನು ಖಂಡಿತಾ ಹೇಳಲಿಲ್ಲ. ಅವರಿಗೆ ಬೇಕಾದರೆ ಮೇಜರ್ ಇಂಡಸ್ಟ್ರೀಯನ್ನೇ ಕೊಡಿ, ಇದಕ್ಕಿಂತ ಮುಖ್ಯವಾದ ಖಾತೆಗಳನ್ನೇ ಕೊಡಿ. ನಾನು ಸಂತೋಷ, ಪಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ:- ಈಗ ಸ್ವಲ್ಪ ತಾಳಿ. Better you put a full stop for a discussion of this type on the floor of the House. ಮಾನ್ಯ ಸದಸ್ಯರಾದ ಶ್ರೀಮತಿ ಮೋಟಮ್ಮನವರು ತಿಳಿಸಿದ್ದಾರೆ. ನನ್ನ ಇಂಟೆನ್ಸನ್ ಆ ರೀತಿ ಇಲ್ಲ. ಅವರು ಇನ್‌ಎಫಿಷಿಯೆಂಟ್‌ಎಂದು ನಾನು ಹೇಳಲಿಲ್ಲವೆಂದು ಅವರೇ ಹೇಳಿಬಿಟ್ಟಿದ್ದಾರೆ. ನಾನು ಹೇಳತಕ್ಕದ್ದು ಏನೂ ಉಳಿದಿಲ್ಲ. ಅದು ಇನ್ನು ವೇಗವಾಗಿ ಕೆಲಸ ನಡೆಯಲಿ ಎನ್ನುವ ಒಳ್ಳೆಯ ಅಭಿಪ್ರಾಯದಿಂದ ಅವರು ಹೇಳಿದ್ದಾರೆ. ಅದನ್ನು ಬಿಟ್ಟರೆ ಇನ್ನೇನೂ ಕಂಡಿಲ್ಲ. ದ್ವಂದ್ವದ ಅಭಿಪ್ರಾಯ ಬರುವ ರೀತಿಯಲ್ಲಿ ಬಂತು. ಅದಕ್ಕೆ ಅವರು ಹೇಳಿರತಕ್ಕದ್ದು ಸಾಕು. ಅದರ ವಿಚಾರ ಏನೇ ಇರಲಿ Everybody is efficient, Working actually heart to heart for the success of the department having in view the plight of the poor lot of the society. ಅದರ ಬಗ್ಗೆ ಮತ್ತೊಂದು ಏನೂ ಇಲ್ಲ. ಈ ವಿಚಾರವನ್ನು ಹೆಚ್ಚು ಚರ್ಚೆ ಮಾಡುವ ಅವಶ್ಯಕತೆ ಇಲ್ಲ. ಸಮಾಜ ಕಲ್ಯಾಣ ಇಲಾಖೆ ಏನಿದೆ ಅದು ನಿಮಗೆಲ್ಲರಿಗೂ ಗೊತ್ತಿರುವಹಾಗೆ. ಎಲ್ಲ ಇಲಾಖೆಗಳನ್ನು ಕೂಡ ಒಳಗೊಳ್ಳುತ್ತದೆ. ಎಲ್ಲ ಇಲಾಖೆಗಳನ್ನೂ ಎಫೆಕ್ಟ್ ಮಾಡತಕ್ಕಂಥ ಇಲಾಖೆ ಕೂಡ ಹೌದು. ಆದ್ದರಿಂದ ಇದಕ್ಕೆ ವೈದರ್‌ಸ್ಕೋಪ್ ಕೂಡ ಬರುತ್ತದೆ. ಆದ್ದರಿಂದ ಎಷ್ಟು ಚರ್ಚೆ ಮಾಡಿದರೂ ಕೂಡ ಮುಗಿಯುವುದಕ್ಕೆ ಸಾಧ್ಯವಿಲ್ಲದೇ ಇರುವ ಇಲಾಖೆ ಕೂಡ ಹೌದು. ತಾವು ಸಲಹೆಗಳನ್ನು ಕೊಟ್ಟಿದ್ದೀರಿ. The Hon. Members who have participated in the discussion ಏಕೆಂದರೆ ಕಾಲದ ಅಭಾವದಿಂದ ತಾವೆಲ್ಲರೂ ಚರ್ಚೆಯಲ್ಲಿ ಭಾಗವಹಿಸುವುದಕ್ಕೆ ಆಗಿಲ್ಲ. ಈಗಲ್ಲ, ಯಾವ ವರ್ಷವೂ ಅದು ಸಾಧ್ಯವಾಗುವುದಿಲ್ಲ. ಇದು ನಮ್ಮ ಅನುಭವದಲ್ಲಿರತಕ್ಕಂಥ ವಿಚಾರ. ಆದ್ದರಿಂದ ತಮ್ಮ ವಿಚಾರಗಳು ಏನಿವೆ ಅವನ್ನೆಲ್ಲಾ ಬರೆದು ಕಳಿಸಿಕೊಡಿ. ಮಾನ್ಯ ಸಚಿವರಿಗೆ ಬರೆದುಕೊಡಿ ಅಥವಾ ನನಗೆ ಕಳುಹಿಸಿಕೊಟ್ಟರೆ ಅದನ್ನು heart of heart ಗಮನದಲ್ಲಿಟ್ಟುಕೊಳ್ಳುತ್ತೇವೆ. ಇನ್ನೊಂದು ವಿಚಾರ ನನ್ನ ಗಮನಕ್ಕೆ ಬಂದಿರತಕ್ಕಂಥಾದ್ದು 1991-92ಕ್ಕೆ 80 ಲಕ್ಷ ರೂಪಾಯಿಗಳನ್ನು ನಾವು Minorites and Backward Classes Development Corporationಗೆ ಇಟ್ಟರೆ 1992-93ಗೆ it is hardly raised by Rs.5 lakhs. I think it is too meagre a sum. ಸಚಿವರು ಅವರು ಇದ್ದರೇನು, ನಾನು ಇದ್ದರೇನು? ಎಷ್ಟು ಜನರಿಗೆ ಸಹಾಯ ಮಾಡುವುದಕ್ಕೆ ಸಾಧ್ಯವಾಗುತ್ತದೆ? ತಮ್ಮ ಕಳಕಳಿ ನಮಗೆ ಅರ್ಥವಾಗುತ್ತಿದೆ. 80 ಲಕ್ಷದಿಂದ 85 ಲಕ್ಷ ಎಂದರೆ ಬರೇ 5 ಲಕ್ಷ ಜಾಸ್ತಿ ಮಾಡಿರುವುದು; ಇದು ಬಹಳ ಕಡಿಮೆಯಾಗುತ್ತದೆ. ಸಚಿವರಾಗಲೀ ಯಾರೇ ಆಗಲಿ ಇದರಲ್ಲಿ ಏನೂ ಮಾಡುವುದಕ್ಕೆ ಆಗುವುದಿಲ್ಲ ಎನ್ನುವುದು. ಈ ಮೈನಾರಿಟೀಸ್ ಮತ್ತು ಬ್ಯಾಕ್‌ವರ್ಡ್‌ಕ್ಲಾಸಸ್ ಬಗ್ಗೆ ಆಸಕ್ತಿ ಇದರಲ್ಲಿ ಇರುವುದರಿಂದ ನಾವು ಆರ್ಥಿಕ ಮಂತ್ರಿಯಾಗಿ ತಮ್ಮ ಅನುಮತಿ ಪಡೆದು ಹೇಳುತ್ತಿದ್ದೇನೆ. ಇದಕ್ಕೆ ಜಾಸ್ತಿ ಹಣ ಕೊಡುತ್ತೇನೆ. ಸ್ವಲ್ಪ ಜಾಸ್ತಿ ಹಣ ಕೂಡ ಕೊಡುತ್ತೇನೆ. ಅದು ಎಷ್ಟು ಎಂದು ತಕ್ಷಣ ಹೇಳುವುದಕ್ಕೆ ಬರುವುದಿಲ್ಲ. ಏಕೆಂದರೆ ಇದರಲ್ಲಿ ಹಣಕಾಸಿನ ವಿಚಾರ ಇರುವುದರಿಂದ ಅದನ್ನು ನೋಡಿ, ಚರ್ಚೆ ಮಾಡಿ ಕೊಡಬೇಕಾಗುತ್ತದೆ. ಮಾನ್ಯ ಸದಸ್ಯರ ಕಳಕಳಿಯನ್ನು ಗಮನದಲ್ಲಿಟ್ಟುಕೊಂಡು ಅದನ್ನು ಮಾಡತಕ್ಕಂಥ ಕೆಲಸವನ್ನು ಕೂಡ ಮಾಡುತ್ತೇನೆ. ಅಪ್ರೋಪ್ರಿಯೇಷನ್ ಬಿಲ್ 27ನೇ ತಾರೀಖಿಗೆ ಬರುತ್ತದೆ ಎಂದು ಕಾಣುತ್ತದೆ.

ಅದು ಬಂದಂಥ ಕಾಲದಲ್ಲಿ ಅದು ಎಷ್ಟು ಹಣ ಎಂದು ನಾನು ಹೇಳುತ್ತೇನೆ. ಆದ್ದರಿಂದ ಮಾನ್ಯ ಸದಸ್ಯರಿಗೆ ಏನು ಕಳಕಳಿ ಇದೆ, ಅದು ಈ ನನ್ನ ಉತ್ತರದಿಂದ ಅವರಿಗೆ ಸಮಾಧಾನವಾಗಬಹುದು ಎಂದು ನನ್ನ ವಿಚಾರ ಇದೂ ಅಲ್ಲದೆ ಇನ್ನೂ ಅನೇಕ ವಿಚಾರಗಳಿವೆ. ಎಲ್ಲವನ್ನೂ ಪ್ರಸ್ತಾಪ ಮಾಡಿ ಎಲ್ಲದಕ್ಕೂ ಉತ್ತರ ಕೊಡುವುದಕ್ಕೆ ಆಗುವುದಿಲ್ಲ. ದಯವಿಟ್ಟು ಅವುಗಳನ್ನು ಬರೆದು ಕಳಿಸಿಕೊಡಿ. ಅದರ ಬಗ್ಗೆ ಹೆಚ್ಚಿನ ಗಮನವನ್ನು ಮಾನ್ಯ ಸಚಿವರು ಕೊಡುತ್ತಾರೆ. ಮತ್ತು ನಾನು ಕೂಡ ಗಮನ ಕೊಡುತ್ತೇನೆ. ಇನ್ನು ಇದು ಸಾಕು. ಇನ್ನು voting for the demandsಗೆ ಹೊರಟುಹೋಗೋಣ. ಬೇರೆ ಕೂಡ ಇಷ್ಟೇ ಪ್ರಾಮುಖ್ಯವಾದ ಇಲಾಖೆಗಳು ಇವೆ. ಆದ್ದರಿಂದ ಇಷ್ಟು ಹೇಳಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಉಪಾಧ್ಯಕ್ಷಿಣಿಯವರು:- ನಾನು ಪ್ರಸ್ತಾಪವನ್ನು ಈಗ ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾಪವೇನೆಂದರೆ :31-3-1993ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬೇಡಿಕೆಯ ಸಂಖ್ಯೆ 28, 24, 52, 58ಮತ್ತು 59ಕ್ಕೆ ಸಂಬಂಧಿಸಿದಂತೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ಬೇಡಿಕೆಗಳ ಪಟ್ಟಿಯಲ್ಲಿರುವ ಮೊತ್ತಕ್ಕೆ ಮೀರದ ಮೊಬಲಗುಗಳನ್ನು ಮಂಜೂರು ಮಾಡಬೇಕು. "

ಪ್ರಸ್ತಾಪವನ್ನು ಅಂಗೀಕರಿಸಲಾಯಿತು ಮತ್ತು ಬೇಡಿಕೆಗಳನ್ನು ಮಂಜೂರು ಮಾಡಲಾಯಿತು.

(ಮಾನ್ಯ ಉಪಾಧ್ಯಕ್ಷಿಣಿಯವರ ಆದೇಶದ ಮೇರೆಗೆ ಮಂಜೂರಾದ ಬೇಡಿಕೆಗಳನ್ನು ಈ ಕೆಳಗೆ ನಮೂದಿಸಲಾಗಿದೆ.)

ಅಭಿಯಾಚನೆ ಕ್ರಮಾಂಕ 24- ವಾಹನ ತೆರಿಗೆ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1993ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವಾಹನ ತೆರಿಗೆಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 11,37,05,000ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು"

ಅಭಿಯಾಚನೆ ಕ್ರಮಾಂಕ 28- ರಸ್ತೆ ಸಾರಿಗೆ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1993ರಂದು ಕೊನೆಗಳ್ಳುವ ಆರ್ಥಿಕ ವರ್ಷದಲ್ಲಿ ರಸ್ತೆ ಸಾರಿಗೆಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 50,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 10,00,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು"

ಅಭಿಯಾಚನೆ ಕ್ರಮಾಂಕ 52- ವಕ್ಫ್

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1993ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವಕ್ಫ್‌ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 1,50,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು"

ಅಭಿಯಾಜನೆ ಕ್ರಮಾಂಕ 58- ಹರಿಜನ, ಗಿರಿಜನ ಮತ್ತು ಹಿಂದುಳಿದ ವರ್ಗದವರ ಕಲ್ಯಾಣ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1993ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಹರಿಜನ ಗಿರಿಜನ ಮತ್ತು ಹಿಂದುಳಿದ ವರ್ಗದವರ ಕಲ್ಯಾಣಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 143,63,97,000ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 5,05,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು"

ಅಭಿಯಾಚನೆ ಕ್ರಮಾಂಕ 59- ಮಹಿಳಾ ಮತ್ತು ಮಕ್ಕಳ ಕಲ್ಯಾಣ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1993ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ

ಮಹಿಳಾ ಮತ್ತು ಮಕ್ಕಳ ಕಲ್ಯಾಣಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 152,50,27,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 2,00,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು"

ಉಪಾಧ್ಯಕ್ಷಿಣಿಯವರು:- ಈಗ ಪ್ರಶ್ನೋತ್ತರಗಳು

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು.

ವಿಷಯ:- ನಂಜನಗೂಡು ದಳವಾಯಿ ಹಿರಿಯ ಪ್ರಾಥಮಿಕ ಶಾಲೆ ಬಗ್ಗೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 421 (2311)

ಶ್ರೀ ಎಂ.ಮಹದೇವ (ನಂಜನಗೂಡು):- ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

(ಅ) ನಂಜನಗೂಡು ದಳವಾಯಿ ಹಿರಿಯ ಪ್ರಾಥಮಿಕ ಶಾಲೆಯು 100 ವರ್ಷಗಳಷ್ಟು ಹಳೆಯದಾಗಿದ್ದು ಇದನ್ನು 1984-85ನೇ ಸಾಲಿನಲ್ಲಿ ಕೆಡವಲಾಗಿರುವುದು ನಿಜವೇ?

(ಆ) ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದ ವಿದ್ಯಾರ್ಥಿಗಳು ಮುರ್ನಾಲ್ಕು ಶಾಲೆಗಳಿಗೆ ವರ್ಗಾವಣೆಯಾಗಿ ತೊಂದರೆ ಪಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ.

(ಇ) ಕಟ್ಟಡ ನಿರ್ಮಾಣವನ್ನು ಶೀಘ್ರದಲ್ಲಿಯೇ ಮುಗಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

(ಈ) ಸದರಿ ಕಾಮಗಾರಿಗೆ ನಿಗದಿತ ಅನುದಾನ ನೀಡಿದೆಯೇ ಇಲ್ಲದಿದ್ದಲ್ಲಿ ನೀಡಲಾಗುವುದೇ?

ಶ್ರೀ ಎಂ.ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು)

(ಅ) ಹೌದು

(ಆ) ಹೌದು

(ಇ) ಈ ಕಟ್ಟಡ ನಿರ್ಮಾಣಕ್ಕೆ 1992-93ರಲ್ಲಿ ರೂ. 10.00 ಲಕ್ಷಗಳ ಅನುದಾನವನ್ನು ಒದಗಿಸಿಕೊಂಡು ಪೂರ್ಣಗೊಳಿಸಲು ಸೂಕ್ತ ಕ್ರಮವನ್ನು ತೆಗೆದುಕೊಳ್ಳಲಾಗುವುದು.

(ಈ) ಈವರೆಗೆ ಈ ಕಟ್ಟಡದ ಬಗ್ಗೆ ಅನುದಾನವನ್ನು ನೀಡಿರುವುದಿಲ್ಲ. ಈಗ ಈ ಕಟ್ಟಡಕ್ಕಾಗಿ 1992-93ರ ಆಯವ್ಯಯದಲ್ಲಿ ರೂ. 10.00 ಲಕ್ಷಗಳನ್ನು ಒದಗಿಸಲು ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಎಂ. ಮಹದೇವ್:- ಮಾನ್ಯ ಉಪಾಧ್ಯಕ್ಷರೇ, ನಂಜನಗೂಡಿನಲ್ಲಿರುವ ದಳವಾಯಿ ಕಟ್ಟಡ ಸುಮಾರು ನೂರು ವರ್ಷಗಳಷ್ಟು ಹಳೆಯದು. ಅದು ಬಹಳ ದೊಡ್ಡದಾದ ಕಟ್ಟಡ. ಆ ಕಟ್ಟಡವನ್ನು ಕೆಡವಿ ಇಲ್ಲಿಯ ತನಕ ಏಳು ವರ್ಷವಾಗಿದೆ. ಆ ಶಾಲೆಯಲ್ಲಿ ಸುಮಾರು ಎರಡು ಸಾವಿರ ಮಕ್ಕಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಕಳೆದ ಏಳು ವರ್ಷಗಳಿಂದ ಕಟ್ಟಡವನ್ನು ಕೆಡವಿರುವುದರಿಂದ ಆ ಮಕ್ಕಳಿಗೆ ಸ್ಥಳಾವಕಾಶ ಇಲ್ಲ. ಅವರು ಈಗ ಬೀದಿಯಲ್ಲಿ ಓದುವಂಥ ಪರಿಸ್ಥಿತಿ ಬಂದಿದೆ. ಮತ್ತೆ, ಅಲ್ಲಿ ಕಟ್ಟಡವನ್ನು ಕೆಡವುವಂಥ ಕಾಲದಲ್ಲಿ ಸುಮಾರು ಹತ್ತು-ಹದಿನೈದು ಲಕ್ಷ ರೂಪಾಯಿಗಳಷ್ಟು ಸಾಮಗ್ರಿಗಳು ಇದ್ದವು. ಆ ಸಾಮಗ್ರಿಗಳ ದುರುಪಯೋಗವಾಗಿದೆ. ಸರ್ಕಾರ ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದೆ? ಕಟ್ಟಡ ಕೆಡವಿದಂಥ ಕಾಲದಲ್ಲಿ ಹತ್ತು-ಹದಿನೈದು ಲಕ್ಷ ರೂಪಾಯಿ ಬೆಲೆಬಾಳುವ ಟೀಕ್ ಮತ್ತು ಬೀಟೆ ಮರಗಳ ಸಾಮಗ್ರಿಗಳಿದ್ದವು. ಅದರಲ್ಲಿ 50 ಸಾವಿರ ರೂಪಾಯಿಗಳ ಸಾಮಗ್ರಿಗಳು ಇಲ್ಲ. ಕಟ್ಟಡದಲ್ಲಿದ್ದಂಥ ಸಾಮಾನುಗಳನ್ನು ಅಧಿಕಾರಿಗಳು ತಮ್ಮ ಮನೆಕಟ್ಟಲಿಕ್ಕೆ ಉಪಯೋಗಿಸಿಕೊಂಡಿದ್ದಾರೆ. ಇವತ್ತು ಸಾಮಾನ್ಯವಾಗಿ ಒಂದು ಶಾಲೆ ಕಟ್ಟಡ ಕಟ್ಟಬೇಕಾದರೆ ಡೊನೇಷನ್ ಕೊಟ್ಟು ಸಹಾಯ ಮಾಡುತ್ತಾರೆ. ಆದರೆ ಕಟ್ಟಡವನ್ನು ಕೆಡವಿದಾಗ ಅಲ್ಲಿದ್ದ ಸಾಮಾನುಗಳನ್ನು